OFFICIAL RESOLUTION RE CHANGING THE NAME OF THE STATE AS "KARNATAKA".

ಶ್ರೀ ಡಿ. ದೇವರಾಜ್ ಅರಸ್ :—(ಮುಖ್ಯ ಮಂತ್ರಿಗಳು)

ನಾನು ಈ ಕೆಳಗೆ ಕಂಡ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು "ಕರ್ನಾಟಕ" ವೆಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದು ಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ".

ಅಧ್ಯಕ್ಷರು : ಮಂಡಿಸಿದ ನಿರ್ಣಯ ಈ ರೀತಿ ಇದೆ :—

"ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು "ಕರ್ನಾಟಕ" ವೆಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದು ಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ".

‡ಶ್ರೀ ದೇವರಾಜ್ ಅರಸ್ :—ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ನಮ್ಮ ದೇಶದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಗತಕ್ಕಂಥ ದಿನಸವಾಗಿದೆ. ಆದರ ಕಾರಣ ಏನು ಎನ್ನುವುದು ಈ ಸಭೆಗೆ ವಿವರಿಸಿ ತಿಳಿಸಬೇಕಾದ ಅಗತ್ಯವಿಲ್ಲ. ನಮ್ಮ ದೇಶದ ದಾರ್ಶನಿಕರು, ಮಹರ್ಷಿಗಳು, ತತ್ವಜ್ಞಾನಿಗಳು ಎಲ್ಲರೂ ಕಾಲವನ್ನು ಚಕ್ರಕ್ಕೆ ಹೋಲಿಸಿ ಇಟ್ಟಿದ್ದಾರೆ. ಚಕ್ರ ಹೇಗೆ ಒಂದೇ ಸಮನೆ ತಿರುಗುತ್ತೋ ಹಾಗೆ ತಿರುಗಿದಾಗ ಅದರಲ್ಲಿರತಕ್ಕಂಥ ಚಕ್ರಕ್ಕೆ ಜೋಡಿಸಿರತಕ್ಕಂಥ ಕಾಲುಗಳು ಹೇಗೆ ಕೆಳಗಿನಿಂದ ಮೇಲೆ, ಮೇಲಿನಿಂದ ಕೆಳಕ್ಕೆ ತಿರುಗಿ ಹೋಗುತ್ತಾ ಬದಲಾವಣೆಯಾಗುತ್ತೋ ಹಾಗೆ ದೇಶದ ಎಲ್ಲಾ ವಿದ್ಯಮಾನಗಳು ಕಾಲಚಕ್ರದಂತೆ ಯುಗಯುಗಕ್ಕೂ ತಿರುಗುತ್ತಾ ಬದಲಾವಣೆ ಹೊಂದುತ್ತಾ ಇರುತ್ತವೆ. ಈ ಬದಲಾವಣೆಯು ಪ್ರಕೃತಿಯಲ್ಲಿ ಕೂಡಿರತಕ್ಕಂಥ ಮತ್ತು ಅದರ ಜೊತೆಯಲ್ಲಿ ಬಂದಿರತಕ್ಕಂಥ ಒಂದು ಗುಣ. ಈ ಕಾಲಚಕ್ರದ ತಿರುಗುವಿಕೆಯನ್ನು ಯಾರಿಂದಲೂ ತಡೆದು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಅದು ಅವ್ಯಾಹತ ವಾಗಿ ತಿರುಗುತ್ತಾ ಇರುತ್ತದೆ. ಈ ಒಂದು ನಿಯಾಮಕದ ಪ್ರಕಾರ ಮಾನವನ ಇತಿಹಾಸದಲ್ಲಿ ಹಾಗೂ ಇಡೀ ಭೂಮಂಡಲದ ಇತಿಹಾಸದಲ್ಲಿ ಬದಲಾವಣೆಗಳು ಆಗುತ್ತಾ ಬಂದಿದ್ದಾವೆ. ಚಕ್ರದೋಪಾದಿಯಲ್ಲಿ ಹುಟ್ಟಿದ್ದಾವೆ. ಆ ರೀತಿ ಕೆಲವು ಕಾಲ ಉಚ್ಛ ಸ್ಥಿತಿಗೆ ಬಂದು ಮತ್ತೆ ಕೆಲವು ಕಾಲ ಅವನತಿ ಹೊಂದುತ್ತವೆ. ಒಂದು ಸಂಸ್ಥೆ/ಅಥವಾ ಒಂದು ರಾಜ್ಯ ಅಥವಾ ಒಂದು ವ್ಯಕ್ತಿ ಎಲ್ಲರೂ ಕೂಡ ಕಾಲಚಕ್ರದ ಹಾಗೆ, ಆ ಕಾಲ ಚಕ್ರದನೀತಿ ಒಂದೇ ರೀತಿಯಾಗಿ ಅವೆಲ್ಲಕ್ಕೂ ಅನ್ವಯಿಸುತ್ತಾ ಬಂದಿವೆ. ಅದೇ ರೀತಿಯಾಗಿ ತತ್ವಗಳಿಗೂ ಹುಟ್ಟು ಇರುವಿಕೆ ಮತ್ತು ಅವಸಾನ ಇರುತ್ತದೆ ಎನ್ನುವುದನ್ನು ದೊಡ್ಡವರು ಜ್ಞಾನಿಗಳು ಹೇಳಿದ್ದಾರೆ. ನಾವು ಎಷ್ಟೋ ತತ್ವಗಳನ್ನು, ವಿಚಾರಗಳನ್ನೂ ಸಾರುತ್ತಾ ಇದ್ದೇವೆ. ಉದಾಹರಣೆಗೆ ಸಮಾಜವಾದ ಹೇಳುತ್ತೇವೆ, ಕಮ್ಯೂನಿಸಂ ಎಂದು ಹೇಳುತ್ತೇವೆ. ಪ್ರಜಾಪ್ರಭುತ್ವವೆಂದು ಹೇಳುತ್ತೇವೆ, ರಾಜತ್ವವೆಂದು ಹೇಳುತ್ತೇವೆ. ಈ ಎಲ್ಲ ಸಾಮಾಜಿಕ ಕ್ಷೇತ್ರದಲ್ಲಾಗಲೀ, ಆರ್ಥಿಕ ಕ್ಷೇತ್ರದಲ್ಲಾಗಲೀ ರಾಜಕೀಯ ಕ್ಷೇತ್ರದಲ್ಲಾಗಲೀ, ಈ ಎಲ್ಲ ತತ್ವಗಳು ನಮ್ಮ ದಾರ್ಶನಿಕರ ದೃಷ್ಟಿಯಲ್ಲಿ ಒಂದಲ್ಲ ಒಂದು ಕಾಲದಲ್ಲಿ ಯಾವುದೇ ಪ್ರಮಾಣದಲ್ಲಾದರೂ ಈ ಪ್ರಪಂಚದ ಅಥವಾ ಮಾನವನ ಇತಿಹಾಸದಲ್ಲಿ ಹುಟ್ಟಿದ್ದಾವೆ, ಕೆಲವು ಕಾಲ ಸ್ಥಿತಿಯಲ್ಲಿದ್ದಾವೆ ತದನಂತರ ಅವಸಾನವನ್ನು ಪಡೆದಿದ್ದಾವೆ. ಹಾಗೆಂದಮೇಲೆ ನಾನು ಮೊದಲೇ ತಿಳಿಸಿದ ಹಾಗೆ ವ್ಯಕ್ತಿಗಾಗಲೀ, ಸಂಸ್ಥೆಗಾಗಲೀ ಈ ಮೂರೂ ಅವಸ್ಥಾ ಭೇದಗಳಿವೆ. ಅದೇ ರೀತಿಯಾಗಿ ಒಂದು ರಾಜ್ಯಕ್ಕೂ ಇದೆ.

ಸ್ವಾತಂತ್ರ್ಯ ನಮ್ಮ ದೇಶಕ್ಕೆ ಬಂದ ಮೇಲೆ ದೇಶದಲ್ಲಿ ಪುನರ್ವಿಂಗಡನೆ ಆಗಬೇಕು ಎನ್ನುವ ವಿಚಾರ ಬಂತು. ಬ್ರಿಟಿಷರ ಕಾಲದಲ್ಲಿ ರಾಜ್ಯಗಳ ವಿಂಗಡಣೆ ಯಾವರೀತಿ ಆಗಿತ್ತೋ ಅದು ಒಂದು ಗೊತ್ತಾದ, ಜನರಿಗು ಉಪಯುಕ್ತವಾದಂಥ, ವ್ಯವಹಾರಕ್ಕೆ ಹೊಂದಿಕೊಂಡು ಹೋಗತಕ್ಕಂಥ ಇತಿಹಾಸ ಅಥವಾ ಸಿದ್ಧಾಂತದ ಮೇಲೆ ಆಗಿರಲಿಲ್ಲ. ಇದು ಬ್ರಿಟಿಷರ ಸಾಮ್ರಾಜ್ಯ ಪ್ರಬಲವಾಗಿ ನಡೆದುಕೊಂಡು ಹೋಗುವ ದೃಷ್ಟಿಯಿಂದ ಮಾತ್ರ ಈ ವಿಭಜನೆ ಅಥವಾ ವಿಂಗಡಣೆ ಇತ್ತು. ಅದು ಸ್ವಾತಂತ್ರ್ಯನಂತರ ಜನ ಸಾಮಾನ್ಯರ ಮತ್ತು ಪ್ರಜಾಸತ್ತೆ ಪುಷ್ಟಿಯಾಗಿ ಬೆಳೆಯುವ ದೃಷ್ಟಿಯಿಂದ ಮತ್ತು ವ್ಯವಹಾರ, ಜನತೆಯದು ಮತ್ತು ಸರ್ಕಾರದ್ದು ಸುಗಮವಾಗಿ ನಡೆಯುವ ದೃಷ್ಟಿಯಿಂದ ಈ ದೇಶ ಮತ್ತೆ ನಮ್ಮ ಭಾಷೆ ಮತ್ತು ಭೂ

ಶಾಸ್ತ್ರಕ್ಕೆ ಸಂಬಂಧಪಟ್ಟಂಥ ಕೆಲವು ಗುಣಗಳು ಇವುಗಳನ್ನನುಸರಿಸಿ ಪುನರ್ವಿಂಗಡಣೆಯಾಗಬೇಕು ಎಂದು ಜನತೆಯ ಅಭಿಪ್ರಾಯ ಬಂದು ಅದರ ಪ್ರಕಾರ ನಮ್ಮ ಇಂಡಿಯಾ ದೇಶದ ಅನೇಕ ರಾಜ್ಯಗಳು ಬೇರೆ ಬೇರೆ ರೂಪವನ್ನೇ ವಿಂಗಡಣೆಯ ಪರಿಣಾಮವಾಗಿ ಪಡೆದುವು. ಇವರ ನಿಮಿತ್ತ ನಮ್ಮ ಈ ರಾಜ್ಯವೂ ಕೂಡ ಒಂದು ದೊಡ್ಡ ಬದಲಾವಣೆಯನ್ನು ಹೊಂದಿದೆ. ಈ ಬದಲಾವಣೆ ಏನೆಂದರೆ ಮೈಸೂರು ರಾಜ್ಯ ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಇದ್ದಂಥದ್ದು, ರಾಜರ ಆಳ್ವಿಕೆಯಲ್ಲಿ ಇದ್ದಂಥ ರಾಜ್ಯ, 1956ನೇ ಇಸವಿಯಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಪ್ರಕಾರ ಇದು ದೊಡ್ಡದಾಗಿ ವಿಸ್ತಾರಗೊಂಡಿತು. ಹಿಂದಿನಿಂದ ಬಂದಿದ್ದ ರಾಜ್ಯದ ಜೊತೆಗೆ ಒಂದೇ ಭಾಷೆ ಮಾತನಾಡತಕ್ಕ ಕನ್ನಡ ಜನ ಬೇರೆ ಬೇರೆ ಭಾಗಗಳಲ್ಲಿ ಹರಿದು ಹಂಚಿ ಹೋಗಿದ್ದರೋ ಆ ಜನರೆಲ್ಲ ಒಂದೇ ರಾಜ್ಯದಲ್ಲಿ ಕೂಡಿಕೊಂಡು ಒಂದು ವ್ಯವಸ್ಥೆ ಮೂಡಿಬಂತು. ನಮ್ಮ ಕರಾವಳಿ ಪ್ರದೇಶದಲ್ಲಿದ್ದ ಕನ್ನಡ ಜನ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಭಾಗಗಳ ಜನ ಎಲ್ಲ ಕೂಡಿದರು. ಅದೇ ರೀತಿಯಾಗಿ ಬೊಂಬಾಯಿ ಪ್ರಾಂತದ ಜನರು ನಾವು ಸರ್ವೇ ಸಾಧಾರಣವಾಗಿ ಅವರನ್ನು ಬೊಂಬಾಯಿ ಕರ್ನಾಟಕದವರು ಎಂದು ಏನು ಹೇಳುತ್ತೇವೆ ಆ ನಾಲ್ಕು ಜಿಲ್ಲೆಯ ಎಂದರೆ ಧಾರವಾಡ ಬೆಳಗಾಂ, ಬಿಜಾಪುರ ಮತ್ತು ಕಾರವಾರ, ಈ ಜನರೂ ಒಟ್ಟಾಗಿ ಬಂದರು. ಅದೇ ರೀತಿಯಾಗಿ ಹೈದರಾಬಾದು ಕರ್ಣಾಟಕದ ಬಿದರೆ, ಗುಲ್ಬರ್ಗ ರಾಯಚೂರು ಜಿಲ್ಲೆಯವರೂ ಬಂದು ಸೇರಿದರು. ಇದಕ್ಕಿಂತ ಸ್ವಲ್ಪ ಪೂರ್ವಭಾವಿಯಾಗಿ ಬಳ್ಳಾರಿ ಜಿಲ್ಲೆ ನಮಗೆ ಬಂದು ಸೇರಿತ್ತು. ಅದೇ ರೀತಿಯಾಗಿ ಕನ್ನಡ ನಾಡಾದ ಕೊಡಗು ಜಿಲ್ಲೆ ನಮ್ಮ ರಾಜ್ಯದಲ್ಲಿ ಬಂದು ಸೇರಿತು. ಎಲ್ಲಗೂ ಒಟ್ಟಾಗಿ ಸೇರಿ ಒಂದು ಹೊಸ ಮೈಸೂರು ರಾಜ್ಯ ಎಂದು ಮಾಡಿದರು.

ಈ ಮೈಸೂರು ಹೊಸದಾಗಿ ರಾಜ್ಯ ಎಂದಾದ ಮೇಲೆ ಅಥವಾ ಇದು ವಿಶಾಲ ಮೈಸೂರು ಆದ ಮೇಲೆ ಈ ರಾಜ್ಯದ ಹೆಸರು ಹಿಂದಿನಿಂದ ಬಂದಂಥ ಹೆಸರು ಇರಬೇಕೇ ಅಥವಾ ಇಷ್ಟೊಂದು ಭಾಗಗಳೆಲ್ಲ, ಹಿಂದೆ ಇದ್ದಂಥ ರಾಜ್ಯದಷ್ಟೇ ಹೆಚ್ಚು ಭಾಗಗಳು ಇಲ್ಲಿ ಬಂದು ಸೇರಿದ ಮೇಲೆ. ಈ ಎಲ್ಲ ಜನರೂ ಒಂದೇ ಆದ ಮೇಲೆ ಒಂದೇ ಭಾಷೆಯ ಜನರಾದ ಮೇಲೆ ಈ ಬದಲಾವಣೆ ಹೆಸರಿನಲ್ಲಿ ಮಾಡಬೇಕೆಂಬ ವಿಚಾರ ನಮ್ಮ ಇಡೀ ರಾಜ್ಯದ ಜನತೆಯ ಮನಸ್ಸನ್ನು ಸೆಳೆದು ಆ ಒಂದು ವಿಷಯ ಇದುವರೆಗೂ ಇತ್ಯರ್ಥವಾಗದೆ ಹಾಗೆಯೇ ವಿಚಾರದಲ್ಲಿಯೇ ಉಳಿದು ಬಂದಿದೆ. ಈ ವಿಚಾರವನ್ನು ನಾನು ಹೇಳುವಾಗ ಈಗ ಇರತಕ್ಕ ಹೆಸರು ಅದೇ ಏಕೆ ಇರಬಾರದು, ಎನ್ನುವ ಒಂದು ಮಾತೂ ಇದೆ. ಬದಲಾಯಿಸಬೇಕು ಎಂದು ಯಾರು ಹೇಳುತ್ತಿದ್ದಾರೆ ಎನ್ನುವ ಮಾತು ಇದೆ. ಇದರ ಚರಿತ್ರೆ ಬಹಳ ಹಿಂದಿನಿಂದಲೂ ಇದೆ. ನಮ್ಮ ಮೈಸೂರು ವಿಶಾಲವಾಗುವುದಕ್ಕೆ ಪೂರ್ವಭಾವಿಯಾಗಿ ಕೂಡ ಈ ಹೆಸರು ಯಾವುದು ಇರಬೇಕು, ಮುಂದೆ ವಿಶಾಲವಾದ ಮೇಲೆ, ಹರಿದು ಹಂಚಿಹೋಗಿದ್ದ ಭಾಗಗಳು ಒಟ್ಟಾಗಿ ಸೇರಿದ ಮೇಲೆ ಹೆಸರು ಯಾವುದು ಇರಬೇಕು ಎನ್ನುವ ಮಾತನ್ನು ಎಲ್ಲ ರಾಜಕೀಯ ಸಂಸ್ಥೆಯವರೂ ಚರ್ಚೆ ಮಾಡಿದ್ದಾರೆ, ಹೆಚ್ಚಾಗಿ ಕಾಂಗ್ರೆಸ್ ಪಕ್ಷದಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆ ನಡೆದು ಒಂದೊಂದು ಸಂದರ್ಭದಲ್ಲಿ ನಿರ್ಣಯವನ್ನು ಮಾಡಿಕೊಂಡು ಬಂದಿದ್ದಾರೆ. ಮೈಸೂರು ವಿಶಾಲವಾಗುವ ಕಾಲದಲ್ಲಿ ಹೆಸರಿನ ಬದಲಾವಣೆ ಮಾಡುವುದು ನಿಲ್ಲುವುದಕ್ಕೆ ಒಂದು ಕಾರಣವಿತ್ತು. ಅದು ರಾಜಕೀಯ ಕಾರಣವೂ ಹೌದು, ಮತ್ತೆ ಸನ್ನಿವೇಶದ ಒತ್ತಡವೂ ಹೌದು. ಆಗಿನ ಕಾಲದಲ್ಲಿ ಭಾಷೆಯ ಆಧಾರದ ಮೇಲೆ ರಾಜ್ಯ ಪುನರ್ವಿಂಗಡಣೆ ಮಾಡಬೇಕು ದೊಡ್ಡ ದೊಡ್ಡ ನಾಯಕರೇ ಎನ್ನುವ ವಿಷಯದಲ್ಲಿ ಅನೇಕ ಸಂದರ್ಭಗಳಲ್ಲಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿಕೊಂಡು ಬಂದರು. ಅನೇಕರು ಈ ಭಾಷೆಯ ಆಧಾರದ ಮೇಲೆ ರಾಜ್ಯ ಪುನರ್ವಿಂಗಡಣೆ ಮಾಡತಕ್ಕದ್ದು ಅಷ್ಟು ಶಾಸ್ತ್ರೀಯವಲ್ಲ ಎನ್ನುವುದನ್ನು ಕೂಡ ಹೇಳಿದ್ದರು. ಅಷ್ಟೇ ಪ್ರಬಲವಾಗಿ ಪುನರ್ವಿಂಗಡಣೆಯನ್ನು ಮುಖ್ಯವಾಗಿ ಭಾಷೆಯನ್ನು ಆಧಾರವಾಗಿಟ್ಟು ಮಾಡಬೇಕು ಎನ್ನುವ ವಾದ ಸಹ ಬರುತ್ತಿತ್ತು. ದೊಡ್ಡ ದೊಡ್ಡ ನಾಯಕರ ಬಾಯಿಂದ, ಹಿಂದೆ ಚಿಕ್ಕದಾಗಿದ್ದ ಮೈಸೂರು ರಾಜ್ಯದಲ್ಲಿ ಕೂಡ ಇದು ವಿಶಾಲವಾಗಬೇಕೇ, ಬೇಡವೇ ಎನ್ನುವುದರಲ್ಲಿ ಅಭಿಪ್ರಾಯ ಭೇದವಿತ್ತು. ಈ ಅಭಿಪ್ರಾಯ ಭೇದ ಕೊನೆಯವರೆಗೂ ಉಳಿದುಬಂತು.

ಈ ಸಂದರ್ಭದಲ್ಲಿ ಬಹುಭಾಗದ ಜನ ಯಾವ ರೀತಿ ಹೇಳುತ್ತಿದ್ದರು, ಅದು ಮುಖ್ಯವಲ್ಲ. ಅದಕ್ಕೆ ವಿರೋಧ ಇದ್ದಂಥ ಜನರ ಸಂಖ್ಯೆ ಕಡಿಮೆ ಇದ್ದರೂ ಒಂದು ಪ್ರಬಲವಾದ ವಿರೋಧವಿತ್ತು ಎಂದು ನನಗೆ ಗೊತ್ತು. ನಾನು ಆ ಕಾಲದಲ್ಲಿ ರಾಜ್ಯ ಎರಡು ಆಗಬೇಕು ಒಂದು ಆಡಳಿತ ದೃಷ್ಟಿಯಿಂದ, ಶಾಸ್ತ್ರೀಯ ದೃಷ್ಟಿಯಿಂದ ಎಂದು ಹೇಳುವುದರಲ್ಲಿ ನಾನೂ ಒಬ್ಬನಾಗಿದ್ದೆ. ಆ ಕಾಲದಲ್ಲಿ ಬಹುಮತ ಅಭಿಪ್ರಾಯದಿಂದ ರಾಜ್ಯ ವಿಶಾಲವಾಗತಕ್ಕದ್ದು ಮೇಲು, ಎರಡು ರಾಜ್ಯ ಮಾಡತಕ್ಕದ್ದು ಅಷ್ಟು ಯುಕ್ತವಲ್ಲ, ನಮ್ಮ ಕನ್ನಡ ಜನತೆಯ ದೃಷ್ಟಿಯಿಂದ ಅವರ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಅವರ ಭಾಷೈಕ್ಯತೆಯ ದೃಷ್ಟಿಯಿಂದ ಸಂಸ್ಕೃತಿ ಬೆಳವಣಿಗೆಯ ದೃಷ್ಟಿಯಿಂದ ಎರಡು ರಾಜ್ಯ ಆಗತಕ್ಕಂಥಾದ್ದು ಸಾಧುವಲ್ಲ ಎನ್ನುವ ಅಭಿಪ್ರಾಯವನ್ನು ಬಹು ಜನರು ತೀರ್ಮಾನ ಮಾಡಿದರು. ಆ ತೀರ್ಮಾನಕ್ಕೆ ತಲೆಬಾಗಿ ನಾನೂ ಕೂಡ ನನ್ನ ಅಭಿಪ್ರಾಯ ಬೇರೆ ಇದ್ದರೂ, ಅದನ್ನು ಒಪ್ಪಿ ನಡೆದುಕೊಂಡು ಬಂದಿರತಕ್ಕಂಥ ಕೆಲವರಲ್ಲಿ

(ಶ್ರೀ ದೇವರಾಜ್ ಅರಸ್)

ನಾನೂ ಒಬ್ಬ. ಆ ಕಾಲದಲ್ಲಿ ಅಭಿಪ್ರಾಯ ಇಷ್ಟೊಂದು ತೀವ್ರವಾಗಿ ಬದಲಾವಣೆಯಾಗುವುದಕ್ಕೆ ವ್ಯತಿರಿಕ್ತವಾಗಿದ್ದಾಗ, ಆಗಿನ ಕಾಲದ ರಾಜಕಾರಣಗಳು ಮುಖಂಡರುಗಳು, ಈ ಹೆಸರಿನ ಬದಲಾವಣೆಯ ವಿಚಾರದಲ್ಲಿ ಸ್ವಲ್ಪ ನಿಧಾನವಾಗಿ ಹೆಜ್ಜೆ ಇಡೋಣ ಎಂದು ಹೇಳಿ, ಅದನ್ನು ಅಲ್ಲಿಗೆ ಕೈಬಿಟ್ಟರು. ಮೊದಲು ಕನ್ನಡಜನ ಎಲ್ಲಾ ಒಂದು ಕಡೆ ಸೇರೋಣ, ಈ ಒಂದು ಕಾರ್ಯ ಮುಖ್ಯವಾದುದು, ಅದು ಆಗಲೀ, ತದನಂತರ ಹೆಸರಿನ ಬದಲಾವಣೆಯ ಬಗ್ಗೆ ನಾವು ನಿಧಾನವಾಗಿ ಯೋಚನೆ ಮಾಡಿ, ಇತರರು ಇದನ್ನು ಮನ ಒಲಿದು ಒಪ್ಪುವ ರೀತಿ ಮಾಡಿ ಬದಲಾಯಿಸೋಣ ಎಂದು ಅದನ್ನು ಹಾಗೇ ಇಟ್ಟುಕೊಂಡರು. ೧೯೬೬ನೇ ಇಸವಿಯಿಂದ ಈಚೆಗೆ ಹೆಸರಿನ ಬದಲಾವಣೆಯ ಬಗ್ಗೆ ಇದೇ ಶಾಸನ ಸಭೆಯಲ್ಲಿ ಅನೇಕ ವೇಳೆ ಠರಾವುಗಳು ಬಂದು ಚರ್ಚೆ ಆಗಿದ್ದಾವೆ, ೧೯೬೭ನೆಯ ಚುನಾವಣೆ ನಡೆದ ಮೇಲೆ ಒಂದು ಸಾರಿ ಈ ಸಭೆಯಲ್ಲಿ ಠರಾವು ಬಂದು ತಿಂಗಳ ತಿಂಗಳ ಗಟ್ಟಲೆ ಚರ್ಚೆ ನಡೆಯಿತು. ಆದರೂ ಅಂತ್ಯ ತೀರ್ಮಾನ ಆಗದೆ ಹಾಗೆಯೇ ಉಳಿಯಿತು. ಅದಕ್ಕೂ ಹಿಂದೆಯೂ ಕೂಡ ಈ ಠರಾವು ಸಭೆಗೆ ಬಂದಿತ್ತು. ಆಗಲೂ ಕೂಡ ಯಾವ ತೀರ್ಮಾನವೂ ಬರಲಿಲ್ಲ. ಶಾಸನಸಭೆ ಅಥವಾ ಆಡಳಿತ ನಡೆಸುತ್ತಾ ಇದ್ದಂಥ ಪಕ್ಷ ಯಾವ ರೀತಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ. ಎಂದು ಹೇಳಿದಾಗ, ಈ ವಿಷಯಕ್ಕೆ ವಿರಾಮವಿರುವುದಿಲ್ಲ. ಜನತೆ ಒಂದು ಕಡೆ ಹೆಸರು ಬದಲಾವಣೆ ಆಗಬೇಕು ಎಂದು ಇಚ್ಛೆಪಡುತ್ತಾ ಬಂದಿದ್ದರೆ ಶಾಸನ ಸಭೆಯ ಆಡಳಿತ ಪಕ್ಷದವರು ಇದನ್ನು ಮುಂದೂಡಿಕೊಂಡು ಬಂದಿದ್ದಾರೆ, ಇಂಥ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಕೆಲವು ವರ್ಷಗಳವರೆಗೆ ನಡೆದು ಬಂತು.

೧೯೬೭ನೇ ಮಹಾ ಚುನಾವಣೆಗಿಂತ ಮುಂಚೆ, ಇದೇ ಶಾಸನಸಭೆಯಲ್ಲಿ ಈ ಠರಾವನ್ನು ಮಂಡಿಸಿ, ಚರ್ಚೆಗೆ ಬಂತು. ಹೆಸರು ಕರ್ನಾಟಕ ಆಗಬೇಕು ಎಂದು ಬಂದಂಥ ಠರಾವು ಚರ್ಚೆಯಲ್ಲಿ ಮುಕ್ತಾಯವಾಯಿತು. ಆಗ ನಾನು ಈ ಸಭೆಯ ಶಾಸಕನಾಗಿದ್ದೆ. ಅಷ್ಟೇ ಅಲ್ಲದೆ, ಆಗಿನ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಒಬ್ಬ ಮಂತ್ರಿಯೂ ಆಗಿದ್ದವನು. ಆಗ ನಡೆದಂಥ ಕೆಲವು ಪ್ರಕರಣಗಳನ್ನು ತಮ್ಮ ಅಪ್ಪಣೆ ಪಡೆದು ಈ ಸಂದರ್ಭದಲ್ಲಿ ಸ್ಮರಿಸಿದರೆ ತಪ್ಪಾಗಲಾರದು. ತಮ್ಮಗೆ ಗೊತ್ತಿರುವ ಹಾಗೆ, ನನಗೆ ತಿಳಿದಿರುವ ಹಾಗೆ, ಯಾವ ಒಂದು ಪಕ್ಷ ಬಹುಮತ ಪಡೆದು ಆಡಳಿತ ನಡೆಸುತ್ತಿದೆಯೋ, ಆ ಪಕ್ಷ ಮನಸ್ಸು ಮಾಡದೆ ಹೋದರೆ, ಇದು ಕಾರ್ಯಗತವಾಗುವುದಕ್ಕೆ ಸಾಧ್ಯವಿರಲಿಲ್ಲ. ಆಗಿನ ಆಡಳಿತಪಕ್ಷವಾಗಿದ್ದಂಥ, ಕಾಂಗ್ರೆಸ್ ಪಕ್ಷ ಈ ವಿಚಾರವನ್ನು ತೆಗೆದುಕೊಂಡು ಬಹಳ ಚರ್ಚೆ ನಡೆಸಿತು. ಆ ಚರ್ಚೆಯಲ್ಲಿ ಉದ್ಭವಿಸಿದಂಥ ವಿಷಯಗಳು ಏನೆಂದರೆ, ಹೆಸರಿನ ಬಗ್ಗೆ ಯಾವ ಹೆಸರು ಇಡಬೇಕು, ಅನ್ನುವುದರಲ್ಲಿ ಅಭಿಪ್ರಾಯ ಭೇದ ಬಂತು. "ಕರ್ನಾಟಕ' ಎಂದು ಹೆಸರು ಇಡಬೇಕೇ, ''ಮೈಸೂರು-ಕರ್ನಾಟಕ" ಎಂದು ಇಡಬೇಕೇ ''ಮೈಸೂರು ಕನ್ನಡ ನಾಡು" ಎಂದು ಇಡಬೇಕೇ, ಎಂದು ಹೇಳಿ ಆ ಪಕ್ಷದಲ್ಲಿ ಚರ್ಚೆ ಬಹಳವಾಗಿ ಬೆಳೆದು, ಎಲ್ಲರನ್ನೂ ಸೇರಿಸಿ ಒಂದು ಕಾಜಿ ನ್ಯಾಯ ಆದ ಹಾಗೆ ಆಯಿತು. "ಮೈಸೂರು ಕನ್ನಡ ನಾಡು'', ಎಂದು ಇಡೋಣ ಎಂದು ಕೆಲವರು. ನನಗೆ ಜ್ಞಾಪಕವಿರುವ ಹಾಗೆ ಇದೇ ಒಂದು ಅಂತ್ಯ ತೀರ್ಮಾನವಾಗಿ ಬಂತು. ಆಗ ನಾನು ಮಾತ್ರ ನಮ್ಮ ಪಕ್ಷದ ಸಭೆಯಲ್ಲಿ ಹೇಳಿದೆ, ಈ ವಿಚಾರದಲ್ಲಿ ನನ್ನ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೀವು ಅವಕಾಶ ಕೊಡಬೇಕು ಎಂದು. ಅದೇ ರೀತಿ ಪಕ್ಷ ತೀರ್ಮಾನ ಮಾಡಿತು. ನನ್ನ ಸ್ವಾತಂತ್ರ್ಯವನ್ನು ಸಭೆಯಲ್ಲಿ ಉಪಯೋಗ ಮಾಡಿ, ಇಲ್ಲಿ ಠರಾವು ಈಗ ತರುವುದು ಸರಿಯಲ್ಲ ಎಂದು ಹೇಳಿ ಪ್ರಬಲವಾದ ವಾದಮಾಡಿದೆ. ಇದು ಈಗ ಕೈಬಿಡಬೇಕು, ಇದನ್ನು ತೆಗೆದುಕೊಳ್ಳುವ ಕಾಲ ಈಗ ಅಲ್ಲ ಎಂದು ಹೇಳಿದವನು ನಾನು. ಕಾರಣಾಂತರದಿಂದ ಆ ಸಭೆಯಲ್ಲಿ ಚರ್ಚೆ ಮುಂದುವರೆಯಲಿಲ್ಲ, ಅಥವಾ ಒಂದು ಅಂತ್ಯ ತೀರ್ಮಾನಕ್ಕೂ ಬರಲಿಲ್ಲ. ಹಾಗೆ ಕೈಬಿಟ್ಟುಕೊಂಡು ಇಲ್ಲಿಗೆ ನಿಲ್ಲಿಸಿದ್ದ ವಿಚಾರ. ಇದು ಮತ್ತೆ ೧೯೬೭ನೇ ಇಸವಿಯಲ್ಲಿ ಮಹಾ ಚುನಾವಣೆ ಆಯಿತು, ೧೯೬೭ರಿಂದ ೧೯೬೯ನೆಗೆ ಇಸವಿಯ ವರೆಗೆ ಪುನಃ ಹೆಸರು ಬದಲಾವಣೆಯಾಗಬೇಕು ಎನ್ನುವ ಬಗೆ ಠರಾವು ಬಂತೋ ಏನೋ ನನಗೆ ಜ್ಞಾಪಕವಿಲ್ಲ, ಬಂದಿದ್ದರೆ ತೀರ್ಮಾನವಾಗಿಲ್ಲ ಚರ್ಚೆ ಆಗುವುದು, ಮುಕ್ತಾಯವಾಗುವುದು ಅಥವಾ ಲ್ಯಾಪ್ಸ್ ಆಗುವುದು ಹಾಗೆ ನಡೆದು ಬಂತು. ಅದಕ್ಕೆ ಕಾರಣ ಏನೆಂದರೆ, ನನಗೆ ತಿಳಿದ ಹಾಗೆ, ಆಡಳಿತ ಸೂತ್ರವನ್ನು ಹಿಡಿದು, ಕೆಲಸಮಾಡತಕ್ಕಂಥ ಪಕ್ಷದಲ್ಲಿ ಏಕಮುಖವಾದ ಅಭಿಪ್ರಾಯ ಅಥವಾ ಬಹುಮತ ಬರಲಿಲ್ಲ. ಅಲ್ಲಿಗೆ ಅಭಿಪ್ರಾಯ ಭೇದ ಇದ್ದೇ ಇತ್ತು ಅಥವಾ ಎಲ್ಲಾರೂ ಒಪ್ಪುವಂಥ ಪರಿಸ್ಥಿತಿ ಇರಲಿಲ್ಲ. ಆದ್ದರಿಂದ ಹಾಗೆಯೇ ಮುಂದುವರೆಯಿತು ಎಂದು ನನ್ನ ಭಾವನೆ.

೧೯೬೯ನೇ ಜುಲೈ ತಿಂಗಳಲ್ಲಿ ಕಾಂಗ್ರೆಸ್ ಪಕ್ಷದ ಚರಿತ್ರೆ ಬದಲಾವಣೆಯಾಯಿತು. ಅದೇ ರೀತಿ ಇಡಿ ಭಾರತ ದೇಶದ ರಾಜಕೀಯ ಚರಿತ್ರೆಯೂ ಕೂಡ ಬದಲಾವಣೆಯಾಯಿತು. ಅದರ ವಿಚಾರಕ್ಕೆ ಈಗ ನಾನ ಹೋಗಬೇಕಾದ ಅಗತ್ಯವಿಲ್ಲ. ಆ ಬದಲಾವಣೆಯ ಪರಿಣಾಮವಾಗಿ ನಾವು ಇಲ್ಲಿ ಈ ಸಭೆಯಲ್ಲಿದ್ದೇವೆ

ಆದರೆ ೧೯೭೧ನೇ ಇಸವಿಯ ಮಹಾ ಚುನಾವಣೆಗೆ ಮುಂಚೆ ಅಥವಾ ಅದಕ್ಕಿಂತ ಮುಂಚೆ ನಡೆದಂಥ ಮಧ್ಯಂತರ ಚುನಾವಣೆಯ ಕಾಲ, ಇದರ ಹಿನ್ನಲೆಯನ್ನು ಸ್ವಲ್ಪ ನಾನು ಈ ಸಂದರ್ಭದಲ್ಲಿ ಈ ಸಭೆಯ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ.

2-30 P.M.

SRI C. M. ARUMUGHAM :—Madam, in appreciation of the Government for bringing this Resolution, I pass on these sweets to the Chief Minister and to you.

(He passed on two boxes of sweets, one each to the Chief Minister and the Speaker)

SRI C. M. ARUMUGHAM :—Madam, I wish to distribute sweets to the members also and if you, Madam, would permit me a few minutes, I shall distribute them to the members also.

SRI D. DEVARJ URS :—Kindly allow me to complete my speech and if you, Madam, so desire, you may adjourn the House for a few minutes, say ten minutes during which the sweets could be distributed.

ಮಾನ್ಯ ಸಭಾಪತಿಯವರೇ, ನಾನು ಮುಂದುವರಿಸುವುದಕ್ಕೆ ಅವಕಾಶ ಕೊಡುತ್ತೀರೆಂದು ತಿಳಿದು ಕೊಂಡಿದ್ದೇನೆ. ಚುನಾವಣೆಗಳಿಗಿಂತ ಹಿಂದೆ ನಡೆದಂತಹ ಒಂದೆರಡು ಘಟನೆಗಳನ್ನು ಸಭೆಯ ಗಮನಕ್ಕೆ ತಿಳಿಸಬೇಕೆಂದು ಇದ್ದೇನೆ. ಅದು ಏನೆಂದರೆ ೧೯೭೦-೭೧ರಲ್ಲಿ ನಡೆದಂಥ ಮಧ್ಯಂತರ ಚುನಾವಣೆ ಕಾಲದಲ್ಲಿ ಅಲ್ಲಲ್ಲಿ ಈ ಹೆಸರು ಬದಲಾವಣೆ ಬಗ್ಗೆ ಬಹಿರಂಗವಾಗಿ ಹಾಗೂ ಅಂತರಂಗವಾಗಿ ವಾದ ವಿವಾದಗಳು ನಡೆಯುತ್ತಿದ್ದವು. ಮಧ್ಯಂತರ ಚುನಾವಣೆ ಆದ ಮೇಲೆ ೧೯೭೧ನೇ ಚುನಾವಣೆ ಕಾಲಕ್ಕೆ ಈ ಹೆಸರಿನ ವಿಚಾರ ಬಹಳ ಪ್ರಬಲವಾಗಿ ಜನ ಸಾಮಾನ್ಯರ ಮನಸ್ಸನ್ನು ಸೆಳೆಯುವುದಕ್ಕೆ ಒಂದು ಕಾರಣವಾಯಿತು. ಈಗ ನಾವು ಕಾಂಗ್ರೆಸ್ ಪಕ್ಷ ಎಂದು ಹೇಳುತ್ತಿದ್ದೇವೆ. ಚುನಾವಣೆಗೆ ಮುಂಚೆ ಸುಪ್ರೀಂಕೋರ್ಟಿನ ಆಜ್ಞೆಗೆ ಮುಂಚೆ (ಆರ್) ಕಾಂಗ್ರೆಸ್ ಮತ್ತು (ಒ) ಕಾಂಗ್ರೆಸ್ ಪಕ್ಷ ಎಂದು ಹೇಳುತ್ತಿದ್ದೆವು. (ಆರ್) ಕಾಂಗ್ರೆಸ್‌ನ ಕನ್‌ವೀನರಾಗಿ ನಾನು ಕೆಲಸ ಮಾಡು ತ್ತಿದ್ದವನು, ಈ ರಾಜಕೀಯ ತಿಕ್ಕಾಟದಲ್ಲಿ ನಾನು ಒಂದುಕಡೆ ಮಾಡಿದಂಥ ಭಾಷಣದಿಂದ ಸ್ವಲ್ಪ ಕಿಡಿ ಹಾರಿತು. ಅದು ನಮ್ಮ ದೇಶದಾದ್ಯಂತ ವ್ಯಾಪ್ತಿಗೊಂಡಿತು. ಶ್ರೀರಂಗಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಸೇರಿ ಒಂದು ಸಮ್ಮೇಳನ ಮಾಡಿದರು. ಆ ಸಮ್ಮೇಳನಕ್ಕೆ ನಾನು ಹೋದೆ ಅಲ್ಲಿ ನಾನು ಹೆಸರಿನ ವಿಚಾರ ಒಂದಷ್ಟು ಪ್ರಸ್ತಾಪಮಾಡಿ ಈಗ ಇದನ್ನು ದೊಡ್ಡ ಸಮಸ್ಯೆ ಎಂದು ಪರಿಗಣಿಸಬೇಕಿಲ್ಲ, ಇನ್ನೂ ಮುಖ್ಯವಾದ ಸಮಸ್ಯೆಗಳು ಇವೆ, ಆದ ಕಾರಣ ಹೆಸರು ಬದಲಾವಣೆ ಮಾಡುವುದರಿಂದ ಎಲ್ಲಾ ಕಾರ್ಯವಾಗುತ್ತದೆ ಎಂದು ಹೇಳುವುದು ಅಷ್ಟಾಗಿ ಸರಿಯಲ್ಲ, ವೈಯುಕ್ತಿಕವಾಗಿ ನಾನು ಯಾವುದಕ್ಕೂ ಅಂಟಿಕೊಂಡಿಲ್ಲ, ಮಾಡಬೇಕು ಎಂದೂ ಹೇಳುವುದಿಲ್ಲ, ಮಾಡಲೇ ಕೂಡದು ಎಂದೂ ಹೇಳುವುದಿಲ್ಲ, ಎನ್ನುವ ದಾಟಿಯಲ್ಲಿ ಮಾತನಾಡಿದಾಗ ಅದರ ಬಗ್ಗೆ ಬಹಳ ವ್ಯಾಖ್ಯಾನ ನಡೆದು ನಮ್ಮ ಈ ಹೆಸರಿನ ಬಗ್ಗೆ, ನೆಲದ ಬಗ್ಗೆ, ಜಲದ ಬಗ್ಗೆ ಈ ಎಲ್ಲಾ ವಿಚಾರದಲ್ಲಿ ಈ ಪಕ್ಷ ಏನಾದರೂ ನಾಳೆ ಅಧಿಕಾರಕ್ಕೆ ಬಂದರೆ ಎಲ್ಲದಕ್ಕೂ ತೊಂದರೆ ಉಂಟಾಗುತ್ತದೆ, ಈ ಪಕ್ಷದ ಮುಖಂಡರು ಆಗಿರತಕ್ಕಂಥವರು ಹೀಗೆ ಎಲ್ಲಾ ಹೇಳುತ್ತಾರೆ ಅವರಿಗೆ ಸಮಸ್ಯೆಗಳನ್ನು ಬಗೆಹರಿಸುವ ಚೈತನ್ಯ ಇಲ್ಲ ಎಂದು ಅನ್ನುವಂತಹ ಇಂಥ ಟೀಕೆಗಳು ಬಂದವು. ನಾನು ರಾಜ್ಯಾದ್ಯಂತ ಆ ಕಾಲಕ್ಕೆ ಓಡಾಟ ಮಾಡತಕ್ಕ ಸಂದರ್ಭಗಳಲ್ಲಿ ಅನೇಕ ಸಭೆಗಳಲ್ಲಿ ನನ್ನನ್ನು ಕೇಳಿದರು. ''ನೀವು ಹೆಸರಿಗೆ ವಿರುದ್ಧವಾಗಿದ್ದೀರಿ, ಬಹಳವಾಗಿ ನಿಮ್ಮ ಮೇಲೆ ಪ್ರಚಾರ ಆಗಿದೆ ಏನು ಹೇಳುತ್ತೀರಿ" ಎಂದು ನನ್ನನ್ನು ಅನೇಕ ಕಡೆ ಪ್ರಶ್ನೆ ಮಾಡಿದರು. ಅದೇ ರೀತಿ ನೆಲದ ವಿಚಾರ, ಜಲದ ವಿಚಾರ ಪ್ರಸ್ತಾಪ ಮಾಡಿದರು. ಈ ಸಂದರ್ಭದಲ್ಲಿ ಅದು ಬೇಕಿಲ್ಲ ಬರೀ ಹೆಸರಿನ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ನಾನು ಸ್ಪಷ್ಟವಾಗಿ ಕನ್ನಡ ಜನತೆ ಮುಂದೆ ಒಂದು ಮಾತು ಹೇಳಿದ್ದೆ. ಅದು ಏನು ಅಂದರೆ ನನ್ನ ವೈಯುಕ್ತಿಕವಾದ ವಿಚಾರದಲ್ಲಿ ಯಾವ ಕಾಲಕ್ಕೂ ನಾನು ನನ್ನ ಮನಸ್ಸನ್ನು ಕೆಡಿಸಿ ಕೊಂಡವನಲ್ಲ ಅಥವಾ ವಿಕಾರ ಹೊಂದತಕ್ಕಂಥ ವ್ಯಕ್ತಿ ನಾನು ಅಲ್ಲ, ವೈಯಕ್ತಿಕ ಅಭಿಪ್ರಾಯ ಏನೇ ಇರಲಿ, ನಾನು ಇಂದಿಗೂ ಶೇಕ್‌ಸ್ಪಿಯರ್ ಹೇಳಿದಂತೆ ''what is there in a name? A rose will

(SRI D. DEVARJ URS)

smell as sweet as it is even if you call it by some other name'' ಎಂಬ
ಅಭಿಪ್ರಾಯ ಇರುವವನು, ಆದರೆ ಇದು ನನ್ನ ವೈಯಕ್ತಿಕ ಅಭಿಪ್ರಾಯ ನನ್ನ ಅಭಿಪ್ರಾಯ ಏನೇ
ಇರಲಿ, ಜನಸಾಮಾನ್ಯರ ಅಭಿಪ್ರಾಯದಲ್ಲಿ ಅವರಿಗೆ ಈ ಬದಲಾವಣೆಯಿಂದ ಒಂದು ಆನಂದ, ಒಂದು
ತೃಪ್ತಿ, ಒಂದು ಸಮಾಧಾನ, ಒಂದು ಭಾವೈಕ್ಯತೆ ಬರುವುದಾದರೆ ನಮಗೆ ಅದರಿಂದ ತೊಂದರೆಯಾಗುವುದು
ಏನೂ ಇಲ್ಲ, ಸಂತೋಷ ಎಂದು ಹೇಳುವುದರ ಜೊತೆಗೆ, ನಾಳೆ ಚುನಾವಣೆ ಆದಮೇಲೆ ನಮ್ಮ ಪಕ್ಷ ಬಹು
ಮತ ಪಡೆದು ಒಂದು ಅಧಿಕಾರವನ್ನು ಪಡೆಯುವುದಾದರೆ ಸಭೆಯಲ್ಲಿ ಚರ್ಚೆಮಾಡಿ, ಶಾಸನಸಭೆಯಲ್ಲಿ
ನಿಮ್ಮ ಪ್ರತಿನಿಧಿಗಳು ಯಾರು ಇರುತ್ತಾರೆ ಅವರ ಅಭಿಪ್ರಾಯದಂತೆ ಹೋಗುವುದಕ್ಕೆ ನನ್ನ ಅಡ್ಡಿ ಇಲ್ಲ,
ಹೆಸರು ಬದಲಾವಣೆ ಮಾಡೋಣ, ಬಹುಮತ ಅಭಿಪ್ರಾಯದಂತೆ ಹೋಗೋಣ ಎನ್ನುವ ಮಾತನ್ನ
ಜನತೆ ಮುಂದೆ ನಮ್ಮ ಪಕ್ಷದ ಪರವಾಗಿ ಹೇಳಿದ್ದು ಉಂಟು. ನಾನು ನೀವು ಜನತೆಗೆ ಕೊಟ್ಟಂಥ
ಮಾತನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಇವೊತ್ತು ತಮ್ಮ ಎಲ್ಲರ ಅಪ್ಪಣೆ ಪಡೆದು ಈ ಒಂದು ಠರಾವನ್ನು
ನಾನು ಈ ಸಭೆ ಮುಂದೆ ಮಂಡಿಸುತ್ತಿದ್ದೇನೆ ಮತ್ತೆ ಈ ಹೆಸರು ಯಾವುದು ಇರಬೇಕು ಎನ್ನುವ
ಬಗ್ಗೆ ಕೂಡ ನಮ್ಮ ದೇಶದಲ್ಲಿ ಬಹಳ ಕಾಲ ಚರ್ಚೆ ನಡೆದಿದೆ. ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿದೆ
ಒಂದು ಕಾಲದಲ್ಲಿ "ಪ್ರಬುದ್ಧ ಕರ್ಣಾಟಕ" ಎಂದು ಮೈಸೂರು ಯೂನಿವರ್ಸಿಟಿಯಿಂದ ಬರುತ್ತಾ ಇದ್ದಂಥ
ಮಾಸಪತ್ರಿಕೆ ಪ್ರಕಟಣೆಯಲ್ಲಿ ಕರ್ಣಾಟಕ ಶಬ್ದ ವಿಚಾರದಲ್ಲಿ ಆ ಕಾಲಕ್ಕೆ ವಿಪುಲವಾದ ಚರ್ಚೆ
ನಡೆಯುತ್ತಿತ್ತು 'ಕರ್ನಾಟಕ' ಇರಬೇಕೇ ಅಥವಾ ಕರ್ಣಾಟಕ ಇರಬೇಕೇ ಎನ್ನುವ ಬಗ್ಗೆ ಸಾಹಿತಿಗಳಲ್ಲಿ
ದೊಡ್ಡ ಜಿಜ್ಞಾಸೆ ನಡೆದು ಅದು ಎಲ್ಲಿಯವರೆಗೆ ಹೋಯಿತು ಎಂದರೆ ಉದಾಹರಣೆಗೆ
ತಿರುಪತಿ ದೇವಸ್ಥಾನದಲ್ಲಿ ತಿಮ್ಮಪ್ಪನಿಗೆ ನಾಮ ಹಾಕುವುದು "ಯು" ಷೇಪ್ ಇರಬೇಕೇ ಅಥವಾ
''ವಿ"ಷೇಪ್ ಇರಬೇಕೇ ಎಂದು ಸುಪ್ರೀಂ ಕೋರ್ಟಿಗೆ ಹೋಗಿ ತೀರ್ಮಾನವಾಯಿತು, ಆರೀತಿ
ಆ ಮಟ್ಟದ ವರೆಗೂ ಹೋಯಿತು. ಈ ಹೆಸರಿನ ಬಗ್ಗೆ ಆಗಿನ ಕಾಲದಲ್ಲಿ ಪ್ರಾರಂಭವಾದ
ಚರ್ಚೆ ಇದುವರೆಗೂ ಒಂದೇ ಸಮನೆ ಚರ್ಚೆಯಾಗುತ್ತಾ ಬಂದು ತೀರ್ಮಾನವಾಗದೇ
ಅದು ಹಾಗೇ ಉಳಿದು ಬಂತು ತದನಂತರ ಏನಾಯಿತು? ಇದರಲ್ಲಿ "ಕರ್ನಾಟಕ" ಬೇಡ, "ಕರ್ನಾಟಕ"
ಇರಲಿ, ಇಲ್ಲವೇ "ಕನ್ನಡ ನಾಡು" ಇರಬಹುದು ಎಂದು ಹೀಗೆ ಕೆಲವು ಕಡೆ ಚರ್ಚೆಯಾಯಿತು. ಇವೆಲ್ಲಾ
ಚರ್ಚೆಗಳಿಂದ ನಾನು ಅರಿತಿರುವ ಪ್ರಕಾರ ಇದರಲ್ಲಿ ಈ ಯಾವ ಚರ್ಚೆಗೂ ಅವಕಾಶವಿಲ್ಲ ಮತ್ತು ಇಂತಹ
ಬದಲಾವಣೆಯನ್ನು ಮಾಡುವುದು ಎಂದರೆ ''ಕರ್ನಾಟಕ" ಎಂದು ಮಾಡಬಹುದು ಎನ್ನುವ ಒಂದು
ನಿರ್ಣಯವನ್ನು ಇಲ್ಲಿ ಮಂಡಿಸಿದ್ದೇನೆ. ಕರ್ನಾಟಕ ಎನ್ನುವ ಹೆಸರನ್ನು ಹಿಂದೆ ರಾಜರುಗಳು ಉಪಯೋಗಿಸು
ತ್ತಿದರು. ಕರ್ನಾಟಕ ಸಿಂಹಾಸನಾಧೀಶ್ವರ ಎಂದು ಒಂದು ಕಾಲದಲ್ಲಿ ಮೈಸೂರು ರಾಜರು ಇಟ್ಟುಕೊಂಡಿ
ದ್ದರು, ಇದರಂತೆ ವಿಜಯನಗರದ ರಾಜರು ಇಟ್ಟುಕೊಂಡಿದ್ದರು, ಹೊಯ್ಸಳರು ಹಾಗೂ ಕದಂಬರು
ಇಟ್ಟುಕೊಂಡಿದ್ದರು. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಈ ಹೆಸರು ಬರುತ್ತಲೇ ಇತ್ತು. ಸಾಹಿತಿಗಳು
ಸಾಹಿತ್ಯದಲ್ಲಿ ಕರ್ನಾಟಕ ಎಂಬ ಹೆಸರನ್ನು ಇಡಬಹುದೆಂದು ಹೇಳಿದ್ದರು. ಅದರಂತೆ ಇಲ್ಲಿ ನಿರ್ಣಯವನ್ನು
ಮಂಡಿಸಿದ್ದೇನೆ. ಇದಕ್ಕೂ ಅನೇಕ ಸಾಹಿತಿಗಳು ಏನೇನು ಅಭಿಪ್ರಾಯಗಳನ್ನು ಪತ್ರಿಕಾ ಪಕಟಣೆಯಲ್ಲಿ
ಕೊಟ್ಟಿದ್ದಾರೆ ಅವನ್ನೆಲ್ಲಾ ಓದಿಕೊಂಡು ಬಂದಿದ್ದೇನೆ, ಮತ್ತು ಈಗ್ಗೆ ಒಂದೂವರೆ ತಿಂಗಳ ಹಿಂದೆ ಇಂತಹ
ಒಂದು ಠರಾವನ್ನು ನಮ್ಮ ಕ್ಯಾಬಿನೆಟ್ಟಿನಲ್ಲಿ ಮಾಡುವಾಗ ನಾವೇನು ಮಾಡಿದೆವು ಎಂದರೆ ಶಾಸಕರು
ಅಭಿಪ್ರಾಯ ಪಟ್ಟಂತೆ ಹಾಗೂ ಹೆಚ್ಚು ಜನರು ಅಭಿಪ್ರಾಯಪಡುವಂತೆ ನಮ್ಮ ರಾಜ್ಯಕ್ಕೆ ಒಂದು ಶಾಶ್ವತ
ವಾದ ಹೆಸರನ್ನ ಇಟ್ಟು ಈಗಿನ ಹೆಸರನ್ನು ಬದಲಾವಣೆ ಮಾಡಬಹುದು ಎನ್ನುವ ಒಂದು ತೀರ್ಮಾನಕ್ಕೆ
ಬಂದೆವು. ಆಗಿನಿಂದಲೂ ಪತ್ರಿಕೆಗಳಲ್ಲಿ ಬಂದ ಅಭಿಪ್ರಾಯಗಳನ್ನು ಮಾನ್ಯ ಸಾಹಿತಿಗಳು ಹಾಗೂ ಅನೇಕ
ಮಹನೀಯರು ಹೆಸರಿನ ಬದಲಾವಣೆಯ ಬಗ್ಗೆ ಕೊಟ್ಟ ಅಭಿಪ್ರಾಯಗಳನ್ನೆಲ್ಲಾ ಓದಿದ್ದೇನೆ. ಹೆಚ್ಚು ಜನರ
ಅಭಿಪ್ರಾಯ ನಾನು ತಮ್ಮ ಮುಂದೆ ಠರಾವಿನಲ್ಲಿ 'ಕರ್ನಾಟಕ' ಎಂದು ಏನು ಹೆಸರನ್ನು ಇಟ್ಟಿದ್ದೇನೊ
ಅದೇ ಬಹುಮತ ಅಭಿಪ್ರಾಯ ಎಂದು ನನ್ನ ನಂಬಿಕೆ. ಇಂತಹ ಒಂದು ಬಹುಮತದ ಅಭಿಪ್ರಾಯ ಬಂದ
ಮೇಲೆ ನಮ್ಮ ಪಕ್ಷದಲ್ಲಿ ಕೂಡ ಇದನ್ನು ನಾವು ಚರ್ಚೆ ಮಾಡಿ ಆಡಳಿತ ಪಕ್ಷವಾದ ಕಾಂಗ್ರೆಸ್ ಪಕ್ಷದವರು
ಎಲ್ಲರೂ ಒಪ್ಪಿದಂತೆ ಠರಾವನ್ನು ಇಲ್ಲಿ ತಂದಿದ್ದೇನೆ. ಒಂದು ಸಂತೋಷದ ವಿಚಾರ ಇಲ್ಲಿ ಹೇಳಬೇಕಾಗಿದೆ.
ನಮ್ಮ ಪಕ್ಷದಲ್ಲಿ ಕೆಲವು ವಿಚಾರದಲ್ಲಿ ಅಭಿಪ್ರಾಯ ಭೇದಗಳು ಇದ್ದರೂ ಇದರಲ್ಲಿ ಎಲ್ಲರೂ ಇಂತಹ
ಒಂದು ಬದಲಾವಣೆಯನ್ನು ಮಾಡಲು ಒಪ್ಪಿದ್ದಾರೆ. ಇದರಲ್ಲಿ ಕೆಲವರು ''ಮೈಸೂರು'' ಎಂದು
ಇರಬಹುದು ಇಲ್ಲವೇ "ಕನ್ನಡ ನಾಡು" ಎಂದು ಇರಬಹುದು ಎಂದು ಹೇಳುವವರು ಅಥವಾ "ಮೈಸೂರು,
ಕನ್ನಡ ನಾಡು" ಇಲ್ಲವೇ ''ಮೈಸೂರು ಕರ್ನಾಟಕ'' ಎಂದು ಹೇಳುವ ಅಭಿಪ್ರಾಯದವರೂ ಇರಬಹುದು.
ಆದರೆ ಪ್ರಜಾಪ್ರಭುತ್ವ ತತ್ವದ ಒಂದು ಅಭಿಪ್ರಾಯಕ್ಕೆ ನಾವು ಕಟ್ಟುಬಿದ್ದಿರುವುದರಿಂದ ಬಹುಮತದ
ಅಭಿಪ್ರಾಯದಲ್ಲಿ ಹೆಸರು ಯಾವ ರೀತಿ ಇರಬೇಕೆಂದು ತೀರ್ಮಾನ ಮಾಡುತ್ತಾರೋ ಆ ತೀರ್ಮಾನನ್ನು

ತೆಗೆದುಕೊಂಡು ಅದಕ್ಕೆ ನಾವೆಲ್ಲರೂ ಒಪ್ಪಿಕೊಂಡು ಹೋಗೋಣ ಎಂದು ಎಲ್ಲರೂ ಒಂದು ದೊಡ್ಡ ಮನೋಭಾವವನ್ನು ಪ್ರದರ್ಶನ ಮಾಡಿದ್ದಾರೆ. ಇದು ಒಂದು ಸಂತೋಷದ ವಿಚಾರ. ಈ ಸಂದರ್ಭದಲ್ಲಿ ಇದನ್ನು ಏಕೆ ಹೇಳುತ್ತೇನೆ ಎಂದರೆ ನಮ್ಮ ಕಾಂಗ್ರೆಸ್ ಪಕ್ಷ ಈ ದೇಶದ ಹೆಸರಿನ ವಿಚಾರದಲ್ಲಿ ಇಷ್ಟೊಂದು ರೀತಿಯಲ್ಲಿ ಒಮ್ಮತ ಅಭಿಪ್ರಾಯವನ್ನು, ಭೇದ ಭಾವಗಳೇನೇ ಇರಲಿ ಈಗ ಪ್ರದರ್ಶನ ಮಾಡಿರುವುದು ಪ್ರ ಪ್ರಥಮ ಎಂದು ಇಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ನಮ್ಮ ಮಾನವನ ಜೀವನ ಕೇವಲ ಐಹಿಕ ಪ್ರಪಂಚದಿಂದ ಕೂಡಿದ ಜೀವನದಲ್ಲಿ ಮಾನವನನ್ನು ಭಾವನಾ ಪ್ರಪಂಚ ಕಲ್ಪನಾ ಪ್ರಪಂಚ ಹಾಗೂ ಐಹಿಕ ಪ್ರಪಂಚ, ಹೀಗೆ ನಾನಾ ಪ್ರಪಂಚಗಳ ಕ್ರೋಢೀಕರಿಸಿದ ಮನುಷ್ಯ ಎನ್ನೋಣ. ನಾವು ಈಗ ಐಹಿಕ ಪ್ರಪಂಚಕ್ಕೇ ಹೆಚ್ಚು ಪ್ರಾಧಾನ್ಯತೆ ಕೊಡುತ್ತಿರುವುದು, ನಾವೆಲ್ಲಾ ಮೈಸೂರು ದೇಶದಲ್ಲಿರಲಿ ಇಲ್ಲವೇ ಕರ್ನಾಟಕ ದೇಶದಲ್ಲಿರಲಿ ಇಡೀ ಭಾರತದೇಶದಲ್ಲಿ ಸೇವೆ ಮಾಡುತ್ತಿದ್ದರೂ ಕಾಲ ಸನ್ನಿವೇಶಕ್ಕೆ ತಕ್ಕ ಹಾಗೇ ಆರ್ಥಿಕವಾಗಿ ಐಹಿಕ ವಿಚಾರಕ್ಕೆ ಹೆಚ್ಚು ಪ್ರಾಧ್ಯಾನ್ಯತೆ ಕೊಡುತ್ತಿದ್ದೇವೆ. ಇದು ಮನುಷ್ಯನಿಗೆ ತೃಪ್ತಿ ತರುವ ವ್ಯವಹಾರವಾಗಿದ್ದರೂ ಒಂದು ರೀತಿಯಲ್ಲಿ ಇದರಲ್ಲಿ ಹೊಂದಿಕೊಂಡು ಹೋಗುವ ಒಂದು ಭಾವನೆಗೆ ಬರಬೇಕು. ಇದರಿಂದ ಅವನ ಹಸಿವು ಅಥವಾ ತೃಷೆ ಇಂಗುವುದಾದರೆ ಇದರಲ್ಲಿ ಯಾವುದೇ ರೀತಿಯಾದ ತೊಡಕುಗಳನ್ನು ತರಬಾರದು, ಎನ್ನುವ ಒಂದು ವಿಚಾರ ಇವರಲ್ಲಿ ಮನದಟ್ಟಾಗಿದೆ. ಇದು ಮನುಷ್ಯನಿಗೆ ಆನಂದವನ್ನು ತರುವ ಒಂದು ಸಂಗತಿಯಾಗಿದೆ, ಇಂತಹ ಒಂದು ಆನಂದವನ್ನು ಅನುಭವಿಸುತ್ತಿರುವ ಸದಸ್ಯರುಗಳನ್ನು ನೋಡಿ ನಾವೂ ಆ ಆನಂದದಲ್ಲಿ ಭಾಗಿಯಾಗಬೇಕು ಎನ್ನುವ ಒಂದು ಭಾವನೆಯಿಂದ ನಾವು ಇಲ್ಲಿ ಹೇಳುತ್ತಿದ್ದೇವೆ. ನಮ್ಮ ರಾಜ್ಯದ ಹೆಸರಿನ ಬದಲಾವಣೆ ಯಿಂದಾಗಿ ಅವರಿಗೆ ಒಂದು ರೀತಿಯಾದ ಆನಂದ ಹಾಗೂ ಸಂತೋಷ ಉಂಟಾಗುತ್ತದೆ ಎಂದು ನಮಗೆ ಕಾಣುತ್ತದೆ, ಬಹುಜನರು ಎಂದರೆ ಈ ದೇಶದಲ್ಲಿರುವ ಬೇರೆ ಬೇರೆ ವರ್ಗದವರೂ ಸೇರುತ್ತಾರೆ. ಅನೇಕ ಸಾಹಿತಿಗಳು ಕರ್ನಾಟಕದಲ್ಲಿ ಇದ್ದಾರೆ. ಇಂತಹ ಸಾಹಿತಿಗಳಲ್ಲಿ ಹಿರಿಯರಿಂದ ಕಿರಿಯರವರೆಗೂ ಎಂದರೆ ಶ್ರೀಮಾನ್ ಬೇಂದ್ರೆಯವರು, ಹಾಗೂ ರಾಷ್ಟ್ರದ ದೊಡ್ಡ ಕವಿಗಳಾದ ಶ್ರೀಮಾನ್ ಕೆ. ವಿ. ಪುಟ್ಟಪ್ಪ ನವರು ಮತ್ತೆ ಇನ್ನಿತರ ಎಲ್ಲ ಸಾಹಿತಿಗಳೂ ಈಗಿರುವ ಹೆಸರನ್ನು ಬದಲಾವಣೆ ಮಾಡಿ ಕರ್ನಾಟಕ ಎಂದು ಮಾಡಬೇಕೆಂದು ಸತತವಾಗಿ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ, ಇದರಲ್ಲಿ ಬುದ್ಧಿ ಜೀವಿಗಳೂ ಹಾಗೂ ಇಂಟಲಿಜೆನ್‌ಷಿಯಾ ಎಂದು ಅನ್ನತಕ್ಕ ಜನ ಏನು ಇದ್ದಾರೆ ಅವರೂ ಕೂಡ ಹೆಸರು ಬದಲಾವಣೆಯಾಗ ಬೇಕೆಂದು ಹೇಳಿದ್ದಾರೆ. ಅನೇಕ ವಿದ್ಯಾರ್ಥಿಗಳೂ ಮತ್ತು ಮಧ್ಯಮ ವರ್ಗದ ಜನರೂ, ಈಗಿನ ಯುವಕ ಜನಾಂಗದವರೂ ಬದಲಾವಣೆಯಾಗಬೇಕೆಂದು ಹೇಳಿಕೊಂಡು ಬರುತ್ತಿದ್ದಾರೆ ಅದೇ ರೀತಿ ಆಡಳಿತದಲ್ಲಿರತಕ್ಕ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿರತಕ್ಕ ಜನ ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಇಷ್ಟೊಂದು ಜನರು ಓವರ್ ವೆಲ್ಮಿಂಗ್ ಮೆಜಾರಿಟಿ ಎಂದು ಏನು ಹೇಳುತ್ತೇವೆ ಹಾಗೆ ಎಲ್ಲ ವರ್ಗಗಳ ಜನರೂ, ಹೆಸರನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತಾ ಬಂದಿದ್ದಾರೆ. ಇದು ಅವರ ಆಸೆ. ನಾವು ಜನತಾ ಪ್ರತಿನಿಧಿಗಳಾಗಿರುವುದರಿಂದ ನಾವು ಅವರ ಆಸೆಗೆ ಅಡ್ಡಿ ತರತಕ್ಕದ್ದು ಸೂಕ್ತವಲ್ಲ ಎನ್ನುವ ತೀರ್ಮಾನಕ್ಕೆ ಬಂದು, ಇಷ್ಟೊಂದು ಜನಕ್ಕೆ ಸಂತೋಷವಾಗಬೇಕಾದರೆ ಅಂತಹ ಸಂತೋಷವಾಗಿರುವ ಜನತೆಯಲ್ಲಿ ನಾವೂ ಸಹ ಭಾಗಿಯಾಗೋಣ ಎಂದು, ನಮ್ಮ ಅಲ್ಪ ಸೇವೆಯನ್ನು ಮಾಡೋಣ ಎನ್ನುವ ಒಂದು ಸಂತೋಷದಿಂದ, ನಾನು ಇಲ್ಲಿ ಇಂತಹ ಒಂದು ನಿರ್ಣಯವನ್ನು ತರುವ ಕಾಲ ಬಂತಲ್ಲಾ ಎಂದು ಸಂತೋಷಿಸುತ್ತೇನೆ. ಮತ್ತು ಇದರಲ್ಲಿ ನಮ್ಮ ಜವಾಬುದಾರಿಯೂ ಇದೆ ಎನ್ನುವ ಮಾತನ್ನು ಹೇಳಿ ಇಂತಹ ಒಂದು ನಿರ್ಣಯ ಇಲ್ಲಿ ಬಂದಿದೆ, ಇದನ್ನು ತಮ್ಮ ಅಪ್ಪಣೆ ಪಡೆದು ನಮ್ಮ ಈ ಸಭೆಯ ಮುಂದೆ ಇಟ್ಟಿದ್ದೇನೆ. ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ಹೆಚ್ಚು ಕಾಲ ನಾನು ಭಾಷಣ ಮಾಡಬೇಕಾದ ಅಗತ್ಯವಿಲ್ಲ ಎಂದು ನನ್ನ ಭಾವನೆ. ಇದರ ಬಗ್ಗೆ ಇರುವ ಚರಿತ್ರೆ ಎಲ್ಲವನ್ನು ಈ ಸಭೆಯಲ್ಲಿರತಕ್ಕ ಎಲ್ಲ ಮಾನ್ಯ ಸ್ನೇಹಿತರೂ ನನಗಿಂತಲೂ ಹೆಚ್ಚು ಅಭ್ಯಾಸ ಮಾಡಿದವ ರಾಗಿರುತ್ತಾರೆ. ಇದರ ಚಾಪ್ಟರ್ ಅಂಡ್ ವರ್ಸ್ ಕೋಟ್ ಮಾಡಿ ಹೇಳುವವರೂ ಇದ್ದಾರೆ. ಇದನ್ನೆಲ್ಲಾ ಇಲ್ಲಿ ಹೇಳುವ ಅಗತ್ಯವಿಲ್ಲ, ಆದರೂ ಕೆಲವು ಸ್ನೇಹಿತರು ಇದರ ಬಗ್ಗೆ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್: ಹದಿನಾರು ವರ್ಷಗಳಿಂದಲೂ ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ ಮತ್ತು ಎಲ್ಲರೂ ಮಾತನಾಡಿದ್ದಾರೆ, ಇದನ್ನು ಮೂರು ಗಂಟೆಯೊಳಗೆ ಸಭೆಯ ಪೋಟಿಗೆ ಹಾಕಿ ನಿರ್ಣಯ ಪಾಸಾಗುವಂತೆ ಮಾಡುವುದು ಉತ್ತಮ.

[illegible]: ಇಷ್ಟೊಂದು ಪ್ರಧಾನವಾದ ನಿರ್ಣಯವನ್ನು ತಂದವರ ಬಗ್ಗೆ [illegible]ಗುತ್ತದೆ.

SRI D. DEVARAJ URS.—So far as I am concerned I need not dwell
at length. ಕೊನೆಯದಾಗಿ, ಇವೊತ್ತು ನಾನು ಮೊದಲೇ ಹೇಳಿದ ಹಾಗೆ ಮತ್ತೊಮ್ಮೆ ಅದನ್ನು ಇಲ್ಲಿ
ಹೇಳುವುದು ಉಚಿತ ಎಂದು ಹೇಳುತ್ತಿದ್ದೇನೆ. ಕಾಲ ಒಂದು ಚಕ್ರದ ಹಾಗೆ. ಸುಮಾರು ೫೦೦ ಇಲ್ಲವೇ
೬೦೦ ವರ್ಷಗಳ ಹಿಂದೆ ಈ ಮೈಸೂರು ರಾಜ್ಯ ಉದಯವಾಯಿತು ಎಂದು ನಾವು ಚರಿತ್ರೆಯಿಂದ
ಓದಿದ್ದೇವೆ.

ಅವರಲ್ಲಿ ಬದಲಾವಣೆಯಾಗಿದ್ದರೆ ಅದು ನನಗೆ ಗೊತ್ತಿಲ್ಲ. ಮೈಸೂರು ಅನ್ನತಕ್ಕಂಥದ್ದು ಒಂದು
ಕಾಲಕ್ಕೆ ಒಂದು ಚಿಕ್ಕ ಪ್ರಾಂತ್ಯವಾಗಿತ್ತು. ಮೈಸೂರು ಪಟ್ಟಣ ಏನಿದೆ ಅದು ಅಲ್ಪಸ್ವಲ್ಪ ಹೊರ
ವಲಯವನ್ನು ಸೇರಿದಂಥ ಒಂದು ಚಿಕ್ಕ ರಾಜ್ಯವಾಗಿತ್ತು. ಸುಮಾರು ೬೦೦ ವರ್ಷಗಳ ಹಿಂದೆ ಮೈಸೂರು
ಪ್ರಾಂತ್ಯ ಪೂರ್ವಕ್ಕೆ ತಲಕಾಡಿನ ವರೆಗೆ, ಪಶ್ಚಿಮಕ್ಕೆ ಶ್ರೀರಂಗಪಟ್ಟಣದ ವರೆಗೆ ಮಾತ್ರ ಇತ್ತು. ಆಗ
ಶ್ರೀರಂಗಪಟ್ಟಣ ಬೇರೆ ಪ್ರಾಂತ್ಯವಾಗಿತ್ತು. ಅಲ್ಲಿಂದೀಚೆಗೆ ಮೈಸೂರು ರಾಜ್ಯ ಒಂದಲ್ಲ ಒಂದು ಕಾರಣದಿಂದ
ಕರಾವಳಿಯ ವರೆಗೂ ಬೆಳೆದುಕೊಂಡುಹೋಯಿತು. ಆದರೆ ಮೈಸೂರಿನ ನಾಲ್ಕನೆ ಯುದ್ಧವಾದಮೇಲೆ
ಹಳೆಯ ಮೈಸೂರು ಎಂದು ಏನು ನಾವು ಹೇಳುತ್ತೇವೆ, ಅದು ಚಿಕ್ಕದಾಯಿತು. ಆದರೆ ಪುನಃ ೧೯೫೬ನೇ
ಇಸವಿಯಲ್ಲಿ ಪುನಃ ಭಾಷಾ ಪ್ರಾಂತ್ಯಗಳ ಪುನರ್ವಿಂಗಡನೆಯಾಗುವ ಕಾಲಕ್ಕೆ ಮೈಸೂರು ರಾಜ್ಯ ಒಂದಕ್ಕೆ
ಎರಡರಷ್ಟು ವಿಸ್ತಾರವಾಯಿತು. ಹಳೆಯ ಮೈಸೂರಿನ ಭಾಗದಿಂದ ಬಂದ ಜನರಿಗೆ ಮೈಸೂರು ರಾಜ್ಯದ
ಹೆಸರಿನ ಬಗ್ಗೆ ಹಿಂದಿನಿಂದಲೂ ಚಾರಿತ್ರಿಕವಾಗಿ ಒಂದು ಅಭಿಮಾನ ಬೆಳೆದು ಬಂದಿದೆ. ಮೈಸೂರು ರಾಜ್ಯ
ಎಂಬುದು ಇಡೀ ಇಂಡಿಯಾ ದೇಶದಲ್ಲಿ ಕೀರ್ತಿ ಪಡೆದಿರುವುದಲ್ಲದೆ, ಹೊರ ದೇಶಗಳಲ್ಲಿಯೂ ಸಹ ಕೀರ್ತಿ
ಪಡೆದಿದೆ. ಮೈಸೂರು ಜನತೆಯ ವಿಚಾರದಲ್ಲಿ, ಮೈಸೂರು ಸಾಮಾನುಗಳ ವಿಚಾರದಲ್ಲಿ ತಿಳಿದಂತಹ
ಜನರು ಹೊರದೇಶಗಳಲ್ಲಿ ಇದ್ದಾರೆ. ಅದಕ್ಕೋಸ್ಕರ ಮೈಸೂರು ರಾಜ್ಯ ಹೆಚ್ಚಿನ ಗೌರವ ಹಾಗೂ ಕೀರ್ತಿ
ಪಡೆದುಕೊಂಡಿದೆ. ಮೈಸೂರು ಎಂಬ ಹೆಸರಿಗೆ ಶಕ್ತಿ ಇದೆ. ಅವೇ ಹೆಸರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು
ಎಂದು ಹೇಳುವುದರಲ್ಲಿ ತಪ್ಪಿಲ್ಲ. ಆದರೆ ನಾನು ಮೊದಲೇ ಅರಿಕೆ ಮಾಡಿದ ಹಾಗೆ ಕಾಲಚಕ್ರ ಬದಲಾವಣೆ
ಯಾದಂತೆ ಬದಲಾವಣೆಗಳಾಗಬೇಕು. ಈಗ ಮೈಸೂರು ಎಂಬ ಹೆಸರಿನ ಹುಟ್ಟುವಿಕೆ, ಬದುಕುವಿಕೆಯ
ಕಾಲ ಮುಗಿದು ಅಸ್ತಂಗತವಾಗುವ ಕಾಲ ಬಂದಿದೆ. ಈ ಹೆಸರು ಅಸ್ತಂಗತವಾದರೂ ಸಹ ಇನ್ನೊಂದು
ಹೆಸರು ಉದಯವಾಗುತ್ತಿದೆ. ಹೊಸ ಹೆಸರಿನಲ್ಲಿ ಭಾವೈಕ್ಯತೆ ಇದೆ. ಹೊಸ ಹೆಸರಿನ ಬಗ್ಗೆ ವಿಶ್ವಾಸವಿದೆ.
ಆ ಹೆಸರಿನ ಬಗ್ಗೆ ಹೆಚ್ಚಿನ ಜನರಿಗೆ ಸಂತೋಷ, ಆನಂದ ಉಂಟಾಗುತ್ತಿದೆ. ಈ ಸಮಯದಲ್ಲಿ ಮೈಸೂರು
ಎಂಬ ಹೆಸರು ಹೋಗುತ್ತದೆ ಎಂಬುದು ನಮ್ಮ ಮನಸ್ಸಿನಲ್ಲಿದ್ದರೂ ಕೂಡ ಅದನ್ನು ಬಿಟ್ಟುಕೊಡಬೇಕಾದ್ದು
ಆಗತ್ಯ. ಏಕೆಂದರೆ ಒಂದು ಹೋಗಿ ಇನ್ನೊಂದು ಬರುತ್ತಿದೆಯೆಂದು ಅಲ್ಲ, ಬದಲಾವಣೆಯಲ್ಲಿ ಒಂದು
ಹೆಜ್ಜೆ ಮುಂದೆ ಹೋಗುವಾಗ, ಹಳೆಯದು ಹೋಗಿ ಹೊಸದು ಬರುವಾಗ ತೊಂದರೆ ಇಲ್ಲ, ಆನಂದ
ಬರುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಚಿಂತನೆ ಮಾಡಬೇಕಾಗಿಲ್ಲ. ಮತ್ತು ಯಾವುದೇ ಒಂದು
ತತ್ವ, ರಾಜ್ಯ ಅಥವಾ ಒಬ್ಬ ವ್ಯಕ್ತಿ ಕೆಲವು ಕಾಲ ಇದ್ದು, ಇನ್ನೊಂದಕ್ಕೆ ಎಡೆ ಕೊಡುವಾಗ, ಸ್ಥಾನ
ಬಿಟ್ಟುಕೊಡುವಾಗ ಚಿಂತನೆ ಮಾಡಬೇಕಾಗಿಲ್ಲ. ಇದು ಪ್ರಪಂಚದಲ್ಲಿಯೇ ಅವ್ಯಾಹತವಾಗಿ ನಡೆಯುತ್ತಿರುವ
ಕಾಲಧರ್ಮ ಎಂದು ಹೇಳಬಹುದು. ಅದನ್ನು ನಾವು ತಿಳಿದಿದ್ದೇ ಆದರೆ ಅವರ ಬಗ್ಗೆ ಚಿಂತನೆ ಮಾಡುವ
ಕಾಲ ಅಲ್ಲ. ಹೊಸದನ್ನು ನೋಡಿ, ಇತರರನ್ನು ನೋಡಿ ನಾವು ನಲಿದು ಸಂತೋಷ ಪಡುವ ಕಾಲ ಇದು.
ಆದ್ದರಿಂದ ಈ ನಿರ್ಣಯಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡುತ್ತದೆಂಬ ಪೂರ್ಣ ವಿಶ್ವಾಸ ನನಗೆ ಇದೆ.
ಬಹುಮತದ ವಿಶ್ವಾಸವಲ್ಲ, ನಾವೆಲ್ಲರೂ ಸೇರಿ ಒಮ್ಮತದಿಂದ ಈ ಹೆಸರನ್ನು ಕರೆಯೋಣ. ಆ ರೀತಿ ನಾವು
ಆನಂದದಿಂದ, ಸಂತೋಷದಿಂದ ಕರೆಯುವಾಗ ಕನ್ನಡ ಜನತೆಯ ಏಳಿಗೆಯಾಗಲಿ ಮತ್ತು ಈ ಶುಭ
ಮುಹೂರ್ತದಲ್ಲಿ ಈ ಹೆಸರನ್ನು ಕರೆದ ರಾಜ್ಯ ಉನ್ನತವಾಗಿ ಬೆಳೆದು, ಹಿಂದಿನಿಂದ ಈ ರಾಜ್ಯ ಚರಿತ್ರೆಯಲ್ಲಿ
ಏನು ಒಂದು ಒಳ್ಳೆಯ ಕೀರ್ತಿ ಮತ್ತು ಹೆಸರನ್ನು ಪಡೆದಿತ್ತೋ, ಅದಕ್ಕಿಂತ ಹೆಚ್ಚಿನ ಕೀರ್ತಿಯನ್ನು
ಪಡೆದು, ಕನ್ನಡ ಕೋಟಿ ಜನತೆ ಏನಿದ್ದಾರೆ ಅವರ ಬಾಳ್ವೆ ಹಸನಾಗಬೇಕು, ಜನತೆ ಬೆಳೆಯಬೇಕು, ಎಲ್ಲರೂ
ಆನಂದಿತರಾಗಬೇಕು. ನಮ್ಮ ಸಂಸ್ಕೃತಿ, ನಮ್ಮ ಸಾಹಿತ್ಯ, ನಮ್ಮ ಕಲೆ, ಇವೆಲ್ಲವೂ ಬೆಳೆದು ಇಡೀ ಭಾರತ
ದಲ್ಲಿಯೇ ಅಲ್ಲ, ಇಡೀ ಪ್ರಪಂಚದಲ್ಲಿಯೇ ಹೆಚ್ಚಿನ ಕೀರ್ತಿ ಪಡೆಯುವಂತಾಗಬೇಕು. ಅಂತಹ ಒಂದು
ಕಾರ್ಯಕ್ಕೆ ಇವೊತ್ತು ನಾವು ಅಂಕುರಾರ್ಪಣ ಮಾಡೋಣ ಎನ್ನುವ ಮಾತನ್ನು ತಿಳಿಸಿ, ಈ ಠರಾವನ್ನು
ತಮ್ಮ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ (ಹಿರಿಯೂರು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತು ಕನ್ನಡ
ಕರ್ನಾಟಕ ಚರಿತ್ರೆಯಲ್ಲಿ ಒಂದು ಶುಭದಿವಸ ಎಂದು ನಾನು ಭಾವಿಸಿದ್ದೇನೆ. ... ಒಂದು ಕನ್ನಡವಲ್ಲ
ಬೇಕು, ಅಲ್ಲಲ್ಲಿ ಹರಿದು ಹಂಚಿಹೋಗಿದ್ದ ಭಾಗಗಳು ಒಟ್ಟಾಗಿ ಸೇರಿ ... ಎಂಬ ಮಾತು
ನಾಡು ಬೆಳೆದು, ಆ ನಾಡಿಗೆ ಕರ್ನಾಟಕ ಎಂದು ಹೆಸರು ಕೊಡಬೇಕು

ಅದಕ್ಕೆ ರಾಜಕೀಯವಾಗಿ ಕೂಡ ತನ್ನದೇ ಆದಂಥ ಚರಿತ್ರೆಯ ಆಧಾರವಿದೆ. ಭಾರತದ ರಾಜಕೀಯದಲ್ಲಿಯೂ ಸಹ ಇದಕ್ಕೆ ಒಂದು ಸ್ಥಾನ ಕೊಟ್ಟಿದ್ದನ್ನು ನಾವು ೧೯೨೦ನೇ ಇಸವಿಯಲ್ಲಿ ನೋಡಬಹುದು. ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟ ಮಾಡುವ ಕಾಲದಲ್ಲಿ, ಸ್ವಾತಂತ್ರ್ಯ ಹೋರಾಟದ ತಿಳಿವಳಿಕೆ ಹಳ್ಳಿ ಹಳ್ಳಿಯಲ್ಲಿರುವ ಎಲ್ಲ ಜನತೆಗೂ ತಲುಪಬೇಕಾದರೆ, ಇದನ್ನು ಒಂದು ಆಂದೋಳನವನ್ನಾಗಿ ಮಾಡಬೇಕಾದರೆ, ಪಕ್ಷವನ್ನು ಆಡಳಿತದ ದೃಷ್ಟಿಯಿಂದ ಒಂದೇ ಅಲ್ಲ, ರಾಜಕೀಯವಾಗಿಯೂ ಕೂಡ ಭಾಷೆಯ ಆಧಾರದ ಮೇಲೆ ಕಟ್ಟಬೇಕು ಎಂಬ ಅಭಿಪ್ರಾಯವನ್ನು ೧೯೨೦ರ ಸುಮಾರಿಗೆ ತಳೆದು ಅದನ್ನು ಪುಷ್ಟೀಕರಿಸಿಕೊಂಡು ಬಂದಿದ್ದೇವೆ. ಹೀಗಾಗಿ ನಾವು ನಮ್ಮ ಕನ್ನಡ ನಾಡಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ ಎಂದು ಇದ್ದಿದ್ದನ್ನು ನೋಡಿದ್ದೇವೆ. ಮೈಸೂರಿನಲ್ಲಿ ಮೈಸೂರು ಕಾಂಗ್ರೆಸ್ ಎಂದು ಇದ್ದಿದ್ದನ್ನು ನೋಡಿದ್ದೇವೆ. ಇದೆಲ್ಲವನ್ನೂ ಸೇರಿಸಿ ಕನ್ನಡ ನಾಡು ಒಂದಾಗಬೇಕು. ಕರ್ನಾಟಕ ವಿತ್ ಮೈಸೂರು ಎಂದು ಆಗಬೇಕು ಎಂದು ನಾವು ಹೇಳುತ್ತಿರುವಾಗ ಕೆಲವು ಮೇಧಾವಿಗಳನ್ನು ಸ್ಮರಣೆ ಮಾಡಿಕೊಂಡರೆ ತಪ್ಪಾಗಲಾರದು. ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಗಂಗಾಧರ್ ದೇಶಪಾಂಡೆ ಮುಂತಾದ ಮೇಧಾವಿಗಳು ಈ ಕನ್ನಡ ನಾಡು ಒಂದಾಗಬೇಕು ಎಂದು ಹೇಳಿಕೊಂಡು ಎಂದಿದ್ದರ ಸಲುವಾಗಿ ತಾರೀಖು ೧ನೇ ನವೆಂಬರ್ ೧೯೫೬ ರಂದು ಅವರು ಬಯಸಿದಷ್ಟು ಆಗದಿದ್ದರೂ, ಕನ್ನಡ ನಾಡು ಒಂದಾಗಿದ್ದನ್ನ ನಾವು ಕಂಡಿದ್ದೇವೆ. 'ಇನ್ನೂ ಕೆಲವು ಭಾಗಗಳು ನಮಗೆ ಬರಬೇಕಾದದ್ದು ಇದೆ. ಅದರ ಬಗ್ಗೆ ವಿಚಾರ ಮಾಡೋಣ. ಆದರೆ ಮಾನ್ಯ ಮುಖ್ಯಮಂತ್ರಿಗಳು ಅಭಿಪ್ರಾಯ ಕೊಟ್ಟಂತೆ, ಈ ಸಭೆಗೆ ವಿಷದವಾಗಿ ತಿಳಿಸಿದಂತೆ, ಇಲ್ಲಿಯವರೆಗೆ ಕಾರಣಾಂತರದಿಂದ ನಾವು ಈ ನಾಡಿಗೆ ಕರ್ನಾಟಕ ನಾಡು ಎಂದು ಹೆಸರು ಇಡುವುದಕ್ಕೆ ಸಾಧ್ಯವಾಗಲಿಲ್ಲ. ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ತಾರೀಖು ೪ನೇ ಆಗಸ್ಟ್ ೧೯೬೨ ರಂದು ಈ ಸಭೆಯಲ್ಲಿ ಇದೇ ವಿಷಯದಲ್ಲಿ ಒಂದು ನಿರ್ಣಯ ಬಂತು. ಆ ನಿರ್ಣಯ ರಾತ್ರಿ ಎಂಟು ಗಂಟೆಯ ಸಮಯದಲ್ಲಿ ಪಾಸಾಗುತ್ತದೆ, ಈ ನಾಡಿಗೆ ಕರ್ನಾಟಕ ಎಂಬ ಹೆಸರು ಬರುತ್ತದೆ ಎಂದು ನಾವೆಲ್ಲ ಭಾವಿಸಿಕೊಂಡು ಕಾತುರತೆಯಿಂದ ಕಾದಿದ್ದವು.

3-00 P.M.

ಆದರೆ ಕಾರಣಾಂತರದಿಂದ ಅಂದಿನ ಮುಖ್ಯಮಂತ್ರಿಗಳು ಆ ಒಂದು ಸಮಯಕ್ಕೆ ಸಹಕಾರಿಯಾಗಲಿಲ್ಲ. ಆ ಒಂದು ಪ್ರೊಸೀಡಿಂಗ್ಸ್ ಈಗ ನನ್ನ ಮುಂದೆ ಇದೆ. ನಾನು ಈ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕಾರಣಾಂತರಗಳಿಂದ ಆ ಸಭೆಯಲ್ಲಿ ಅದು ಆಗಲಿಲ್ಲ. ಮುಖ್ಯ ಮಂತ್ರಿಗಳು ಈ ಒಂದು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಈ ಸಮಯ ಒಂದು ಕಾಲಚಕ್ರ, ಈ ಕಾಲಚಕ್ರ ಉರುಳುವುದನ್ನು ಪ್ರಪಂಚದಲ್ಲಿ ಯಾರೂ ತಡೆಯಲಾರರು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇನ್ನು ೧೦ ದಿವಸಗಳು ಮುಗಿದರೆ ಆಗಸ್ಟ್ ೪ನೇ ತಾರೀಖು ಬರುತ್ತದೆ. ೧೦ ವರ್ಷಗಳಿಗೆ ೧೦ ದಿವಸಗಳು ಕಡಿಮೆ ಇರುವಾಗ ಇವೊತ್ತಿನ ದಿವಸ ಈ ಸಭೆಯಲ್ಲಿ ಈ ಒಂದು ನಿರ್ಣಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸುತ್ತಿದ್ದಾರೆ. ಇವಕ್ಕೆ ಈಗ ಆಡಳಿತವನ್ನು ನಡೆಸತಕ್ಕ ಪಕ್ಷದಲ್ಲಿ ಪಕ್ಷದ ಒಮ್ಮತ ಇದೆ ಎನ್ನುವ ಅಭಿಪ್ರಾಯ ಎಲ್ಲರಿಗೂ ಗೊತ್ತಿರತಕ್ಕದ್ದು. ಆದ್ದರಿಂದ ನಾನು ಈ ಬಗ್ಗೆ ಹೆಚ್ಚು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಆಗಬೇಕು ಆಗಬಾರದು ಎನ್ನುವ ಜಿಜ್ಞಾಸೆಯನ್ನು ಇಲ್ಲಿ ಹೇಳಿ ಜಿಜ್ಞಾಸೆಯ ಒಂದು ಅಭಿಪ್ರಾಯವನ್ನು ಮಂಡಿಸುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ಅದು ಆಗಬೇಕು, ಆಗಲೇಬೇಕು; ಎಂದು ಭಾವಿಸಿ ಕವಿಗಳಿಂದ ಮೊದಲ್ಗೊಂಡು ಸಾಮಾನ್ಯ ಜನತೆಯವರೆಗೆ ಈ ನಾಡಿಗೆ 'ಕರ್ನಾಟಕ' ಎನ್ನುವ ಹೆಸರು ಇಡಬೇಕು ಎನ್ನುವವರಲ್ಲಿ ಹೆಚ್ಚು ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ನಿರ್ಣಯವನ್ನು ಪ್ರಸ್ತಾಪ ಮಾಡುವಾಗ 'ನ' ಕಾರ ಇರಬೇಕು, 'ಣ' ಕಾರ ಇರಬಾರದು ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ೧೨ ವರ್ಷಗಳ ಹಿಂದೆ ಆಗಬೇಕಾದಂಥಾದ್ದು, ೧೦ ವರ್ಷಗಳು ಆದನಂತರ ಆಗತಕ್ಕಂಥಾ ಕಾಲ ಬಂದಿದೆ. ಈ ಸಭೆಯ ಸರ್ವ ಸದಸ್ಯರೂ ಕೂಡ ಒಮ್ಮತದಿಂದ ಈ ಒಂದು ನಿರ್ಣಯವನ್ನು ಪಾಸು ಮಾಡಿಕೊಟ್ಟು ಕನ್ನಡ ನಾಡಿಗೆ 'ಕರ್ನಾಟಕ' ಎನ್ನುವ ಹೆಸರು ಒಪ್ಪುವಂಥಾ ಹೆಸರು. ಅದು ಆಗುವುದಕ್ಕೆ ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕು. ಅದನ್ನು ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ ಎಂದು ಪ್ರಾರ್ಥಿಸಿ ನಾನು ನನ್ನ ಅಭಿಪ್ರಾಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಇದ್ದೇನೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ ಅಷ್ಟೇ ಅಲ್ಲ. ಇವೊತ್ತಿನ ದಿವಸ ನಾನು ಸೇರಿರತಕ್ಕಂಥಾ ಪಕ್ಷದ ಅಭಿಪ್ರಾಯ ಕೂಡ ಆಗಿದೆ. ನಮ್ಮ ಪಕ್ಷದ ಸಭೆಯಲ್ಲಿ ಈ ಬಗೆ ನಾವು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಕೆಲವು ಹಿತಾಸಕ್ತಿಗಳು ಮಧ್ಯಂತರ ಚುನಾವಣೆಯಲ್ಲಿ ಮತ್ತು ತದನಂತರ ನಮ್ಮ ಪಕ್ಷದ ನಿಲುವಿನ ಬಗ್ಗೆ ನಮ್ಮನ್ನು ಕೀಟಲೆ ಮಾಡಿದ್ದಕ್ಕೆ ಉತ್ತರವನ್ನು ಈ ಪಕ್ಷ ರಾಜ್ಯದ ಮುಂದೆ ಇಟ್ಟಿದೆ. ನಮ್ಮ ಕರ್ನಾಟಕವನ್ನು ಸಂಪದ್ಭರಿತವಾದ ರಾಜ್ಯವನ್ನಾಗಿ ಮಾಡು

(ಶ್ರೀ ಕೆ. ಎಸ್. ರಂಗನಾಥ)

ವುದರಲ್ಲಾಗಲೀ, ೨೦೦ ಮೈಲಿ ಕರಾವಳಿಯನ್ನು ಅಭಿವೃದ್ಧಿ ಪಡಿಸುವುದರಲ್ಲಾಗಲೀ ಅದಕ್ಕೆ ಹೊಂದಿಕೊಂಡಿರ ತಕ್ಕ ಪಶ್ಚಿಮ ಘಟ್ಟವನ್ನು ಅಭಿವೃದ್ಧಿ ಪಡಿಸುವುದಕ್ಕಾಗಲೀ ಮೈದಾನ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕಾಗಲೀ ಕರ್ನಾಟಕದಲ್ಲಿರತಕ್ಕ ಜಲ್ಲ ಮತ್ತು ಅದರ ಅಭಿವೃದ್ಧಿ ಮಾಡತಕ್ಕ ವಿಷಯದಲ್ಲಾಗಲೀ ಯಾವ ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಯಾವ ರಾಜಕೀಯ ಪಕ್ಷಕ್ಕೂ ನಾವು ಎರಡನೆಯವ ರಾಗಿರುವುದಿಲ್ಲ ಎಂದು ನಾವು ಈಗ ತೋರಿಸಿಕೊಟ್ಟಿದ್ದೇವೆ. ಈ ಮಾನ್ಯ ಸಭೆಯ ಎಲ್ಲಾ ಮಾನ್ಯ ಸದಸ್ಯರೂ ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಈ ಒಂದು ನಿರ್ಣಯಕ್ಕೆ ತಮ್ಮ ಬೆಂಬಲವನ್ನು ಕೊಡ ಬೇಕು. ಈ ರಾಜ್ಯಕ್ಕೆ 'ಕರ್ನಾಟಕ' ರಾಜ್ಯ ಎಂದು ಕರೆಯುವುದಕ್ಕೆ ಎಲ್ಲರೂ ಸಹಾಯ ಮಾಡಬೇಕು ಎಂದು ಕೇಳಿಕೊಂಡು ಈ ನಿರ್ಣಯಕ್ಕೆ ನನ್ನ ಅನುಮತಿ ಮತ್ತು ನನ್ನ ಬೆಂಬಲವನ್ನು ಕೊಡುತ್ತೇನೆ. ನಾನು ಇನ್ನು ಹೆಚ್ಚು ಭಾಷಣವನ್ನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಹೆಚ್ಚು ಹೇಳುವುದರಲ್ಲಿ ಅರ್ಥ ವಿಲ್ಲ ಇದು 'ಕರ್ನಾಟಕ' ಎನ್ನುವ ಹೆಸರು ಎಲ್ಲರೂ ಒಪ್ಪತಕ್ಕ ಹೆಸರು. ಅದು ಆಗಬೇಕು, ಆಗಲೇ ಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The House will now rise to meet again after half-an-hour.

The House rose for Tea at Five minutes past Three of the clock and re-assembled at forty one Minute past Three of the clock.

[MADAM SPEAKER in the Chair]

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಸಭಾಧ್ಯಕ್ಷಣಿಯರೆ, ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಈ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಪುನರ್ ನಾಮಕರಣ ಮಾಡ ಬೇಕೆಂಬುದರ ಬಗ್ಗೆ ಒಂದು ನಿರ್ಣಯವನ್ನು ಈ ಸಭೆಯ ಮುಂದಿಡುತ್ತಾ ಅದರ ಔಚಿತ್ಯ ಮತ್ತು ವೈಯಕ್ತಿಕ ಅಭಿಪ್ರಾಯ ಬೇರೆ ಇದ್ದರೂ ಕೂಡ ಅವರ ಪಕ್ಷದ ಅಭಿಪ್ರಾಯವನು ಮನ್ನಿಸಿ ಇದನ್ನು ತಂದಿದ್ದಾರೆ ಎಂದು ವಿವರ ಪೂರ್ಣವಾಗಿ ಹೇಳಿದ್ದಾರೆ. ಅವರು ಅನೇಕ ವಿಷಯಗಳನ್ನು ಮತ್ತು ರಾಜ್ಯದ ಐತಿಹಾಸಿಕ ಘಟನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಪಕ್ಷವಾದರೂ ಕೂಡ ಈ ನಿರ್ಣಯವನ್ನು ಹಿಂದೆ ಅನೇಕ ಸಲ ಪಕ್ಷದ ವತಿಯಿಂದ ತಂದಿರತಕ್ಕಂತಹ ನಿದರ್ಶನಗಳು ಅನೇಕ ಇವೆ. ಇವೊತ್ತಿನ ದಿವಸ ಈ ನಿರ್ಣಯದಿಂದ ಈ ಸದನದ ಸದಸ್ಯರಿಗೆ ಮಾತ್ರವಲ್ಲದೆ, ಇಡೀ ನಮ್ಮ ರಾಜ್ಯದ ವಿವಿಧ ಭಾಗಗಳಲ್ಲಿರ ತಕ್ಕಂತಹ ಎಲ್ಲಾ ಕನ್ನಡಿಗರಿಗೂ ಒಂದು ಮಹದಾನಂದವನ್ನು ಉಂಟು ಮಾಡಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅಷ್ಟೇ ಅಲ್ಲದೆ ಇವತ್ತಿನ ದಿನ ಹರಿದು ಹಂಚಿ ಹೋಗಿದ್ದ ಕನ್ನಡ ನಾಡನ್ನು ಒಂದುಗೂಡಿಸಿ ಕರ್ನಾಟಕ ರಾಜ್ಯವಾಗಿ ಮಾಡಬೇಕೆಂದು ತಮ್ಮ ತನು ಮನ ಧನಗಳನ್ನು ಅರ್ಪಿಸಿ ಹೋರಾಟ ಮಾಡಿರತಕ್ಕಂತಹ ಅನೇಕ ಮಹಾತ್ಮರು ನಮ್ಮಲ್ಲಿ ಇದ್ದರು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ನಿರ್ಣಯವನ್ನು ಮಂಡಿಸತಕ್ಕ ಕಾಲದಲ್ಲಿ ಹಾಗೆ ಹೋರಾಡಿದಂತಹ ಹುತಾತ್ಮರ ತ್ಯಾಗಗಳ ಸ್ಮರಣೆಯನ್ನು ಮಾಡಬೇಕಾಗಿತ್ತು ಎಂದು ನನಗನಿಸುತ್ತದೆ. ಏಕೆಂದರೆ ಇದು ಆಡಳಿತ ನಡೆಸ ತಕ್ಕಂತಹ ಪಕ್ಷದ ಒಂದು ಹಕ್ಕು ಆದರೂ ಕೂಡ ಅದನ್ನು ಉಲ್ಲೇಖಿಸಬೇಕಾಗಿತ್ತು ಎಂದು ಹೇಳುತ್ತೇನೆ. ಇದನ್ನು ಸರ್ವಾನುಮತದಿಂದ ಕಾರ್ಯಗತ ಮಾಡತಕ್ಕಂತಹ ಜವಾಬ್ದಾರಿ ನಮಗೆ ಇದೆ ಎಂದು ಸಹ ಮಾನ್ಯ ಮುಖ್ಯ ಮಂತ್ರಿಯವರು ಉಲ್ಲೇಖಿಸಿದ್ದಾರೆ. ಅದೇ ರೀತಿ ಹಿಂದಿನ ಆಡಳಿತ ಪಕ್ಷದವರು ಈ ರೀತಿ ನಾಮಕರಣ ಮಾಡತಕ್ಕಂತಹ ನಿರ್ಣಯವನ್ನು ತಂದು ಚರ್ಚೆ ಮಾಡಿ, ಕಾರ್ಯಗತ ಮಾಡತಕ್ಕ ವಿಚಾರದಲ್ಲಿ ವಿಫಲರಾದರು ಎಂದು ಸಹ ಸ್ಪಷ್ಟವಾಗಿ ಹೇಳಿದರು. ನಿಜವಾಗಿಯೂ ಈ ನಿರ್ಣಯವನ್ನು ಸರ್ವಾನುಮತ ದಿಂದ ಅಂಗೀಕರಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರು ಧಿಟ್ಟತನದಿಂದ ಇದನ್ನು ಮಂಡಿಸಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮಾನವನಿಗೆ ಎಲ್ಲಾ ತರದ ಹಕ್ಕುಗಳು ಇದ್ದರೂ ಸಹ ಒಂದು ಉತ್ತಮವಾದ ಕೆಲಸಕ್ಕೆ ಸರ್ವಾನುಮತದ ಒಪ್ಪಿಗೆಯನ್ನು ಪಡೆದು ಕೊನೆಗಾದರೂ ಇದು ಬರುವುದಕ್ಕೆ ಸಾಧ್ಯವಾಯಿತು ಎಂದು ಹೇಳಿದರು. ಅದೇ ರೀತಿ ನಮ್ಮ ವಿರೋಧ ಪಕ್ಷದ ವತಿಯಿಂದ ಈ ಪಕ್ಷದ ಸರ್ವಾನುಮತದ ನಿರ್ಣಯಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ ಎಂಬ ಮಾತನ್ನು ಇಲ್ಲಿ ಹೇಳಲಿಚ್ಛಿಸು ತ್ತೇನೆ. ಹೀಗೆ ಹೇಳುತ್ತಾ ಮಾನ್ಯ ಮಂತ್ರಿಯವರು ಆಡಿದಂತಹ ಒಂದೆರಡು ಮಾತುಗಳ ಬಗ್ಗೆ ನಾನು ಎರಡು ಮಾತುಗಳನ್ನು ಆಡದಿದ್ದರೆ ಅದು ನಮ್ಮ ಪಕ್ಷದ ಹಿತದೃಷ್ಟಿಯಿಂದ ಮತ್ತು ನಮ್ಮ ವಿರೋಧ ಪಕ್ಷದ ಹಿತದಿಂದ ಸಾಧುವಾಗಲಾರದೆಂದು ತಿಳಿಯುತ್ತೇನೆ.

ಮೊದಲನೆಯದಾಗಿ, ಕಳೆದ ಚುನಾವಣೆಯ ಕಾಲದಲ್ಲಿ ವಿರೋಧ ಪಕ್ಷದವರು ರಾಜ್ಯಕ್ಕೆ ಕರ್ನಾಟಕ
ಎಂಬ ಹೆಸರು ಇಡುವುದಕ್ಕೆ ಈ ಆಡಳಿತ ಪಕ್ಷದಿಂದ ಸಾಧ್ಯವಾಗಲಿಕ್ಕಿಲ್ಲ ಎಂದು ಹೇಳಿಕೊಂಡು ಬಂದಿದ್ದಾರೆ.
ಮತ್ತು ಜನಸಾಮಾನ್ಯರಿಗೆ ನಿಮ್ಮ ಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆದು ಸರ್ವಾನುಮತದಿಂದ ಅದನ್ನು
ಕಾರ್ಯಗತ ಮಾಡುವುದಕ್ಕೆ ತಯಾರಾಗಿದ್ದೇವೆಂದು ಹೇಳಿಕೊಂಡು ಬಂದಿದ್ದೇವೆಂದು ಮಾನ್ಯ ಮುಖ್ಯ
ಮಂತ್ರಿಯವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ನಾನಾದರೂ ಹೇಳುವುದೇ
ನೆಂದರೆ ಹಿಂದಿನ ಮಂತ್ರಿ ಮಂಡಲದಲ್ಲಿ ಇವರು ಸಹ ಒಬ್ಬರು ಸದಸ್ಯರಾಗಿದ್ದರು. ಆಗಿನ ಸಂದರ್ಭದಲ್ಲಿ
ಯಾರ್‍ಯಾರು ಹೇಗೆ ಹೇಗೆ ಹೇಳಬೇಕೋ ಅದನ್ನು ಹೇಳಿದ್ದಾರೆ. ಹಿಂದೆ ಇದ್ದಂತಹ ಸರ್ಕಾರದವರು ಸಹ
ಈ ಕರ್ನಾಟಕ ಎಂಬ ಹೆಸರನ್ನು ಇಡುವುದಕ್ಕೆ ಪ್ರಯತ್ನ ಪಟ್ಟರೂ ಸಹ ಅದನ್ನು ಕಾರ್ಯಗತ ಮಾಡು
ವುದಕ್ಕೆ ಏಕೆ ಸಾಧ್ಯವಾಗಲಿಲ್ಲವೆಂಬುದನ್ನು ಜನತೆಯೇ ವಿಮರ್ಶೆ ಮಾಡಬೇಕಾಗಿದೆ. ೧೯೫೦ನೇ ಇಸವಿಯಲ್ಲಿ
ಅರಸೀಕೆರೆಯಲ್ಲಿ ಒಂದು ಚರಿತ್ರಾರ್ಹವಾದ ಸಭೆ ನಡೆದಿತ್ತು. ಅದು ನನಗೆ ಈಗಲೂ ಜ್ಞಾಪಕ ಇದೆ.
ಕರ್ನಾಟಕ ಎಂಬ ಹೆಸರನ್ನು ವಿರೋಧ ಮಾಡತಕ್ಕ ಜನರು ಸಹ ಅಲ್ಲಿ ಬಂದು ಮಾರಾ ಮಾರಿ ಆಗುವ
ಸನ್ನಿವೇಶ ಇತ್ತು. ಆಗ ಕೆಲವು ಜನರನ್ನು ಬಿಟ್ಟರೆ, ಬಾಕಿ ಉಳಿದ ಎಲ್ಲಾ ಜನರು ಕರ್ನಾಟಕ ಎಂದು
ಹೆಸರಿಡಬೇಕೆಂದು ನಿರ್ಣಯ ಮಾಡಿದ್ದರು. ಕರ್ನಾಟಕವೆಂದು ಹೆಸರಿಡಬೇಕೆಂದು ಎಲ್ಲರೂ ಹಿಂದಿನ ಅಖಿ
ಭಾರತ ಕಾಂಗ್ರೆಸ್ ಇದ್ದಾಗ ಒಪ್ಪಿಕೊಂಡು ನಿರ್ಣಯ ಮಾಡಿದ್ದಾರೆ. ಆದ್ದರಿಂದ ಇವತ್ತು ಕರ್ನಾಟಕ ಎಂದು
ಹೆಸರಿಡತಕ್ಕ ವಿಚಾರವನ್ನು ಚುನಾವಣೆಯಲ್ಲಿ ರಾಜಕೀಯವಾಗಿ ಬೆಳೆಸಿಕೊಂಡು ಯಾವ ಪಕ್ಷವೂ ಹೋಗಿಲ್ಲ
ವೆಂಬುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಕರ್ನಾಟಕವೆಂಬ ಹೆಸರನ್ನು ನಾವೆಲ್ಲರೂ ಸ್ವಾಗತ ಮಾಡು
ತ್ತಿದ್ದೇವೆ. ಇವತ್ತು ನಾವು ಇದನ್ನು ಸ್ವಾಗತ ಮಾಡುತ್ತಿರುವಾಗ ಮತ್ತು ರಾಜ್ಯದ ಹೆಸರನ್ನು ಕರ್ನಾಟಕ
ವೆಂದು ನಾಮಕರಣ ಮಾಡುತ್ತಿರುವಾಗ, ಕರ್ನಾಟಕದ ಏಕೀಕರಣಕ್ಕೋಸ್ಕರ ಮತ್ತು ಹರಿದು ಹಂಚಿ
ಹೋಗಿದ್ದ ಕನ್ನಡ ಪ್ರದೇಶಗಳನ್ನು ಒಂದುಗೂಡಿಸುವುದಕ್ಕೋಸ್ಕರ ತ್ಯಾಗವನ್ನು ಮಾಡಿದಂತಹ ಕೆಂಗಲ್
ಹನುಮಂತಯ್ಯನವರನ್ನು ಸ್ಮರಿಸಬೇಕಾಗಿದೆ. ದುರದೃಷ್ಟವಶಾತ್, ಈ ಕರ್ನಾಟಕದ ಏಕೀಕರಣಕ್ಕೋಸ್ಕರ
ಹೋರಾಟ ನಡೆಸಿ ತಮ್ಮ ರಾಜಕೀಯ ಸ್ಥಾನಮಾನಗಳನ್ನು ಸಹ ಮಾನ್ಯ ಹನುಮಂತಯ್ಯನವರು ಕಳ
ಕೊಂಡಿದ್ದಾರೆ. ಅದೇ ರೀತಿ ಇವತ್ತು ಕರ್ನಾಟಕ ಎಂದು ಹೆಸರಿಡತಕ್ಕಂತಹ ಸಂದರ್ಭದಲ್ಲಿ ಅವರಿಗೆ ಇದ್ದ
ಸ್ಥಾನವನ್ನು ಸಹ ಕಳಕೊಂಡಿದ್ದಾರೆ. ಈ ಸಂತೋಷದಾಯಕವಾದ ಸನ್ನಿವೇಶದಲ್ಲಿ ಶ್ರೀ ಕೆ. ಹನುಮಂತಯ್ಯ
ನವರು ಕರ್ನಾಟಕದ ಏಕೀಕರಣಕ್ಕೋಸ್ಕರ ಮತ್ತು ಹರಿದು ಹಂಚಿ ಹೋದ ಕನ್ನಡ ಪ್ರದೇಶಗಳನ್ನು ಒಟ್ಟು
ಗೂಡಿಸುವುದಕ್ಕೋಸ್ಕರ ಮಾಡಿರುವ ತ್ಯಾಗವು ನಿಜವಾಗಿಯೂ ಪ್ರಶಂಸನೀಯವಾದುದು ಮತ್ತು ನಿಜ
ವಾಗಿಯೂ ಅದನ್ನು ತಾವೆಲ್ಲರೂ ಒಮ್ಮತದಿಂದ ಒಪ್ಪಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮುಖ್ಯಮಂತ್ರಿಗಳ ನಿರ್ಣಯದ ಜೊತೆಗೆ ಈ ಕರ್ನಾಟಕಕ್ಕೆ ತ್ಯಾಗ ಮಾಡಿರತಕ್ಕಂಥ ಹುತಾತ್ಮರಿಗೆ
ಸ್ಮರಣೆ ಮಾಡುವಂಥ ಒಂದು ಅಂಶವನ್ನು ಅದರಲ್ಲಿ ಸೇರಿಸಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ
ಮನವಿ ಮಾಡಿಕೊಳ್ಳುತ್ತೇನೆ. ಶ್ರೀಮಾನ್ ಹನುಮಂತಯ್ಯನವರು ಕರ್ನಾಟಕಕ್ಕಾಗಿ ಹೋರಾಟ
ನಡೆಸಿದಾಗ ಕರ್ನಾಟಕ ಏಕೀಕರಣ ಆಗಬಾರದೆಂಬ ಒಂದು ಪಂಗಡ ಏನಿತ್ತೋ ಅದು ಮಾನ್ಯ
ಶ್ರೀ ಹನುಮಂತಯ್ಯನವರ ಮೇಲೆ ಒಂದು ದೊಡ್ಡ ಆಂದೋಳನ ನಡೆಸಿತು. ಅನೇಕರು ಆ ಒಂದು
ಆಂದೋಳನದಲ್ಲಿ ಸಿಕ್ಕಿ ನುಚ್ಚು ನೂರಾದರು. ಅವರ ಒಂದು ದಿಟ್ಟತನಕ್ಕಾಗಿ ರಾಜ್ಯ ಸರ್ಕಾರದವರೂ
ಹಾಗೂ ಕರ್ನಾಟಕದ ಜನತೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಅವತ್ತಿನ ದಿವಸ ಆ ಹೋರಾಟ
ಪ್ರಾರಂಭವಾಡಿದ್ದು, ಇವತ್ತು ಮಾನ್ಯ ಶ್ರೀ ದೇವರಾಜ್ ಅರಸ್ ಅವರ ಮುಖ್ಯ ಮಂತ್ರಿಗಳ ಕಾಲದಲ್ಲಿ
ಕಾರ್ಯಗತವಾಗಲಿದೆ. ಇದು ಸಂತೋಷವೇ ಸರಿ. ಮಾನ್ಯ ಮುಖ್ಯ ಮಂತ್ರಿಗಳು ಈ ನಿರ್ಣಯವನ್ನು
ಮಂಡಿಸಿ, ಈ ಸಭೆಯ ಒಮ್ಮತದ ಬೆಂಬಲವನ್ನು ಅಪೇಕ್ಷಿಸಿರುವ ಸಂದರ್ಭದಲ್ಲಿ ನಾನು ಒಂದಲ್ಲಿ
ಮನವಿಯನ್ನು ಮಾಡಬೇಕಾಗುತ್ತದೆ. ಈ ರಾಜ್ಯದ ಹೆಸರು ಕರ್ನಾಟಕವೆಂದು ಪುನರ್ನಾಮಕರಣ
ಮಾಡುವಾಗ ಆಡಳಿತವನ್ನು ಪರಿಶುದ್ಧವಾಗಿ ನಡೆಸಿಕೊಂಡು ಹೋಗಬೇಕು. ಚೈತನ್ಯಪೂರ್ಣವಾದ
ಪ್ರಧಾನಿ ಮಂತ್ರಿಮಂಡಲ, ಹಾಗೂ ಅಧಿಕಾರವರ್ಗದವರು ಇದಕ್ಕೆ ಸಹಕರಿಸಬೇಕು. ಅಧಿಕಾರವರ್ಗದವರ
ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳು ಇದ್ದಾರೆ. ಅವರು ಒಂದು ವಿಶೇಷ ತರಹ ಕಾರ್ಯಕ್ರಮವನ್ನು
ಹಾಕಲಿ. ಎಷ್ಟು ದುಡ್ಡು ಖರ್ಚಾದರೂ ಚಿಂತಿಲ್ಲ. ಅಧಿಕಾರಿಗಳು ಒಂದು ಪ್ರಮಾಣವಚನವನ್ನು ಈ
ಕರ್ನಾಟಕ ಎಂದು ಹೆಸರಾದ ದಿವಸದಿಂದ ಶುದ್ಧ ಆಡಳಿತವನ್ನು ಕೊಡಬೇಕು. ಲಂಚರುಷುವತ್ತು
ಬಿಡಬೇಕೆಂಬುದು ಮುಖ್ಯ. ಅದಕ್ಕಾಗಿ ಒಂದು ಸೆರಿಮೋನಿಯಲ್ ಫಂಕ್ಷನ್ ತಾವು ವ್ಯವಸ್ಥೆ ಮಾಡಬೇಕು,
ಇವತ್ತಿನ ದಿವಸ ಕರ್ನಾಟಕ ಎಂದು ಹೆಸರು ಏನು ಇಟ್ಟಿದ್ದೀರಿ, ಇಂದಿನಿಂದ ಅಚ್ಚ ಕನ್ನಡದ ಆಡಳಿತ ಅಚ್ಚ
ಕನ್ನಡಿಗರ ಸಹೃದಯದ ಒಂದು ಸಾರ್ವಜನಿಕರಿಗೆ ಸಹಾಯ ದೊರಕುವ ವ್ಯವಸ್ಥೆ ಈ ಸರ್ಕಾರದಲ್ಲಿ
ಇವತ್ತು ಆಗಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಇನ್ನು ಸನ್ಮಾನ್ಯ ಶ್ರೀ ಕೆ. ಎಚ್.
ರಂಗನಾಥ್ ಅವರು ಅವರ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ಅವರು ಈ ಪಕ್ಷಕ್ಕೆ ಸೇರುವ

ಶ್ರೀ (ಎಚ್.ಎಸ್. ಸಿದ್ದಪ್ಪ)

ಮುಂದೆ ಕರ್ನಾಟಕ ಸೋಷಿಯಲಿಸ್ಟ್ ಪಕ್ಷದಲ್ಲಿದ್ದರು. ಅವರ ಪಕ್ಷದ ಹೆಸರನ್ನು ಕರ್ನಾಟಕವೆಂದು ಇಟ್ಟುಕೊಂಡಿದ್ದರು. ಬಹುತೇಕ ಅವರಿಗೆ ಇದರಿಂದ ಆಗಿರುವಷ್ಟು ಆನಂದ ಇನ್ನು ಯಾರಿಗೂ ಆಗಿಲ್ಲವೆಂದು ನನಗನ್ನಿಸುತ್ತದೆ. ಅವರು ಸೋಷಿಯಲಿಸ್ಟ್ ಪಾರ್ಟಿ ಬಿಟ್ಟು ಬಂದು ಕಾಂಗ್ರೆಸ್ ಪಕ್ಷ ಸೇರಿದಮೇಲೆ ನನ್ನ ಸೋಷಿಯಲಿಸ್ಟ್ ಪಕ್ಷದ ಇಚ್ಛೆ ನೆರವೇರಿದೆ ಎಂದು ಮಹದಾನಂದ ಅವರಿಗೆ ಉಂಟಾಗಿದೆಯೆಂದು ನಾನು ತಿಳಿದಿದ್ದೇನೆ. ಅವರಲ್ಲಿ ಈಗ ನನ್ನ ಮನವಿ ಏನೆಂದರೆ, ಈ ಒಂದು ಸಂತೋಷ ಸನ್ನಿವೇಶದಲ್ಲಿ ಪಕ್ಷಾತೀತ ಆಡಳಿತ ಇರಬೇಕು. ಒಂದೇ ಪಕ್ಷ ಆಡಳಿತ ನಡೆಸುವುದು ಇರಲಿ, ದೇಶದ ಹಿತದೃಷ್ಟಿಯಿಂದ, ಕನ್ನಡಿಗರ ಹಿತದೃಷ್ಟಿಯಿಂದ ಯಾವ ಭೇದಭಾವ ಇಲ್ಲದೆ ರೈತಾಪಿ ಜನಗಳಿಗೆ, ಗ್ರಾಮಾಂತರ ಪ್ರದೇಶದ ಕನ್ನಡ ಜನರಿಗೆ ಈ ರಾಜಕೀಯದಲ್ಲಿ ಯಾವ ಒಂದು ಜಂಜಾಟ ಇಲ್ಲದೇ ಇರುವ ಆಡಳಿತದ ಮಾರ್ಗಗಳನ್ನು ನೀಡಬೇಕೆಂದು ನಾನೂ ಅವರಿಗೆ ಕಳಕಳಿಯಿಂದ ಮನವಿ ಮಾಡುತ್ತೇನೆ.

ಇನ್ನು ಕರ್ನಾಟಕವನ್ನು ಬೆಳಗಿಸುವ ಜವಾಬ್ದಾರಿ ಆಡಳಿತ ಪಕ್ಷದವರ ಮೇಲೆ ಅಷ್ಟೇ ಅಲ್ಲ, ನಮ್ಮೆಲ್ಲರ ಮೇಲೆಯೂ ಬಿದ್ದಿದೆ. ಇದನ್ನು ಯಾವ ದಿಶೆಯಿಂದ ಮುಂದೆ ತರಬೇಕು, ಯಾವ ದಿಶೆಯಲ್ಲಿ ಜನತೆಗೆ ಕಲ್ಯಾಣವಾಗಬೇಕೆಂಬುದು ಮುಖ್ಯ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಈ ಹೆಸರಿನಿಂದ ಪರಿಣಾಮ ಅಷ್ಟೇನೂ ಆಗುವುದಿಲ್ಲ. ಗುಲಾಬಿ ಹೂವಿನಲ್ಲಿ ಗುಲಾಬಿ ಕಂಪು ಇದ್ದೇ ಇರುತ್ತದೆಂದು ಹೇಳುವ ಹಾಗೆ ಆ ಹೆಸರು ಅಲ್ಲದೆ ಬೇರೆ ಯಾವ ಹೆಸರು ಇಟ್ಟರೂ ಅದರ ಕಂಪು ಅದಕ್ಕೆ ಇದ್ದೇ ಇರುತ್ತದೆಂದು ಕೆಲವು ಶಾಸಕರು ಉದಾಹರಣೆಯನ್ನು ಕೊಟ್ಟರು. ಹೆಸರಿನ ಪ್ರಭಾವ ಸಾಕಷ್ಟು ಇರುತ್ತದೆ. ಮಾನ್ಯ ಶ್ರೀ ಶೀರನಾಳಿ ಚಂದ್ರಶೇಖರ್ ಅವರು ಈ ಸಭೆಯಲ್ಲಿ ಮಾತನಾಡುವಾಗ ಜಾತಿಯ ಹೆಸರನ್ನು ಇಡುವುದನ್ನು ಇನ್ನುಮುಂದೆ ತಪ್ಪಿಸಬೇಕೆಂದು ಹೇಳಿದರು. ಇಲ್ಲಿ ಜಾತಿಯ ಹೆಸರನ್ನು ತಪ್ಪಿಸುವ ಪ್ರಮೇಯ ಇರುವುದಿಲ್ಲ. ಈಗ ಕರ್ನಾಟಕ ಎನ್ನುವ ಹೆಸರಿನ್ನೇನು ಇಟ್ಟಿದ್ದಾರೋ ಅದು ಯಾವ ಜಾತಿಯ ಹೆಸರಲ್ಲ, ಯಾವ ಜಾತಿಗೂ ಸಂಬಂಧಪಟ್ಟುದಲ್ಲ. ರಾಷ್ಟ್ರೀಯ ಭಾವೈಕ್ಯತೆಗೆ, ಕನ್ನಡಿಗರ ಒಕ್ಕೂಟಕ್ಕೆ ಕನ್ನಡಿಗರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ದೇಶಾಭ್ಯುದಯಕ್ಕೆ ಸರಿಹೋಗುವಂಥ ಹೆಸರಿದು. ಇದರಿಂದ ಹೆಚ್ಚು ಸಹಾಯ ಹಾಗೂ ಸಹಕಾರ ಆಗುತ್ತದೆಂಬ ದೃಢ ನಂಬಿಕೆ ದೃಢ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಇವತ್ತಿನಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸಹೋದ್ಯೋಗಿಗಳು ಕರ್ನಾಟಕದ ಇತರೇ ಕನ್ನಡ ಪ್ರದೇಶಗಳು ಏನು ನಮ್ಮ ಕೈಬಿಟ್ಟು ಹೋಗಿವೆಯೋ ಅವುಗಳನ್ನು ಆದಷ್ಟು ಜಾಗ್ರತೆಯಾಗಿ ಈ ರಾಜ್ಯಕ್ಕೆ ಸೇರಿಸುವ ಒಂದು ಅಚಲ ಪ್ರಯತ್ನವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ನಮ್ಮ ಇತರೇ ಕನ್ನಡಿಗರು, ನಮ್ಮ ರಾಜ್ಯಕ್ಕೆ ಇನ್ನೂ ಸೇರದೇ ಇರುವ ಕನ್ನಡಿಗರು, ಇವತ್ತಿನ ದಿವಸ ಬಹಳ ದುಃಖ ಪಡುತ್ತಿದ್ದಾರೆ. ಇಂತಹ ಸುದಿನದಲ್ಲಿ ನಾವು ಈ ರಾಜ್ಯದಲ್ಲಿ ಸೇರಿಲ್ಲವೇ ಎಂದು ಅವರು ಹಂಬಲಿಸುತ್ತಿದ್ದಾರೆ. ಅವರು ನಮ್ಮ ಅಣ್ಣತಮ್ಮಂದಿರು, ಅವರು ಕಷ್ಟದಲ್ಲಿ ಸಿಕ್ಕಿರುವುದು ನಾಚಿಕೆಯಾಗಿದೆ. ಕರ್ನಾಟಕವೆಂಬ ಹೆಸರಿನಿಂದ ಎಷ್ಟರಮಟ್ಟಿಗೆ ಆನಂದವಾಗಿದೆಯೋ ಅಷ್ಟೇ ವ್ಯಥೆ ನಾವು ನಮ್ಮ ಸಹೋದರರೊಡನೆ ಸೇರಲಿಲ್ಲವೇ ಎಂದು ಅವರಿಗೆ ಆಗುತ್ತಿದೆ. ಮಂತ್ರಿಮಂಡಲ ಇದನ್ನು ಹೋಗಲಾಡಿಸಿ ಆ ಪ್ರದೇಶಗಳನ್ನು ಕರ್ನಾಟಕ ರಾಜ್ಯದೊಳಗೆ ಆದಷ್ಟು ಜಾಗ್ರತೆಯಾಗಿ ವಿಲೀನವಾಗುವಂತೆ ಸರ್ವ ಪ್ರಯತ್ನವನ್ನು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಇಂದು ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿದ್ದೀರಿ. ಈ ಹೆಸರಿನ ದೀಪದಿಂದ, ಕರ್ನಾಟಕ ಜ್ಯೋತಿಯಿಂದ, ನಂದಾ ದೀವಿಗೆಯಿಂದ, ನಂದಾ ಜ್ಯೋತಿ ಬೆಳೆಯತಕ್ಕಂಥ ಸಹೃದಯದ ಕಾರ್ಯಕ್ರಮವನ್ನು ಹಾಕಿಕೊಂಡು ಈ ರಾಜ್ಯವನ್ನು ಬೆಳಗಿಸಬೇಕು, ಬೆಳಗಬೇಕೆಂದು ನಾವು ಮನವಿಮಾಡಿಕೊಳ್ಳುತ್ತೇನೆ. ಇವತ್ತಿನದಿವಸ ಈ ಬೆಂಗಳೂರು ನಗರದಲ್ಲಿ ಇರತಕ್ಕಂಥ ಎಲ್ಲಾ ಕಟ್ಟಡಗಳ ಮೇಲೂ ವಿದ್ಯುತ್ ದೀಪಗಳನ್ನು ಇಡೀ ರಾತ್ರಿಯೆಲ್ಲಾ ಹಾಕಬೇಕು. ಇವತ್ತು ಸಂತೋಷ ದಿನವಾಗಿರುವುದರಿಂದ ಇಡೀ ಕಲ್ಯಾಣ ನಗರದಲ್ಲಿ ಇದಕ್ಕಾಗಿ ಒಂದು ದಿವಸ್ನೇ ನಿಗದಿಮಾಡಿ ಒಂದು ಸಂತೋಷ ಸಮಾರಂಭವನ್ನು ನಡೆಸಬೇಕು. ಅದರಲ್ಲಿಯೂ ಸರ್ಕಾರದ ಮಾನ್ಯ ಹಣಕಾಸಿನ ಮಂತ್ರಿಗಳು ಹಳ್ಳಿಯ ಮಟ್ಟದಿಂದ ಹಾಗೂ ಗ್ರಾಮಾಂತರ ಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ಸರ್ಕಾರದ ಪರವಾಗಿ ಸಂತೋಷ ಸಮಾರಂಭಗಳನ್ನು ನೆರವೇರಿಸುವುದಕ್ಕೆ ಮತ್ತು ಸಾರ್ವಜನಿಕರೂ ಸಹ ಸಂತೋಷದಿಂದ ಇವತ್ತು ನಲಿದಾಡುವ ಸಮಾರಂಭಗಳನ್ನು ಏರ್ಪಡಿಸಿ ಜನಗಳ ಸಂತೋಷಕ್ಕೆ ಹಾಗೂ ಆಶೀರ್ವಾದಕ್ಕೆ ಈ ಸರ್ಕಾರ ಪಾತ್ರವಾಗಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ಈ ನಿರ್ಣಯವನ್ನು ತಂದಿರುವ ಮಾನ್ಯ ಮುಖ್ಯಮಂತ್ರಿಗಳನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

‡ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ),—ಸನ್ಮಾನ್ಯ ಅಧ್ಯಕ್ಷಣಿಯವರೇ, ಇಂದು ನಮ್ಮ ನಾಡಿನ ಮೂರು ಕೋಟಿ ಕನ್ನಡಿಗರ ಜೀವಮಾನದಲ್ಲಿ ಒಂದು ಸುದಿನ. ನಾವು ಇಂದು ಆನಂದದಿಂದಿದ್ದೇವೆ. ಈ ಸಂದರ್ಭದಲ್ಲಿ ನಾನು ಮೊಟ್ಟಮೊದಲನೆಯದಾಗಿ ಈ ರಾಜ್ಯದ ಹೆಸರನ್ನು ಕರ್ನಾಟಕವೆಂದು ಕರೆಯಬೇಕೆಂದು ನುಡಿದ, ನಡೆದ, ದುಡಿದ ಹಾಗೂ ಮಡಿದ ನನ್ನ ಪೂಜ್ಯ ಗುರುವರ್ಯ ಶಾಂತವೇರಿ ಶ್ರೀ ಗೋಪಾಲಗೌಡರನ್ನು ನಾನು ಈಗ ಸ್ಮರಿಸುತ್ತೇನೆ. ಅದೇ ಸಂದರ್ಭದಲ್ಲಿ ಇದೇ ಮಾನ್ಯ ಸಭೆಯ ಸದಸ್ಯರಾಗಿದ್ದಂಥ ಕರ್ನಾಟಕ ನಾಮಕರಣಕ್ಕೋಸ್ಕರವಾಗಿ ಅಹರ್ನಿಶಿ ದುಡಿದಂಥ, ಮಡಿದಂಥ ಶ್ರೀಮಾನ್ ಅಂದಾನಪ್ಪ ದೊಡ್ಡಮೇಟಿಯವರನ್ನು ಈ ಸಂದರ್ಭದಲ್ಲಿ ನಾನು ಕೃತಜ್ಞತೆಯಿಂದ ಈಗ ಸ್ಮರಿಸುತ್ತೇನೆ.

ನಮ್ಮ ರಾಜ್ಯಕ್ಕೆ "ಕರ್ನಾಟಕ" ಎಂಬ ಹೆಸರನ್ನು ಇಡಬೇಕೆಂದು ಇಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಡಿ ದೇವರಾಜ ಅರಸರು ಸಭೆಯ ಮುಂದೆ ಒಂದು ನಿರ್ಣಯವನ್ನು ಮಂಡಿಸಿರುವುದಕ್ಕಾಗಿ ಅವರನ್ನು ಅವರ ಸರ್ಕಾರವನ್ನು ಮತ್ತು ಅವರ ಆಡಳಿತ ಪಕ್ಷವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಇನ್ನು ನಾನು ಕನ್ನಡ ನಾಡಿನ ಚರಿತ್ರೆ ಹಾಗೂ ಅದರ ಇತಿಹಾಸ ಮತ್ತು ಅದರ ವೈಭಗಳೇನೆಂಬುದರ ಬಗ್ಗೆ ಒಂದು ಸಂಕ್ಷಿಪ್ತ ಸಿಂಹಾವಲೋಕವನ್ನು ಮಾಡಲಚ್ಛಿಸುತ್ತೇನೆ.

4 00 P.M.

ಮೊಟ್ಟಮೊದಲನೇಯದಾಗಿ ಒಂಭತ್ತನೆಯ ಶತಮಾನದಲ್ಲಿದ್ದ ನೃಪತುಂಗ ಚಕ್ರವರ್ತಿಯು ತನ್ನ "ಕವಿರಾಜ ಮಾರ್ಗ" ಎಂಬ ಗ್ರಂಥದಲ್ಲಿ ಈ ಕನ್ನಡ ನಾಡು ಕನ್ನಡ ನುಡಿ" ಕನ್ನಡ ಭಾಷೆ ಹಾಗೂ ಕನ್ನಡ ಜನತೆಯ ಬಗ್ಗೆ ಏನು ಉಲ್ಲೇಖನ ಮಾಡಿದ್ದಾನೆಂದರೆ:—

"ಪದನರಿದು ನುಡಿಯಲುಂ ನುಡಿ
ದುದನರಿದಾರಯಲ್ಲು ಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮಂತಿಗಳ್" ಆ ಒಂಭತ್ತನೆಯ ಶತಮಾನದಲ್ಲಿ ಆ ಕನ್ನಡ ಕವಿ ಚಕ್ರವರ್ತಿ ನೃಪತುಂಗನು ಹೀಗೆ ಹೇಳಿರತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ತುಂಬು ಹೃದಯಾಂತರಾಳದಿಂದ ಸ್ಮರಿಸುತ್ತೇನೆ. ಹಾಗೇಯೇ ಹತ್ತನೆಯ ಶತಮಾನದಲ್ಲಿದ್ದ ನಮ್ಮೆಲ್ಲರ ಹೆಮ್ಮೆಯ ಕವಿ-ಆದಿ ಪಂಪ ಮಹಾಕವಿಕುಲತಿಲಕ ಅಗ್ರ ಮಹಾ ಕವಿ ತನ್ನ 'ವಿಕ್ರಮಾರ್ಜುನ ವಿಜಯದಲ್ಲಿ' ಕರ್ನಾಟಕದ ವೈಭವವನ್ನು ಬಹಳ ಹೃದಯಂಗಮಯವಾಗಿ ವರ್ಣನೆ ಮಾಡಿದ್ದಾನೆ:—

"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಪುಗ
ಳಾಗರವಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೀ
ನಾಗಿಯು ಮೇಸೋ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೋಳ್ ಬನವಾಸಿ ದೇಶದೋಳ್" ಹೀಗೆ ಈ ನಾಡಿನ ವೈಭವವನ್ನು ವ್ಯಕ್ತಪಡಿಸಿರುತ್ತಾನೆ. ಹತ ನೇ ಶತಮಾನದಲ್ಲೇ ಆ ವರಮಹಾಕವಿ ಆದಿ ಪಂಪನು ಹೀಗೆ ಕರ್ನಾಟಕದ ಬಗ್ಗೆ ಹೇಳಿರುವುದಕ್ಕೆ ಆ ಮಹಾಕವಿಯನ್ನು ನಾನು ತುಂಬು ಹೃದಯದಿಂದ ಕನ್ನಡ ನಾಡಿನ ಜನತೆಯ ಪರವಾಗಿ ಸ್ಮರಿಸುತ್ತೇನೆ. ಇನ್ನೂ ಹೀಗೆ ಆ ನೃಪತುಂಗ ಚಕ್ರವರ್ತಿಯಿಂದ ಹಿಡಿದು ಪಂಪ, ರನ್ನ ಜನ್ನ, ನೇಮಿಚಂದ್ರ, ನಾಗವರ್ಮ, ರಾಘವಾಂಕ, ಹರಿಹರ ಇತ್ಯಿತ್ಯಾದಿ ಕವಿಪುಂಗರು ಕರ್ನಾಟಕದ ವೈಭವವನ್ನು ಹೃದಯಾರೆ ಹೊಗಳಿದ್ದಾರೆ. ಅದಕ್ಕಾಗಿ ನಾನು ಅವರೆಲ್ಲರನ್ನೂ ಈ ಶುಭ ಸಂದರ್ಭದಲ್ಲಿ ಕನ್ನಡ ಜನತೆಯಪರವಾಗಿ ತುಂಬು ಹೃದಯದಿಂದ ಸ್ಮರಿಸುತ್ತೇನೆ.

ಇನ್ನು ನಮ್ಮ ರಾಷ್ಟ್ರದ ಮೂಲೆ ಮೂಲೆಗಳಲ್ಲೂ ಕನ್ನಡ ನುಡಿಯಬಗ್ಗೆ ಒಂದು ಹೊಸ ಕ್ರಾಂತಿಯನ್ನೇ ಎಬ್ಬಿಸಿ ಅದಕ್ಕೆ ಪ್ರಮುಖರಾದಂಥ ಬಸವಣ್ಣನವರನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಅಷ್ಟೇ ಅಲ್ಲ ಆ ಮಹಾನುಭಾವರು ಆ ಕಾಲದಲ್ಲೇ ನೂತನ ಸಮಾಜ ನಿರ್ಮಾಣಕ್ಕೆ ಒಂದು ಕ್ರಾಂತಿಯನ್ನಾರಂಭಿಸಿದ್ದರು. ಅದನ್ನು ಕನ್ನಡ ಜನತೆ ಅರಿಯದ್ದೇನಿಲ್ಲ. ಅವರಿಗೆ ಬಲಗೈಯಂತೆಇದ್ದ ಅವರ ಅನುಯಾಯಿಗಳಾದ ಶಿವಶರಣರಾದರೋ ಈ ಚಳವಳಿಗೆ ಜೀವಕಳೆಯನ್ನು ತುಂಬಲು ವಿಶೇಷವಾಗಿ ಶ್ರಮಿಸಿದ್ದಾರೆ. ಆ ದಿವಸ ಅವರು ಕನ್ನಡ ನಾಡಿನ ಏಳಿಗೆಗೆ ಕನ್ನಡ ನುಡಿಗೆ ಹಾಗೂ ನೂತನ ಸಮಾಜ ನಿರ್ಮಾಣದ ಬಗ್ಗೆ ಏನು ಶ್ರಮಿಸಿದರು ಎಂಬುದು ಇಂದು ಐತಿಹಾಸಿಕವಾಗಿ ಉಳಿದಿದೆ. ಅಂಥ ಮಹನೀಯರನ್ನು ನಾನು ಈ ದಿವಸ ಸ್ಮರಿಸಿದರೆ ಅದೇನೂ ಒಂದು ಅತಿಶಯೋಕ್ತಿಯಾಗಲಾರದು. ಆದರೆ ನಾನು ಸಾಮಾನ್ಯವಾಗಿ ಯಾರನ್ನೇ ಆಗಲಿ ಹೊಗಳತಕ್ಕದ್ದು ನನ್ನ ಸ್ವಭಾವವೂ ಅಲ್ಲ ಅದು ನನ್ನ ಜಾಯಮಾನವೂ ಅಲ್ಲ.

(ಶ್ರೀ ಕೋಣಂದೂರು ಲಿಂಗಪ್ಪ)

ಇನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸು ಈ ಒಂದು ನಿರ್ಣಯದ ಬಗ್ಗೆ ಶುಭ ಶುಕ್ರವಾರದ ದಿನ ತಮ್ಮ ಪಕ್ಷದಲ್ಲಿ ತೀರ್ಮಾನ ತೆಗೆದುಕೊಂಡು ಅದರಂತೆ ಈ ಸಭೆಯಲ್ಲಿ ಅದನು 'ಮಂಗಳಕರವಾದ' ಮಂಗಳವಾರದ ದಿನ ಮಂಡಿಸಿದ್ದಾರೆ. ಆದಕ್ಕಾಗಿ ನಾನು ನಮ್ಮ ಕರ್ನಾಟಕದ ಜನತೆಯ ಪರವಾಗಿ ಶ್ರೀ ದೇವರಾಜರ ಪುತ್ರರಾದ ದೇವರಾಜ ಅರಸರಿಗೆ ನನ್ನ ಅಭಿನಂದನೆಗಳನ್ನರ್ಪಿಸುತ್ತ ಇನ್ನು ಮುಂದಕ್ಕೆ ಇವರನ್ನು ಅಭಿನವ ಬಸವಣ್ಣ' ಎಂಬ ಅಭಿದಾನದಿಂದ ಕರೆಯಲು ಹರ್ಷಿಸುತ್ತೇನೆ. (ಸಭೆಯಲ್ಲಿ ಕರತಾಡನ).

ಆದೇರೀತಿಯಾಗಿ ಈ ದಿವಸ ಈ ನಮ್ಮ ವಿಧಾನ ಸಭೆಯ ಸನ್ಮಾನ್ಯ ಅಧ್ಯಕ್ಷಣಿಯಾಗಿರತಕ್ಕ ಶ್ರೀಮತಿ ನಾಗರತ್ನಮ್ಮ ಅವರನ್ನು 'ಕರ್ನಾಟಕದ ರಾಜ್ಯ ಲಕ್ಷ್ಮಿ' ಎಂದು ಕರೆದು ಈ ಇಬ್ಬರಿಗೂ ಈ ಹೆಸರುಗಳು ಚರಿತ್ರೆಯಲ್ಲಿ ಶಾಶ್ವತವಾಗಿ ರಾರಾಜಿಸಲೆಂದು ಹಾರೈಸುತ್ತೇನೆ.

ಇನ್ನು ಹದಿನೈದನೆಯ ಶತಮಾನದಲ್ಲಿದ್ದಂಥ ಕುಮಾರ ವ್ಯಾಸ, ಲಕ್ಷ್ಮೀಶ ಮತ್ತು ಹದಿನೆಂಟು ಹತ್ತೊಂಭತ್ತನೆಯ ಶತಮಾನದಲ್ಲಿದ್ದ ಕರ್ನಾಟಕದ ಪ್ರತಿಭೆಯನ್ನು ಎತ್ತಿಹಿಡಿದ ಕವಿಕುಲ ಪುಂಗವರನ್ನೂ ಮತ್ತು ಈ ಕರ್ನಾಟಕ ರಾಜ್ಯ ಸ್ಥಾಪನೆಗಾಗಿ ಅಂದರೆ ಇದರ ಪ್ರಥಮ ಘಟ್ಟವಾದ ರಾಜ್ಯಗಳ ಪುನರ್ವಿಂ ಗಡಣೆಯ ಕಾಲದಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ನಾಡನ್ನು ಮತ್ತೆ ಒಂದು ಗೂಡಿಸಲು ಆ ಕಾಲದಲ್ಲಿ ಆ ಏಕೀಕರಣಕ್ಕೆ ಶ್ರಮಿಸಿದಂಥ ಜನರನ್ನೂ ಅಂದಿಗೂ ಇಂದಿಗೂ ಮುಂದಿಗೂ ಮತ್ತು ಎಂದೆಂದಿಗೂ ನಾವು ಮರೆಯಬಾರದು ಅವರನ್ನು ನಾವು ಸ್ಮರಿಸಬೇಕಾದ್ದು ಅಗತ್ಯ. ಹಾಗೇ ಕನ್ನಡಿಗರಲ್ಲಿ ಒಗ್ಗಟ್ಟನ್ನ ಭಾವೈಕ್ಯತೆ ಯನ್ನು ಮೂಡಿಸಲು ಅಹರ್ನಿಶಿ ದುಡಿದಂಥ ಮಹಾನೀಯರನ್ನೆಲ್ಲಾ ಸ್ಮರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇನ್ನು ಈ ಕರ್ನಾಟಕಕ್ಕಾಗಿ ಹಿಂದಿನಿಂದಲೂ ಶ್ರಮಿಸುತ ಬಂದಿರತಕ್ಕ ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಎರಡು ಮಾತುಗಳನ್ನು ಹೇಳದೆ ಇರಲಾರೆ. ಆ ಪರಿಷತ್ತು ಇಲ್ಲಿ ವರೆಗೂ ಒಟ್ಟು ೪೭ ಸಮ್ಮೇಳನಗಳನ್ನು ನಡೆಸಿದೆ. ಈ ೪೭ ಸಮ್ಮೇಳನಗಳಲ್ಲೂ ಈ ಕರ್ನಾಟಕದ ಬಗ್ಗೆ ಯಾವ ಯಾವ ಸಮ್ಮೇಳನದಲ್ಲಿ ಏನೇನುಮಾಡಿದ್ದಾರೆಂಬುದನ್ನು ಹೇಳುವುದಕ್ಕೆ ಈಗ ಕಾಲಾವಕಾಶವಿಲ್ಲದಿದ್ದರೂ ಆ ಪರಿಷತ್ತಿನವರು ತಮ್ಮ ಪ್ರತಿಯೊಂದು ಸಮ್ಮೇಳನದಲ್ಲಿಯೂ ಈ ಕನ್ನಡ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರನ್ನು ಇಡಬೇಕೆಂದು ಸಾರಿ ಸಾರಿ ಹೇಳಿದ್ದಾರೆ. ಮೊಟ್ಟಮೊದಲನೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಶ್ರೀ ಆರ್. ನರಸಿಂಹಾಚಾರ್ಯ ಅವರು ಅವರು ಈ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರನ್ನು ಇಡಬೇಕು ಎನ್ನತಕ್ಕ ವಿಚಾರದಲ್ಲ ಏನು ಹೇಳಿದ್ದಾರೆಂಬ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಲ್ಲಿ ಇಚ್ಛೆ ಪಡುತ್ತೇನೆ ಅಧ್ಯಕ್ಷರು ತಮ್ಮ ಭಾಷಣದ ಪ್ರಾರಂಭದಲ್ಲಿ ಕರ್ನಾಟಕದ ಇತಿಹಾಸವನ್ನು ಹೇಳುತ್ತ ನಮ್ಮ ದಕ್ಷಿಣ ಭಾರತದ ಭಾಷೆಗಳೇನಿವೆ ಅವುಗಳನ್ನು 'ಪಂಚದ್ರಾವಿಡ' ಭಾಷೆಗಳೆಂದು ಕರೆಯುತ್ತಾರೆ ಪಂಚ ದ್ರಾವಿಡಭಾಷೆ ಎಂದರೆ— ಕನ್ನಡ. ತೆಲಗು, ತಮಿಳು, ಮಲೆಯಾಳಂ, ಮತ್ತು ತಳು ಇವು. ಈ ಭಾಷೆಗಳಲ್ಲಿ ಒಂದಕ್ಕೊಂದಕ್ಕೆ ಸಂಬಂಧವಿದೆ. ಆದಾಗ್ಗೂ ಕನ್ನಡಕ್ಕೂ ಮತ್ತು ತಮಿಳಿಗೂ ಬಹಳ ಹತ್ತಿರದ ಸಮೀಪ ವಿದೆಯೆಂದು ಹೇಳುತ್ತಾ ಎರಡನೇ ಶತಮಾನಕ್ಕ ಸಂಬಂಧಪಟ್ಟಂಥ ತಮಿಳು ಗ್ರಂಥ 'ಶಿಲಪ್ಪಾಧಿಕಾರಂ' ಅದರಲ್ಲಿ 'ಕರುನಾಡ್' ಎಂಬ ಪದವನ್ನು 'ಕರ್ನಾಟಕ' ಎಂಬ ಪದಕ್ಕೆ ಪ್ರತಿಯಾಗಿ ಬಳಸಿದೆ ಎಂಬುದಾಗಿ ತಿಳಿಸಿದ್ದಾರೆ. ಅಂದರೆ ಎರಡನೇ ಶತಮಾನದಿಂದಲೂ ಇದಕ್ಕೆ ಕರ್ನಾಟಕ ಎಂಬ ಹೆಸರಿತ್ತು ಅನ್ನುವುದಾಯಿತು ಹಾಗೇ ಐದನೇ ಶತಮಾನದಲ್ಲಿದ್ದ ವರಾಹಮಿಹರ ಕೂಡ ತನ್ನ ಗ್ರಂಥದಲ್ಲಿ ಕರ್ನಾಟಕ ಎಂಬ ಹೆಸರನ್ನು ಉಲ್ಲೇಖಿಸಿದ್ದಾನೆ. ಇನ್ನು ಮೊನ್ನೆ ಇದೇ ಸಭೆಯಲ್ಲಿ ಶ್ರೀ ಬಿ. ಬಸವಲಿಂಗಪ್ಪನವರು ಸ್ಕಾಂದಪುರಾಣದ ರಾಮಾಖಾಂಡದಿಂದ ಒಂದು ವಿಷಯವನ್ನು ಉದ್ಧರಿಸಿದರು. ಆದರೆ ಆದು ಸರಿಯೋ ತಪ್ಪೋ ಎನ್ನತಕ ವಿಷಯಕ್ಕೆ ನಾನು ಈಗ ಪ್ರವೇಶಮಾಡುವುದಿಲ್ಲ. ಆದರೆ ಆ ಸ್ಕಾಂದ ಪುರಾಣವನ್ನು ಯಾರು ಬರೆದಿದ್ದಾರೋ ಅವರೇ ಅಂದರೆ ವೇದವ್ಯಾಸ ಮಹರ್ಷಿಗಳು ಬರೆದಿರತಕ್ಕ ಮೂಲ ಗ್ರಂಥವಾದ ಹಾಗೂ 'ಪಂಚಮವೇದ' ಎಂಬ ಪ್ರಖ್ಯಾತಿಯನ್ನು ಗಳಿಸಿರತಕ್ಕ ಮೂಲ ಭಾರತದಲ್ಲಿ ಉದ್ಯೋಗ ಪರ್ವದಲ್ಲಿ ಈ ಕನ್ನಡ ನಾಡನ್ನು 'ಕರ್ನಾಟಕ' ಎಂದು ಕರೆದಿದ್ದಾರೆ. ಅಂದಿನಿಂದ ಇಂದಿನವರೆಗೂ ಒಂದೇ ಸಮನಾಗಿ ರುಷಿಗಳೂ, ಸಾಹಿತಿಗಳೂ, ಚರಿತ್ರಕಾರರೂ, ಶರಣರೂ ಎಲ್ಲರೂ ಸತತವಾಗಿ ಕರ್ನಾಟಕ ಎಂಬಪದವನ್ನು ಜೀವಸಹಿತ ವಾಗಿ ಉಳಿಸಿಕೊಂಡು ಬಂದಿದ್ದಾರೆ. ಇದಕ್ಕೆ ಅನೇಕ ದಾಖಲಾತಿಗಳೂ ಇವೆ. ಸೋಮದೇವನ 'ಕಥಾ ಸಾಗರ' ಗುಣಾಢ್ಯನ 'ಬೃಹತ್ಕಥೆ' ಒಂಭತ್ತನೆಯ ಶತಮಾನದಲ್ಲಿದ್ದ ಕವಿ ಷಡಕ್ಷರನ 'ರಾಜಶೇಖರವಿಳಾಸ' ಇತ್ಯಾದಿ ಅನೇಕ ಗ್ರಂಥಗಳಲ್ಲಿ 'ಕರ್ನಾಟಕ' ಶಬ್ದದ ಪದವನ್ನು ನಾವು ಕಾಣಬಹುದಾಗಿದೆ. ಇನ್ನು ಈ 'ಕರ್ನಾಟಕ' ಶಬ್ದ ವ್ಯುತ್ಪತ್ತಿಯ ಬಗ್ಗೆ ಶ್ಯಾಮಕುಂದಾಚಾರ್ ಎನ್ನತಕ್ಕವರು ಒಂದು ದೊಡ್ಡ ಭಾಷ್ಯವನ್ನೇ ಬರೆದಿದ್ದಾರೆ.

ಆದರೆ ಈ 'ಕರ್ನಾಟಕ' ಎಂಬ ಶಬ್ದ ಯಾವ ಒಂದು ಕೋಮಿಗಾಗಲೀ ಅಥವಾ ಒಂದು ಜನಾಂಗಕ್ಕಾಗಲೀ ಸೇರಿದ್ದಲ್ಲ. ಈ ಪದದಲ್ಲಿ ಮೂರು ಕೋಟಿ ಕನ್ನಡಿಗರೆಲ್ಲರ ಭಾಷೈಕ್ಯತೆಯ ಅಭಿಪ್ರಾಯ, ಕನ್ನಡದ ಸಂಸ್ಕೃತಿ, ಕನ್ನಡದ ಕಲೆ, ಕನ್ನಡದ ಶಿಲ್ಪಿ, ಕನ್ನಡದ ಸಂಗೀತ ಈ ಎಲ್ಲಾ ಕಲೆಗಳ ಅರ್ಥ ಸಾರವೂ ಈ 'ಕರ್ನಾಟಕ' ಎಂಬ ಶಬ್ದದಲ್ಲಿ ಅಡಗಿದೆ.

ಇನ್ನು ನಮ್ಮ ಕವಿ ಕುವೆಂಪು ಅವರು ಈ ಕರ್ನಾಟಕದ ಬಗ್ಗೆ ಏನು ಹೇಳಿದ್ದಾರೆಂಬುದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವರು ಯಾವ ಒಂದು ಉದ್ವೇಗಕ್ಕೂ ಒಳಗಾಗತಕ್ಕವರಲ್ಲ. ಅವರು ಕರ್ನಾಟಕದ ಬಗ್ಗೆ ಹೀಗೆ ಹೇಳಿದ್ದಾರೆ:—

"ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೊ
ಸಿರಿಗನ್ನಡ ಸರಸ್ವತಿಯ
ವಜ್ರ ಕರ್ಣ ಕುಂಡಲ
ಅಖಂಡ ಕರ್ಣಾಟಲ
ನೃಪತುಂಗನೇ ಚಕ್ರವರ್ತಿ
ಪಂಪನಲ್ಲಿ ಮುಖ್ಯ ಮಂತ್ರಿ
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ
ತನಗೆ ರುಚಿರ ಕುಂಡಲ"

ಇದನ್ನು ರಚಿಸಿರತಕ್ಕವರೂ ಮತ್ತು ಹಾಡಿರತಕ್ಕವರು ನಮ್ಮ ಹಳೇ ಮೈಸೂರಿನವರೇ. ಇವರು ಕವಿಗಳಾಗಿ ಕವಿಕುಲದಲ್ಲಿ ಸೇರಿ ಏನೊಂದು ದೃಷ್ಟಿಕೋನವನ್ನು ಇಟ್ಟು ಇವರು ಹೇಳಿದ್ದಾರೋ ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಅವರನ್ನು ಸ್ಮರಿಸುತ್ತೇನೆ. ಇವರಿನ್ನೂ ೧೫—೨೦ ವರ್ಷ ವಯಸ್ಸಿನಲ್ಲಿದ್ದಾಗಲೇ ಏನೊಂದು ಇವರು ಕನಸು ಕಂಡಿದ್ದರೋ ಅದು ಇಂದು ಫಲವಾಗಿದೆ. ಅವರು ಹಳೆಯ ಮೈಸೂರಿನವರು. ಚಿಕ್ಕ ವಯಸ್ಸಿನಿಂದಲೂ ಅವರು ಕವಿತೆಗಳನ್ನು ರಚಿಸಿ ಕರ್ನಾಟಕದ ಬಗ್ಗೆ ಆಸಕ್ತಿ ವಹಿಸಿದ್ದುದನ್ನು ನಾವು ಇಂದು ಸ್ಮರಿಸಬೇಕು. ಅವರು ಸುಮಾರು ೨೦ ವರ್ಷ ವಯಸ್ಸಾಗಿದ್ದಾಗಲೇ "ಜೈ ಭಾರತ ಮಾತೆ,"... ಎಂಬ ಕವಿತೆಯನ್ನು ರಚಿಸಿದರು. ಅವರ ಕಾವ್ಯನಾಮ ಕುವೆಂಪು ಎಂದು. ಆ ಚಿಕ್ಕ ವಯಸ್ಸಿನಲ್ಲಿ ಅವರು ಬರೆದಿರುವುದು ಇಂದು ಫಲದಾಯಕವಾಗಿದೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅವರು ಬಹಳವಾಗಿ ದುಡಿದಿದ್ದಾರೆ. ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ಅವರು ಇದುವರೆಗೆ ಕರ್ನಾಟಕಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಅದಕ್ಕಾಗಿ ಅವರನ್ನೂ ಸಹ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾನು ಕೂಡ ಹಳೆಯ ಮೈಸೂರಿನವರಲ್ಲಿ ಒಬ್ಬ. "ಚಿನ್ನದ ನಾಡದು ಮೈಸೂರು, ಗಂಧದ ಗುಡಿಯದು, ಮೈಸೂರು, ವೀಣೆಯ ಬೆಡಗದು ಮೈಸೂರು ನಾಲ್ಮಡಿ ಕೃಷ್ಣನ ಮೈಸೂರು, ಎಂದು ಮುಂತಾಗಿ ಕವಿಗಳು ಹಾಡಿದ್ದಾರೆ ತುಂಬು ಹೃದಯದಿಂದ ಅರ್ಥಪೂರ್ಣವಾಗಿ ಇದನ್ನು ಹಾಡಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಅರಸುಮನೆತನದವರು ಯದುವಂಶದವರು, ಮೈಸೂರು ಅರಸರು ಮಾಡಿದ ಸೇವೆಯನ್ನು ಕೂಡ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಶ್ರೀ ಕೃಷ್ಣ ರಾಜ ಒಡೆಯರ ಕಾಲದಲ್ಲಿ ಮೈಸೂರಿಗೆ ಅವರು ಸಲ್ಲಿಸಿದ ಸೇವೆಯನ್ನು ಸಹ ಕೃತಜ್ಞತೆಯಿಂದ ಇಂದು ಸ್ಮರಿಸಬೇಕಾಗಿದೆ. ಯಾರೇ ಒಪ್ಪಲಿ, ಒಪ್ಪದಿರಲಿ, ಅರಸು ಮನೆತನದವರು ಸಲ್ಲಿಸಿರುವ ಸೇವೆ ನಿಜವಾಗಿಯೂ ಪ್ರಶಂಸನೀಯವಾದುದು. ಈ ದಿವಸ ರಾಜರು ರಾಜರಾಗಿಲ್ಲದಿದ್ದರೂ ಅವರಿದ್ದಾಗ ಕರ್ನಾಟಕ ರತ್ನಸಿಂಹಾಸನ ಎಂದು ಕರೆಯುತಿದ್ದರು. ಜನರು ಮಹಾರಾಜರಲ್ಲಿ ಒಂದು ಪ್ರೀತಿ ವಿಶ್ವಾಸವನ್ನಿಟ್ಟಿದ್ದರು. ಈಗ ರಾಜತ್ವ ರದ್ದಾಗಿದೆ. ಅವರು ರಾಜರಾಗಿದ್ದಾಗ ಮೈಸೂರು ದೇಶದಲ್ಲಿ ಅಪಾರವಾಗಿ ಪ್ರಜೆಗಳಿಗೆ ಸೌಕರ್ಯ ಮಾಡಿಕೊಟ್ಟು ದೇಶವನ್ನು ಮುಂದಕ್ಕೆ ತಂದು ಮೈಸೂರಿನ ಪ್ರಖ್ಯಾತಿಯನ್ನು ಹೆಚ್ಚಿಸಿದ್ದಾರೆ. ಇದನ್ನು ತುಂಬು ಹೃದಯದಿಂದ ಹೇಳುತ್ತೇನೆ. ರಾಜ ವಂಶದವರೂ

(ಶ್ರೀ ಕೋಣಂದೂರು ಲಿಂಗಪ್ಪ)

ಯಿಂದು ಕುಲದವರೂ ಆದ ನಮ್ಮ ಮುಖ್ಯ ಮಂತ್ರಿಗಳೂ ಆದ ಶ್ರೀಮಾನ್ ಡಿ. ದೇವರಾಜ ಅರಸರು ಮೈಸೂರಿನ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ಇಂದು ನಿರ್ಣಯವನ್ನು ತಂದಿರುವುದಕ್ಕಾಗಿ ನಾನು ಅವರಿಗೆ ಆಭಾರಿಯಾಗಿ ಅನೇಕ ವಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಆಡಳಿತ ಪಕ್ಷದ ಅಧ್ಯಕ್ಷರೂ ಈ ಸಭೆಯ ಸದಸ್ಯರೂ ಆದ ಶ್ರೀ ಕೆ. ಎಚ್. ರಂಗನಾಥ್‌ರವರೂ ಸಹ ಈ ನಿರ್ಣಯ ಇಲ್ಲಿ ಬಂದ ವಿಚಾರ ದಲ್ಲಿ ವಿವರಿಸಿದ್ದಾರೆ, ಆದಕ್ಕಾಗಿ ಅವರಿಗೂ ಸಹ ವಂದಿಸುತ್ತೇನೆ. ಕಾಂಗ್ರೆಸ್ ಹಿಂದೆ ಎರಡು ಭಾಗವಾಗಿ ಒಂದಕ್ಕೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಎಂಬ ಹೆಸರೂ ಇನ್ನೊಂದಕ್ಕೆ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿ ಎಂದೂ ಹೆಸರನ್ನು ಪಡೆದಿದ್ದುದು ಎಲ್ಲರಿಗೂ ಗೊತ್ತಿದೆ. ಸುಮಾರು ೩೦ ವರ್ಷದಿಂದ ನಮ್ಮ ಪಕ್ಷಕ್ಕೆ ಕರ್ನಾಟಕ ಸೋಷಿಯಲಿಸ್ಟ್ ಪಾರ್ಟಿ ಎಂಬ ಹೆಸರಿತ್ತು, ಇತರ ಪಕ್ಷಗಳೂ ಕೂಡ ಕರ್ನಾಟಕ ಎಂಬ ಹೆಸರನ್ನು ಸೇರಿಸಿಕೊಂಡಿದ್ದುವು, ಅದರಂತೆ ಅವುಗಳ ಹೆಸರು ಕರ್ನಾಟಕ ಪ್ರಜಾ ಸೋಷಿಯಲಿಸ್ಟ್ ಪಕ್ಷ, ಕರ್ನಾಟಕ ಜನಸಂಘ, ಕರ್ನಾಟಕ ಡಿ.ಎಂ.ಕೆ. ಪಕ್ಷ ಎಂಬುದಾಗಿತ್ತು. ಅಲ್ಲದೆ ಕರ್ನಾಟಕ ಎಂಬ ಹೆಸರನ್ನು ಚುನಾವಣೆಯ ಸಂದರ್ಭದಲ್ಲೂ ಸಹ ಹೇಳಿಕೊಂಡುಬಂದಿರುವುದೂ ಪ್ರಚಾರಮಾಡಿರುವುದೂ ಎಲ್ಲರಿಗೂ ಗೊತ್ತಿದೆ. ಕರ್ನಾಟಕದ ಏಕೀಕರಣವಾದ ೧೬ ವರ್ಷಗಳ ನಂತರ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನಿಡಲು ಕಾಂಗ್ರೆಸ್ ಸರಕಾರ ಮುಂದೆ ಬಂದಿರುವುದಕ್ಕಾಗಿ ಅದನ್ನು ಅಭಿನಂದಿಸುತ್ತೇನೆ.

ಇನ್ನು ಮುಖ್ಯ ಮಂತ್ರಿಗಳು ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನಿಡುವ ಮೂಲಕ ಒಂದು ಹೊಸ ಅಧ್ಯಾಯವನ್ನು ನಮ್ಮ ಇತಿಹಾಸದಲ್ಲಿ ಆರಂಭಿಸಿದ್ದಾರೆ. ಈ ರೀತಿ ಕರ್ನಾಟಕ ಎಂಬ ಹೆಸರನ್ನಿಡುವ ಮೂಲಕ ನಮ್ಮ ೩ ಕೋಟಿ ಕನ್ನಡಿಗರ ಆಸೆಯೇನಿತ್ತು ಅದನ್ನು ಗಮನಿಸಿ ಅವರಿಗೆ ಗೌರವ ಸಲ್ಲಿಸಿದ್ದಾರೆ. ಕನ್ನಡದ ಜನ, ಕನ್ನಡ ನೆಲ ಎಂಬ ಒಂದು ಭಾವನೆಯುಂಟಾಗಿ ಆನಂದವಾಗಿದೆ. ಕನ್ನಡಿಗರಿಗೆ ಮಾತ್ರ[illegible]ದೆ ಕರ್ನಾಟಕಸ್ತರಿಗೆಲ್ಲಾ ಇಂದು ಆನಂದವುಂಟಾಗಿದೆ. ಈ ಹೆಸರಿನಿಂದ ದೇಶಕ್ಕೆ ಒಂದು ಜೀವಕಳೆ ಬಂದಿದೆ, ಈಗ ಒಂದು ಹೊಸ ಅಧ್ಯಾಯ ಸೃಷ್ಟಿಯಾಗಿದೆ. ಇದಕ್ಕೆ ತಕ್ಕಂತೆ ಬೇಗ ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡ ಬೇಕು. ಸಂಪೂರ್ಣವಾಗಿ ಪಂಚಾಯಿತಿಯಿಂದ ಹಿಡಿದು ವಿಧಾನಸೌಧದವರೆಗೆ ಕರ್ನಾಟಕ ಎಂದು ಕರೆಯು ವುದಕ್ಕೆ ಹೊಂದಿಕೆಯಾಗುವಂತೆ ಕನ್ನಡವು ರಾಜ್ಯಭಾಷೆ, ಆಡಳಿತ ಭಾಷೆ ಆಗಬೇಕು. ಈಗ ಆಡಳಿತ ಭಾಷೆಗೆ ಸಂಬಂಧಪಟ್ಟ ಸಮಿತಿಯ ವರದಿಯಿದೆ, ಅದನ್ನು ಶೀಘ್ರವಾಗಿ ಪರಿಶೀಲಿಸಿ ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಬೇಕು ಆಡಳಿತ ಭಾಷೆಗೆ ಸಂಬಂಧಪಟ್ಟ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ನಾರಾಯಣಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ಒಂದು ಪುಟ್ಟ ಸಮಿತಿಯನ್ನು ರಚಿಸಿ ಕನ್ನಡ ಭಾಷೆಯು ಸರಕಾರಿ ಮಟ್ಟದಲ್ಲಿ ಬೇಗ ಆಡಳಿತ ಭಾಷೆಯಾಗುವಂತೆ ರಾಜ್ಯಭಾಷೆಯಾಗುವಂತೆ ಜಾಗ್ರತೆ ವ್ಯವಸ್ಥೆ ಮಾಡಲು ಕೂಡಲೆ ಕ್ರಮ ಕೈಕೊಂಡು ಕೊನೆಯ ಪಕ್ಷ ನವೆಂಬರ್ ಒಂದರ ವೇಳೆಗಾದರೂ ಕನ್ನಡವು ರಾಜ್ಯಭಾಷೆಯಾಗುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಕರ್ನಾಟಕವಾದಂತಾಯಿತು. ಇದೇ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರು ಹೇಳಿದ ಮಾತನ್ನು ನೆನಪಿಗೆ ತರುತ್ತೇನೆ. ನಮ್ಮ ರಾಜ್ಯದ ಹೊರಗೆ ಕೆಲವರು ಕನ್ನಡಿಗರಿದ್ದಾರೆ, ಕಾಸರಗೋಡು, ಆಲೂರು, ಆದವಾನಿ, ರಾಯದುರ್ಗ, ಅಕ್ಕಲಕೋಟೆ, ಹೊಸೂರು ಮುಂತಾದ ಕನ್ನಡ ಪ್ರದೇಶಗಳಿವೆ. ಅವನ್ನು ಆದಷ್ಟು ಜಾಗ್ರತೆ ಕರ್ನಾಟಕಕ್ಕೆ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡ ಬೇಕು ಎಂದು ಕೇಳಿಕೊಂಡು ಇನ್ನುಮುಂದೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಇಂದು ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಬಂದುದರಿಂದ ಒಂದು ಹೊಸ ವ್ಯಕ್ತಿತ್ವ ಬಂದ ಹಾಗಾಯಿತು ಸ್ವಂತ ವ್ಯಕ್ತಿತ್ವ ನಮ್ಮ ರಾಜ್ಯಕ್ಕಿರುವುದರಿಂದ ಈ ದೃಷ್ಟಿಯಿಂದ ನಮ್ಮ ಆಡಳಿತ ಮಟ್ಟ ವನ್ನು ಹೆಚ್ಚಿಸಬೇಕು. ಉದಾಹರಣೆಗೆ ಆರ್ಥಿಕ, ಸಾಮಾಜಿಕ ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಗಮನ ಹರಿಸಬೇಕು. ಇಂದು ಕಾಂಗ್ರೆಸ್ಸಿನ ಅಧಿಕಾರ ದೆಹಲಿಯಲ್ಲಿ ಕೇಂದ್ರೀಕೃತವಾಗಿದೆ ಅದನ್ನು ಕರ್ನಾಟಕ ಪಡೆದು ಅನುಕೂಲಮಾಡಿಕೊಳ್ಳಲು ಪ್ರಯತ್ನ ಮಾಡಬೇಕು, ಇದನ್ನು ದೆಹಲಿಯಲ್ಲಿರುವವರು ಅರ್ಥಮಾಡಿಕೊಂಡು ಅವರಲ್ಲಿರುವ ಅಧಿಕಾರದ ವಿಕೇಂದ್ರೀಕರಣ ಮಾಡಿ ಕರ್ನಾಟಕಕ್ಕೆ ಸಾಕಷ್ಟು ಅಧಿಕಾರ ಕೊಡಬೇಕು ಭಾಷೆಯ ಬಗ್ಗೆ ಜಗತ್ತಿನಲ್ಲಿ ಅಥವಾ ಇತರ ಪ್ರಾಂತಗಳಲ್ಲಿ ದೊಡ್ಡ ಅನಾಹುತವಾಗಿದೆ ಮತ್ತು ಒಳ್ಳೆಯ ಕೆಲಸ ಸಹ ಆಗಿದೆ ಎಂಬುದನ್ನು ಸಹ ಯೋಚನೆಮಾಡಬೇಕು.

ಈ ಹೊತ್ತು ಭಾಷೆಯ ಕಾರಣದಿಂದಲೇ ಪಾಕೀಸ್ಥಾನದಲ್ಲಿದ್ದ ಬಾಂಗ್ಲಾದೇಶ ಸ್ವತಂತ್ರ ರಾಷ್ಟ್ರ ವಾಯಿತು. ಹಾಗೆಯೇ ಈ ಹೊತ್ತು ಪಾಕೀಸ್ಥಾನದಲ್ಲಿ ಸಿಂಧಿ ರಾಷ್ಟ್ರದ ಬಗ್ಗೆ ಚಳುವಳಿ ಪ್ರಾರಂಭವಾಗಿದೆ

ಹಾಗೆಯೇ ನಮ್ಮ ರಾಜ್ಯವು ಆಗಬೇಕು ಎಂದು ನಾನು ಎಳ್ಳಷ್ಟೂ ಅಪೇಕ್ಷೆ ಪಡತಕ್ಕಂಥವನಲ್ಲ. ಕೇಂದ್ರೀಯುತವಾದಂಥ ಅಧಿಕಾರದಿಂದ ಅಂತಹ ಅಪಾಯ ಈ ರಾಷ್ಟ್ರದಲ್ಲಿಯೂ ಬಂದೀತು ಎನ್ನುವ ಎಚ್ಚರಿಕೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಅಪೇಕ್ಷೆ ಪಡುತ್ತೇನೆ. ಕೇಂದ್ರೀಯುತವಾದ ಅಧಿಕಾರ ದೆಹಲಿಯಲ್ಲಿ ಅಡಕವಾಗಿದ್ದರೆ ಅದರಿಂದ ಇಂತಹ ಪ್ರವೃತ್ತಿಗಳು ಬೆಳೆಯುವುದಕ್ಕೆ ಏನಾದರೂ ಅವಕಾಶಗಳು ಬಂದಾವು. ಆದುದರಿಂದ ನಾವು ಎಚ್ಚರಿಕೆಯಿಂದ ಸ್ವಯಂತ್ತವಾದ ಕೇಂದ್ರದ ಅಧೀನದಲ್ಲಿ ಸ್ವಯುತ್ತತವಾಗಿ ಕರ್ನಾಟಕವನ್ನು ನಿರ್ಮಾಣ ಮಾಡಬೇಕು ಎಂದು ಕೇಳಿಕೊಳ್ಳುತೇನೆ. ಇದೇ ಸಲುವಾಗಿ ನಮ್ಮ ಪಕ್ಷ ಆಗಲೇ ಲೋಕಸಭೆಯಲ್ಲಿ ನಮ್ಮ ಹಿರಿನಾಯಕರಾದ ಡಾಕ್ಟರ್ ಲೋಹಿಯಾರವರು ಇದ್ದಾಗ ಪಾರ್ಲಿಮೆಂಟ್ ಸದಸ್ಯರಾದ ಶ್ರೀಮಾನ್ ಜೆ.ಹೆಚ್. ಪಟೇಲರು ಕನ್ನಡದಲ್ಲಿ ಮಾತನಾಡಿದ್ದರು. ಅದನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕಿಂತ ಮೊದಲು ಶ್ರೀ ಚನ್ನಯ್ಯನವರು ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿದ್ದರು.

ಶ್ರೀ ಕೋಣಂದೂರು ಲಿಂಗಪ್ಪ.—ಅಂದಿನ ದಿನ ನಮ್ಮ ರಾಷ್ಟ್ರದ ೧೪ ಭಾಷೆಗಳಿಗೂ ಒಂದು ಹೊಸ ವ್ಯಕ್ತಿತ್ವ, ಒಂದು ಹೊಸ ಜೀವಕಳೆ ಬಂದು ತುಂಬಿತ್ತು ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಈ ಭಾಷೆಯ ಮೂಲಕ ರಾಜ್ಯ ರಾಜ್ಯದ ವ್ಯಕ್ತಿತ್ವ ಇವುಗಳ ಪ್ರತಿಷ್ಠಾಪನೆ ಇವುಗಳನ್ನು ಮಾಡಬೇಕಾದಂಥ ಕಾರ್ಯ ಈವೊತ್ತು ನಮ್ಮ ಬೆಳಕಿಗೆ ಬಂದಿದೆ. ಆದುದರಿಂದ ಕರ್ನಾಟಕದ ಒಂದು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ತಾವು ಪ್ರಯತ್ನ ಮಾಡಬೇಕು. ನಮ್ಮ ಸದವ ರಾಷ್ಟ್ರ ನಿರ್ಮಾಣದ ಬಗ್ಗೆ ಯೋಚನೆ ಮಾಡಬೇಕು. ಅಂದರೆ ಜಿಲ್ಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ, ಕೇಂದ್ರ ಮಟ್ಟದಲ್ಲಿ ಮತ್ತು ಪಂಚಾಯಿತಿ ಮಟ್ಟದಲ್ಲಿ ಈ ನಾಲ್ಕು ಮಟ್ಟದಲ್ಲೂ ಅಧಿಕಾರ ವಿಕೇಂದ್ರೀಕರಣವಾಗಿ ಆಡಳಿತ ಭಾಷೆ ಆಗುವ ಮಟ್ಟಕ್ಕೆ ಪ್ರಯತ್ನ ಮಾಡಬೇಕು. ಈ ಮೂಲಕ ಕರ್ನಾಟಕದಲ್ಲಿ ವಿಕೇಂದ್ರೀಕೃತವಾದ ಈ ಅಧಿಕಾರ ನಾಳೆಯೂ ಕೂಡ ಜನ ಸಾಮಾನ್ಯರಿಗೆ ಕನ್ನಡದ ಮತ್ತು ಕರ್ನಾಟಕದ ಸಮಸ್ತ ಜನರ ಪಾಲಿಗೂ ಕೂಡ ಅಧಿಕಾರ ಮತ್ತಿತ್ತರ ಸೌಲಭ್ಯಗಳು ಲಭ್ಯವಾಗುವಂತೆ ಪ್ರಯತ್ನ ಮಾಡಬೇಕು ಎಂದು ಕೇಳಿಕೊಂಡು ಕನ್ನಡದ ಜನ ತಮ್ಮನ್ನು ಇಂದು ಹಾಡಿ ಹೊಗಳುತ್ತಾ ಇದ್ದಾರೆ. ಈ ದಿನ ಒಂದು ಐತಿಹಾಸಿಕ ಮಹತ್ವದ ದಿವಸವಾಗಿದೆ. ಇಂಥ ಒಂದು ಸುದಿನವನ್ನು ತಂದು ಕೊಟ್ಟಂಥ ತಮ್ಮೆಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿ ಕನ್ನಡದ ೩ ಕೋಟಿ ಜನರ ಪರವಾಗಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಈ ಒಂದು ಕವನವನ್ನು ಓದುತ್ತೇನೆ.

"ಎಲ್ಲಾದರೂ" ಇರು ಎಂತಾದರು ಇರು,
ಎಂದೆಂದಿಗೂ ನೀ ಕನ್ನಡವಾಗಿರು,
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀ ನಮ್ಮಗೆ ಕಲ್ಪತರು,
ನೀ ಮೆಟ್ಟುವುದೇ—ಅದೆ ಕರ್ನಾಟಕ,
ನೀ ನೇರುವ ಮಲೆ—ಸಹ್ಯಾದ್ರಿ,
ನೀ ಮುಟ್ಟುವ ಮರ—ಶ್ರೀ ಗಂಧದ ಮರ,
ನೀ ಕುಡಿಯುವ ನೀರ್—ಕಾವೇರಿ."

ಈ ಸಂದರ್ಭದಲ್ಲಿ ಅದನ್ನು ಸ್ಮರಿಸಿ ಇದುವರೆಗೆ ಈ ರಾಜ್ಯಕ್ಕೆ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸದೇ ಇದ್ದುದಕ್ಕೆ ನಾನು ಏನೂ ಹೇಳುವುದಿಲ್ಲ. ಯಾರು ಒಂದು ಕಾಲದಲ್ಲಿ ಕರ್ನಾಟಕದ ಏಕೀಕರಶಿಲ್ಪಿ, ಏಕಮೇವ ಅದ್ವಿತೀಯ ಎಂದು ಹೆಸರು ಗಳಿಸಿದ್ದ ಶ್ರೀ ನಿಜಲಿಂಗಪ್ಪನವರು ಮತ್ತು ಅವರ ಅನುಯಾಯಿಗಳು ಕೂಡ ಕೇವಲ ತಮ್ಮ ರಾಜಕೀಯಕೋಸ್ಕರ ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ನಾಮಕರಣವನ್ನು ಮಾಡದೇ ಹೋದದ್ದಕ್ಕೆ ಆ ಪಾಪದ ಫಲವನ್ನು ಅವರು ಅನುಭವಿಸುತ್ತಿದ್ದಾರೆ. ಈ ರಾಜ್ಯದೊಳಗೆ ಕನ್ನಡ ಸಂಪೂರ್ಣವಾಗಿ ರಾಜ್ಯಭಾಷೆಮಾಡದೇ ಹೋದಲ್ಲಿ ಇವರಿಗೂ ಅಂತಹದುಸ್ಥಿತಿ ಬರಬಹುದು. ಕನ್ನಡವನ್ನು ಸಂಪೂರ್ಣವಾಗಿ ರಾಜ್ಯಭಾಷೆ ಮಾಡಬೇಕೆಂದು ಕೇಳಿಕೊಂಡು ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ನಿರ್ಣಯವನ್ನು ಈ ದಿವಸ ತಂದಂಥ ಶ್ರೀಮಾನ್ ದೇವರಾಜ ಅರಸ್‌ರವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಇಚ್ಛಿಸುತ್ತೇನೆ. ಬಹುಶಃ ಈ ನಿರ್ಣಯ ಖಾಸಗೀ ನಿರ್ಣಯವಾಗಿ ಕಳೆದ ೧೬ ವರ್ಷಗಳಿಂದಲೂ ಕೂಡ ಅನೇಕ ಸಾರಿ ಬಂದು ವಿಪುಲವಾಗಿ ಚರ್ಚೆಯಾಗಿ ತೀರ್ಮಾನಕ್ಕೆ ಬಾರದೇ ಇರುವ ಪ್ರಸಂಗಗಳನ್ನು ನಾವು ಕಾಣುತ್ತಾ ಇದ್ದೇವೆ. ಅಂತೆಯೇ ೧೯೫೬ನೇ ಇಸವೀಯಲ್ಲಿ ಈ ಖಾಸಗೀ ನಿರ್ಣಯ ಏನು ಒಂದು ಪಾಸು ಆಗಬೇಕಾಗಿತ್ತು, ಈ ರಾಜ್ಯಕ್ಕೆ ಏನು ಒಂದು ಕರ್ನಾಟಕ ಅನ್ನುವ ಹೆಸರು ಇಡಬೇಕಾಗಿತ್ತು ಅದರ ಬಗ್ಗೆ ವಿಪುಲವಾಗಿ ಚರ್ಚೆ ಆಗಿ ತೀರ್ಮಾನಕ್ಕೆ ಬಾರದೇ ಇರತಕ್ಕಂಥ ಪ್ರಸಂಗವನ್ನು ನಾವು ನೋಡುತ್ತಾ ಇದ್ದೇವೆ. ಅದೇ ಕಾಲದಲ್ಲಿ ದಿವಂಗತ ಮಾನ್ಯ ಗೋಪಾಲಗೌಡರು ಒಂದು ಮಾತನ್ನು ಹೇಳಿದ್ದಾರೆ ಏನೆಂದರೆ ಈ ನಿರ್ಣಯವನ್ನು ಪಾಸು ಮಾಡದೇ ಇರಬೇಕಾದರೆ ಅಂದಿನ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ನಿಜಲಿಂಗಪ್ಪನವರು ಇದಕ್ಕೆ ಹೆಚ್ಚು ಧೈರ್ಯ ಮಾಡದೇ, ಹೆಚ್ಚಿನ ಒಂದು ಪ್ರೋತ್ಸಾಹ ಕೊಡದೇ ಇದ್ದುದರಿಂದ ಈ ನಿರ್ಣಯಕ್ಕೆ ಸೋಲು ಆಯಿತು. ಬಹುಶಃ ಇದು ಅವರ ಒಂದು ಮುಖಂಡತ್ವಕ್ಕೆ, ಅವರು ಒಂದು ನಾಯಕತ್ವಕ್ಕೆ ಪ್ರಥಮಸೋಲು ಎಂದು ಈ ರೀತಿ ಹೇಳಿದ್ದಾರೆ. ನಿಜವಾಗಿಯೂ ಕೂಡ ದಿವಂಗತ ನೆಹರೂರವರು ಮಾಡಿದಂಥ ಒಂದು ಸ್ಟೇಟ್‌ಮೆಂಟನ್ನು ಜ್ಞಾಪಕಕ್ಕೆ ತೆಗೆದುಕೊಳ್ಳಬೇಕು.

Success comes to those who dare and act. It seldom comes to the timid.

ಯಾವ ನಾಯಕತ್ವದಿಂದ ಆಗಲಿ ಧೈರ್ಯವಾಗಿ, ಪ್ರಾಮಾಣಿಕಯಿಂದ ಜನತೆಗೆ ಬೇಕಾದಂಥ, ಜನತೆಗೆ ಇಷ್ಟವಾದಂಥ ಕಾರ್ಯಕ್ರಮವನ್ನು ಯಾವ ನಾಯಕರು ಮಾಡುತ್ತಾರೋ ಆ ನಾಯಕರಿಗೆ ಯಾವಾಗಲೂ ಜಯ ಇದೆ. ಆ ಒಂದು ನಿರ್ಣಯವನ್ನು ಆಹೊತ್ತು ತೆಗೆದುಕೊಂಡಿದ್ದರೆ ಆಗಿನ ನಾಯಕರಾಗಿದ್ದಂಥ ಶ್ರೀಮಾನ್ ನಿಜಲಿಂಗಪ್ಪ ಒಂದು ಹೆಚ್ಚಿನ ಕೀರ್ತಿ, ಕರ್ನಾಟಕದ ಶಿಲ್ಪಿ ಎಂಬ ನೆರವು ಕೊಡುತ್ತಿದ್ದಿತು. ಅವರು ಇದನ್ನು ತೆಗೆದುಕೊಳ್ಳದೇ ಇದ್ದುದರಿಂದ ಆ ಪ್ರಥಮ ಸೋಲನ್ನು ಅವರೇ ಅನುಭವಿಸುತ್ತಿದ್ದಾರೆ. ಆದಕ್ಕೆ ಬಹುಶಃ ಕವಿಗಳ ಮತ್ತು ಸಾಹಿತ್ಯದ ಹಿನ್ನೆಲೆಗೆ ಈ ಒಂದು ಕರ್ನಾಟಕ ಎನ್ನುವ ಹೆಸರನ್ನು ನಾವು ಇಡಬೇಕಾಗಿಲ್ಲ. ಆದರೆ ಈ ಒಂದು ಚಳುವಳಿಯಿಂದ ಅಂದರೆ ಜನತಾ ಚಳುವಳಿಯಲ್ಲಿ ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರು ಇಡಬೇಕು ಅನ್ನುವುದರ ಬಗ್ಗೆ ಅನೇಕ ಸಾದೃಶ್ಯಗಳನ್ನು ನಾವು ನೋಡಿದ್ದೇವೆ. ೧೯೨೦ ರಿಂದ ಹಿಡಿದು ೧೯೪೭ನೇ ಇಸವಿಯ ವರೆಗೂ ಮಹಾತ್ಮಾ ಗಾಂಧೀಜಿಯವರನೇತೃತ್ವದಲ್ಲಿ ಇದ್ದಂಥ ಎ.ಐ.ಸಿ.ಸಿ.ಯಲ್ಲೂ ಕೂಡ ಈ ಭಾಷಾವಾರು ಪ್ರಾಂತಗಳ ಬಗ್ಗೆ ಭಾಷೆಗಳ ಆಧಾರದ ಮೇಲೆ ಈ ರಾಜ್ಯ ವಿಂಗಡಣೆ ಆಗಬೇಕು ತನ್ಮೂಲಕ ಆಯಾಯ ರಾಜ್ಯಗಳಿಗೆ ಭಾಷೆಯ ಒಂದು ಆಧಾರದ ಮೇಲೆ ಆಯಾ ಪ್ರಾಂತದ ಹೆಸರನ್ನು ಇಡಬೇಕೆನ್ನುವ ತತ್ವವನ್ನು ಒಪ್ಪಿಕೊಂಡಿದ್ದಾರೆ. ಅಂತೆಯೇ ೧೯೫೧ರಲ್ಲಿ ಬೆಂಗಳೂರಿನಲ್ಲಿ ಎ. ಐ. ಸಿ. ಸಿ. ನಡೆದಾಗ ಅದನ್ನು ಭಾಷಾವಾರು ಆಧಾರದ ಮೇಲೆ ರಾಜ್ಯ ವಿಂಗಡಣೆ ಆಗಬೇಕು ಮತ್ತು ಅದನ್ನು ಜಾರಿಗೆ ತರಬೇಕು ಅಂತ ಹೇಳಿ ಒಂದು ನಿರ್ಣಯ ನಡೆಯಿತು. ಮತ್ತು ಈ ಒಂದು ನಿರ್ಣಯ ಪಾರ್ಲಿಮೆಂಟ್‌ನಲ್ಲೂ ಕೂಡ ಚರ್ಚೆಯಾಗಿ ಏನು ಒಂದು ಸ್ಟೇಟ್ ರೀ ಆರ್ಗನೈಸೇಷನ್ ಕಮೀಷನ್ ಅಂತಹ ನಿರ್ಮಾಣವಾಯಿತೋ ಅದರಂತೆಯೇ ಈ ದೇಶದ ಭಾಷಾವಾರು ಪ್ರಾಂತಗಳು ನಡೆದವು.

೧ನೇ ನವೆಂಬರ್ ೧೯೫೬ ರಿಂದ ಮೈಸೂರು ರಾಜ್ಯ ವಿಶಾಲವಾಯಿತು, ಹರಿದು ಹಂಚಿ ಹೋಗಿದ್ದ ಅನೇಕ ಪ್ರಾಂತಗಳು ಒಂದು ಗೂಡಿ ವಿಶಾಲ ಮೈಸೂರಾದ ಮೇಲೆ ಆದಕ್ಕೆ ಯಾವ ಹೆಸರು ಇಡಬೇಕು ಎಂಬ ಜಿಜ್ಞಾಸೆ ನಡೆದಿದೆ. ಕಳೆದ ೧೬ ವರ್ಷಗಳಿಂದ ಚರ್ಚೆ ನಡೆಯುತ್ತ ಬಂದಿದೆ. ಬಹುಶಃ ಒಂದು ದೇಶದ ಅಥವಾ ರಾಜ್ಯದ ಹೆಸರನ್ನು ಇಡುವಾಗ ಮುಖ್ಯವಾಗಿ ನಾವು ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕಾಗಿದೆ ಆ ದೇಶದ ಸಂಸ್ಕೃತಿ, ಇತಿಹಾಸ, ಸಾಹಿತ್ಯ, ಕಲೆ, ಕೌಶಲ್ಯ ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಭಾಷೆಗೆ ಪ್ರಾಧಾನ್ಯವನ್ನು ಕೊಟ್ಟು ಆದಕ್ಕೆ ಒಂದು ಹೆಸರು ಇಟ್ಟರೆ ಚೆನ್ನಾಗಿರುತ್ತದೆ ಯಾವ ವಸ್ತುವಿಗಾದರೂ ಒಂದು ಹೆಸರು ಹೇಳುವಾಗ ವಸ್ತುವಿನ ಗುಣವನ್ನು ಜ್ಞಾಪಕಕ್ಕೆ ತಂದುಕೊಳ್ಳಬಹುದು. ಅದೇ ರೀತಿ ರಾಜ್ಯದ ಹೆಸರನ್ನು ಹೇಳುವಾಗ ರಾಜ್ಯದ ಗುಣಾಂಶಗಳು, ಹಿರಿಮೆ, ಕಲೆ, ಚರಿತ್ರೆ, ಸಂಸ್ಕೃತಿ, ಇವುಗಳಲ್ಲಿ ಥಟ್ಟನೆ ಜ್ಞಾಪಕಕ್ಕೆ ಬರುವಂತೆ ಇರಬೇಕು. ಹರಿದು ಹಂಚಿಹೋಗಿದ್ದ ಕನ್ನಡಿಗರ ಕನಸು ನನಸಾಗಿ ಬಂದಂಥ ೧ನೇ ನವೆಂಬರ್ ೧೯೫೬ ರಿಂದ ಈ ದೇಶದ ಅನೇಕ ಜನರು ಈ ರಾಜ್ಯಕ್ಕೆ ಕರ್ನಾಟಕ ಎಂದು ಎಲ್ಲ ದೃಷ್ಟಿಯಿಂದಲೂ ಕರೆಯುವುದು ಸರಿ ಎಂದು ಹೇಳಿದರೂ ನಮ್ಮ ದುರದೃಷ್ಟದಿಂದ ಆ ಹೆಸರನ್ನು ಇಡಲಿಕ್ಕೆ ಆಗಲಿಲ್ಲ. ಬಹುಶಃ ಕಾರಣಾಂತರದಿಂದ ಮುಂದುವರೆಯುತ್ತ ಬಂತು. ಇಂದು ನಮ್ಮ ಮತ್ತು ಈ ದೇಶದ ಪುಣ್ಯ, ಶ್ರೀಮಾನ್ ದೇವರಾಜ ಅರಸು

ಅವರ ಮುಖಂಡತ್ವದಲ್ಲಿ ಹೆಸರು ಬದಲಾವಣೆಯಾಗಬೇಕಾಗಿದೆ. ಕರ್ನಾಟಕಕ್ಕೆ ಇತಿಹಾಸವಿದೆ. ಹೆಸರು
ಅನ್ವರ್ಥವಾಗಿದೆ. ಹೆಸರನ್ನು ಬದಲಾಯಿಸುವ ಈ ದಿನ ಮಹಾ ಸುದಿನವಾಗಿದೆ. ಮೂರು ಕೋಟಿ
ಕನ್ನಡಿಗರ ಭಾವೈಕ್ಯವಾಗಿ ಅದರ ಫಲ ದೊರೆಯುತ್ತದೆ ಎಂದು ನಾನು—ಈ ಸಂದರ್ಭದಲ್ಲಿ ಆಶಿಸುತ್ತೇನೆ.

4-30 P.M.

ಯಾವ ದೇಶದ ಚರಿತ್ರೆಯನ್ನು ತೆಗೆದುಕೊಂಡು ನೋಡಿದರೂ ಕೂಡ ಭಾಷೆಯೇ ಪ್ರಾಧಾನ್ಯವಾಗಿ
ಆ ರಾಜ್ಯದ ಹೆಸರು ಇಡುತ್ತಾರೆ. ಇಂಗ್ಲೀಷ್ ಭಾಷೆ ಆಡುವ ದೇಶಕ್ಕೆ ಇಂಗ್ಲೆಂಡ್ ಎಂದು ಹೆಸರು
ಇಟ್ಟಿದ್ದಾರೆ, ಫ್ರೆಂಚ್ ಭಾಷೆ ಮಾತನಾಡುವಂಥ ಭಾಗಕ್ಕೆ ಫ್ರಾನ್ಸ್ ಎಂದೂ, ಜರ್ಮನ್ ಭಾಷೆ ಇರುವಂಥ
ದೇಶಕ್ಕೆ ಜರ್ಮನಿ ಎಂದೂ ಹೀಗೆ ಆಯಾ ದೇಶದ ಭಾಷೆಯನ್ನು ಆಧಾರವಾಗಿಟ್ಟುಕೊಂಡು ಒಂದು
ರಾಜ್ಯದ, ದೇಶದ ಹೆಸರನ್ನು ಕರೆದಿದ್ದಾರೆ. ನಮ್ಮ ದೇಶದಲ್ಲಿ ಕೂಡ ಅನೇಕ ರಾಜ್ಯಗಳು ಭಾಷೆಯ
ಆಧಾರದ ಮೇಲೆ ಹೆಸರನ್ನು ಇಟ್ಟು ಕೊಂಡಿದ್ದಾರೆ. ನಾನು ಮೊದಲೇ ತಿಳಿಸಿದ ರೀತಿಯಲ್ಲಿ
ಸಂಸ್ಕೃತಿ, ಇತಿಹಾಸ, ಹಿರಿಮೆ, ಕಲೆ, ಕೌಶಲ್ಯ ಇವೆಲ್ಲವನ್ನೂ ಒಗ್ಗೂಡಿಸಿ, ಅದರ ಆಧಾರದ ಮೇಲೆ
ಕರ್ನಾಟಕ ಎಂದು ಇಡುವುದರಿಂದ ವಿಶಾಲ ಭಾವನೆ ಬೆಳೆದು ಭಾವೈಕ್ಯತೆ ಕೂಡ ಬರುವುದಕ್ಕೆ ಅವಕಾಶ
ವಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರೆಲ್ಲರೂ ಈ ನಿರ್ಣಯಕ್ಕೆ ಹೆಚ್ಚಿನ ರೀತಿಯಲ್ಲಿ ಬೆಂಬಲ
ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ರಾಜಕೀಯ ಪಕ್ಷಗಳೂ ಕೂಡ ೧೯೫೬ನೇ ಇಸವಿಯಿಂದಲೂ ಕರ್ನಾಟಕ ಸೋಷಿಯಲಿಸ್ಟ್ ಪಕ್ಷ,
ಕರ್ನಾಟಕ ಪ್ರಜಾ ಸೋಷಿಯಲಿಸ್ಟ್ ಪಕ್ಷ, ಕರ್ನಾಟಕ ಸ್ವತಂತ್ರ ಪಕ್ಷ, ಕರ್ನಾಟಕ ಕಮ್ಯೂನಿಸ್ಟ್ ಪಕ್ಷ ಎಂಬ
ಹೆಸರನ್ನು ಇಟ್ಟುಕೊಂಡರೇ ವಿನಾ ಯಾರೂ ಮೈಸೂರು ಎನ್ನುವ ಹೆಸರನ್ನು ಇಟ್ಟುಕೊಳ್ಳಲಿಲ್ಲ. ಮಾನ್ಯ
ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಸಾಹಿತಿಗಳಲ್ಲಿ ಪಂಪ, ನನ್ನ ಹರಿಹರ, ರಾಘವಾಂಕ
ಮುಂತಾದ ಎಲ್ಲ ಹಿರಿಯ ಕವಿಗಳೂ ಮತ್ತು ಈಗಿನ ರಮ್ಯ ಕವಿಗಳಾದ ಶ್ರೀ ಬಿ. ಎಂ. ಶ್ರೀಕಂಠಯ್ಯ,
ದ. ರಾ. ಬೇಂದ್ರೆ, ಡಾಕ್ಟರ್ ಪುಟ್ಟಪ್ಪ, ಮುಂತಾದವರೆಲ್ಲರೂ ಕೂಡ ಕರ್ನಾಟಕ ಎಂಬ ಪದವನ್ನು ಅವ
ಕವನಗಳಲ್ಲಿ ಬಳಸಿದ್ದಾರೆ. ಇಂಥ ಬುದ್ಧಿ ಜೀವಿಗಳ ಕವನಗಳು, ಸಾಹಿತ್ಯ ಇದರಲ್ಲೆಲ್ಲ ಕರ್ನಾಟಕಕೆ
ಪ್ರೋತ್ಸಾಹ ಕೊಟ್ಟಿದ್ದಾರೆ. ರಾಜಕೀಯ ಪಕ್ಷಗಳು ಕೂಡ ಕರ್ನಾಟಕ ಎನ್ನುವ ಪದವನ್ನು ಬಳಸಿಕೊಂಡು
ಪ್ರೋತ್ಸಾಹ ಕೊಟ್ಟಿದ್ದಾರೆ. ಮತ್ತು ಎಲ್ಲ ಪಕ್ಷದವರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಈ ರಾಜ್ಯಕ್ಕೆ
ಕರ್ನಾಟಕ ಎಂಬ ಹೆಸರು ಅನ್ವರ್ಥವಾಗುವುದರಿಂದ ಅದನ್ನು ಇಡಬೇಕೆಂದು ಅನೇಕ ರೀತಿಯಲ್ಲಿ ದೊಡ್ಡ
ಚಳುವಳಿಯನ್ನು ಕೂಡ ಮಾಡುತ್ತ ಬಂದಿದ್ದಾರೆ ಈ ಹೊತ್ತು ಸುದಿನ. ಆಡಳಿತ ಮಾಡತಕ್ಕ
ಕಾಂಗ್ರೆಸ್ ಪಕ್ಷವೂ ಕೂಡ ಕರ್ನಾಟಕ ಎನ್ನುವ ಅನ್ವರ್ಥನಾಮವನ್ನು ಒಡನೆ ಇಡಬೇಕು ಮುಂದುವರಿಸಿ
ಕೊಂಡು ಹೋಗಬಾರದು ಎಂದು ಈ ದಿನ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಮುಂದೆ ಈ ನಿರ್ಣಯ
ವನ್ನು ಮಂಡಿಸಿದ್ದಾರೆ. ರಾಜ್ಯದ ಹೆಸರನ್ನು ಮೈಸೂರು ಎನ್ನುವುದರಿಂದ ಕರ್ನಾಟಕ ಎಂದು
ಬದಲಾಯಿಸುವುದರ ಮೂಲಕ ಹಳೇ ಮೈಸೂರಿನ ಜನತೆಗೆ ಕೂಡ ಹೆಚ್ಚಿನ ವ್ಯಥೆಯಾಗುವುದಿಲ್ಲ. ನಾನೂ
ಒಬ್ಬ ಹಳೇ ಮೈಸೂರಿನವರು, ಮೈಸೂರು ನಗರದಿಂದ ಬರುವವನು. ಮಾನ್ಯ ಮುಖ್ಯ ಮಂತ್ರಿಗಳೂ
ಮೈಸೂರು ಜಿಲ್ಲೆಯಿಂದ ಬರುವವನು. ಅಧ್ಯಕ್ಷರು ಕೂಡ ಮೈಸೂರು ಜಿಲ್ಲೆಯವರೇ ಆಗಿದ್ದಾರೆ. ಬಹುಶಃ
ಹೆಸರನ್ನು ಬದಲಾವಣೆ ಮಾಡುವುದರಿಂದ ನಮಗೆ ಹೆಚ್ಚಿನ ವ್ಯಥೆಯಾಗುವುದಿಲ್ಲ, ಇನ್ನೂ ಹೆಚ್ಚಿನ
ಸಂತೋಷವಾಗುತ್ತದೆ. ನಾವು ವಿಶಾಲ ಮನೋಭಾವನನ್ನು ಬೆಳೆಸಿಕೊಂಡು ಕರ್ನಾಟಕದಲ್ಲಿ ಮೈಸೂರು
ಕೂಡ ಅಡಕವಾಗಿದೆ, ನಾವೆಲ್ಲ ಹೆಸರನ್ನು ಬದಲಾಯಿಸುವುದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡು
ತ್ತಿದ್ದೇವೆ. ಕರ್ನಾಟಕಕ್ಕೆ ಹೆಚ್ಚಿನ ಪ್ರಗತಿ ಇನ್ನೂ ಮುಂದೆಯೂ ಆಗಲಿ ಎಂದು ಹೇಳಿ ನನ್ನ ಮಾತನು
ಮುಗಿಸುತ್ತೇನೆ. "ಜೈ ಕರ್ನಾಟಕ.

‡ ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟವಾಳ) : ಅಧ್ಯಕ್ಷರೆ, ಈ ಹೊತ್ತಿನ ದಿವಸ ರಾಜ್ಯದ ಹೆಸರು
ಬದಲಾವಣೆ ಮಾಡುವ ನಿರ್ಣಯನ್ನು ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿದ್ದಾರೆ. ಇದು ಇಡೀ
ಕರ್ನಾಟಕದ ಎಲ್ಲ ಜನರ ಭಾಷೆ, ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ನಿರ್ಣಯ, ಇದನ್ನು ಈ ಹೊತ್ತಾದರೂ
ಮಂಡಿಸಿದುದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.
ಕರ್ನಾಟಕದ ಏಕೀಕರಣದ ಸೇವಾಗಿ ಬಹಳ ಕಷ್ಟಪಟ್ಟು ತ್ಯಾಗ ಮಾಡಿ ಹೋರಾಟ ಮಾಡಿದಂಥ ಅನೇಕ
ಮಹನೀಯರ ನೆನಪನ್ನು ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ಈಗಾಗಲೇ ಮಾಡಿದ್ದಾರೆ.
ನಾನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬರತಕ್ಕವನು. ಕರ್ನಾಟಕ ಏಕೀಕರಣದ ವಿಚಾರದಲ್ಲಿ ದಕ್ಷಿಣ
ಕನ್ನಡದ ಜನ ಬಹಳ ಮುಂದೆ ನಿಂತು ಹೋರಾಟ ಮಾಡಿದಂಥ ಜನ. ಆ ಹೋರಾಟದಲ್ಲಿ ಮಂಜೇಶ್ವರದ
ಗೋವಿಂದ ಪೈ ಅವರ ಹೆಸರನ್ನು ಕರ್ನಾಟಕ ಏಕೀಕರಣದ ಹೋರಾಟಗಾರರ ಚುಕ್ಕಾಣಿಯನ್ನು ಹಿಡಿದಿದ

(ಶ್ರೀ ಬಿ. ವಿ. ಕಕ್ಕಿಲ್ಲಾಯ)

ಶ್ರೀ ರಾಮಕೃಷ್ಣ ಕಾರಂತರ ಹೆಸರನ್ನು ಹಾಗೂ ದಿವಂಗತ ಕೆ. ಪಿ. ಜಿನರಾಜ ಹೆಗಡೆ ಅವರ ಹೆಸರನ್ನು, ಗೋಪಾಲ ಗೌಡರ ಮತ್ತು ಅಂದಾನಪ್ಪ ದೊಡ್ಡಮೇಟಿ ಅವರ ಹೆಸರುಗಳ ಜೊತೆಯಲ್ಲಿ ಸ್ಮರಿಸದೇ ಇದ್ದರೆ ನಾವು ನಮ್ಮ ಕರ್ತವ್ಯವನ್ನು ನೆರವೇರಿಸಿದ ಹಾಗೆ ಆಗುವುದಿಲ್ಲ. ಆದುದರಿಂದ ಅವರು ಈ ಕರ್ನಾಟಕ ಏಕೀಕರಣಕ್ಕೋಸ್ಕರ ಮಾಡಿದಂಥ ತ್ಯಾಗ ಮತ್ತು ಮಾಡಿದಂಥ ಕಾರ್ಯಗಳ ಬಗ್ಗೆ ಈ ಹೊತ್ತಿನ ಸಂದರ್ಭದಲ್ಲಿ ಅವರಿಗೆ ನಮ್ಮೆಲ್ಲರ ಕೃತಜ್ಞತೆಗಳನ್ನು ನಾವು ಅರ್ಪಿಸಬೇಕಾಗಿದೆ.

ಈವೊತ್ತು ಈ ನಿರ್ಣಯವನ್ನು ತಂದಿದ್ದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುವುದಕ್ಕಿಂತಲೂ ಹೆಚ್ಚಾಗಿ, ಇಂಥ ಒಂದು ಮಾರ್ಪಾಟು ಆಳುವಪಕ್ಷದ ಮನೋಭಾವದಲ್ಲಿ ಬರುವ ಹಾಗೆ ಮಾಡಿದ ನಮ್ಮ ರಾಜ್ಯದ ಜನತೆಯನ್ನು ನಾನು ಅಭಿನಂದಿಸಬೇಕಾಗಿದೆ. ಈವೊತ್ತು ಸಭೆ ಆರಂಭವಾದಾಗ ನಿರ್ಣಯವನ್ನು ಮಂಡಿಸಿದಾಗ ಶ್ರೀಮಾನ್ ಆರ್ಮುಗಂ ಅವರು ಸಿಹಿ ತಿಂಡಿಯನ್ನು ತಂದು ಅದನ್ನು ಮಾನ್ಯ ಸಚಿವರಿಗ ಕೊಟ್ಟರು ಅಂತೆಯೇ ಶ್ರೀವಾಟಾಳ್ ನಾಗರಾಜ್ ಅವರು ಸಿಹಿ ತಿಂಡಿಯನ್ನು ಮುಖ್ಯಮಂತ್ರಿಗಳ ಬಾಯಿಗೆ ಇಟ್ಟರು ಸಂತೋಷ. ಶ್ರೀಮಾನ್ ಆರ್ಮುಗಂ ಅವರು ಇವತ್ತು ಸಿಹಿ ತಂದು ಹಂಚುವುದಕ್ಕೂ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ವೀಕರಿಸುವುದಕ್ಕೂ ಒಂದು ಹಿನ್ನಲೆಯಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಕರ್ನಾಟಕ ಎನ್ನುವ ಹೆಸರು ನಮ್ಮ ರಾಜ್ಯಕ್ಕೆ ಇರಿಸಬೇಕು ಎಂದು ಮೊದಲು ಅನೇಕ ಬಾರಿ ಈ ಸದನದಲ್ಲಿ ಚರ್ಚೆ ನಡೆಯಿತು. ಕೊನೆಯಬಾರಿ ಚರ್ಚೆ ನಡೆದಾಗ ಶ್ರೀಮಾನ್ ಆರ್ಮುಗಂ ಅವರು ಬಹಳ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಮಹನೀಯರು ಆವೊತ್ತಿನ ದಿವಸ ಕರ್ನಾಟಕ ಎನ್ನುವ ಪದಕ್ಕೆ ತಮಿಳಿನಲ್ಲಿ ಅನ್‌ಸಿವಿಲೈಸ್ಡ್ ಎನ್ನುವ ಅರ್ಥವಿದೆ, ಎಂದು ಸೂಚನೆ ಮಾಡಿ, ಅದನ್ನು ತೀವ್ರವಾಗಿ ವಿರೋಧ ಮಾಡಿದ್ದನ್ನು ನಾನು ಓದಿದ್ದೇನೆ. ಅವರು ಹೇಳಿದ ಹಾಗೆ ಈವೊತ್ತಿನದಿವಸ ಅನೇಕ ಸದಸ್ಯರು ಆಕ್ಷೇಪಣೆ ಎತ್ತಿದಾಗ, ತಮಿಳಿನಲ್ಲಿ ಆರೀತಿ ಇರಬಹುದು, ಅದಕ್ಕಾಗಿ ಏನೂ ಆಕ್ಷೇಪಣೆ ಎತ್ತಬೇಕಾಗಿಲ್ಲ. Real meaning is quite different ಎನ್ನುವ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾನು ಮುಖ್ಯ ಮಂತ್ರಿಗಳ ಸಾಧುತ್ವವನ್ನು ಪ್ರಶ್ನೆ ಮಾಡುವುದಕ್ಕಾಗಲೀ, ಮಾನ್ಯ ಆರ್ಮುಗಂ ಅವರ ಹೆಸರಿಗೆ ಕಳಂಕ ತರುವುದಕ್ಕಾಗಲೀ ಇದನ್ನು ಪ್ರಸ್ತಾಪ ಮಾಡುತ್ತಿಲ್ಲ. ಏತಕ್ಕೋಸ್ಕರ ಪ್ರಸ್ತಾಪಿಸುತ್ತೇನೆ ಎಂದರೆ, ನಮ್ಮ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರು ಕರ್ನಾಟಕ ಏಕೀಕರಣವಾದಾಗ ಬರಬೇಕಾಗಿತ್ತು, ಏತಕ್ಕೆ ಬರಲಿಲ್ಲ ಎನ್ನುವುದನ್ನು ಯೋಜನೆ ಮಾಡಬೇಕು. ಕರ್ನಾಟಕ ಏಕೀಕರಣಕ್ಕೋಸ್ಕರ ಹೋರಾಟ ನಡೆಸಿದ ಕಾಲದಲ್ಲಿ ಮುಂಬೈ ಪ್ರದೇಶಕ್ಕೆ ಸೇರಿದ ಜಿಲ್ಲೆಗಳು, ಹೈದರಾಬಾದಿಗೆ ಸೇರಿದ ಮೂರು ಜಿಲ್ಲೆಗಳು, ಮದ್ರಾಸಿಗೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯ ಕೊಳ್ಳೆಗಾಲದ ಪ್ರದೇಶದ ಜನ ನಾವು ಕರ್ನಾಟಕ ಸಂಸ್ಥಾನಾಧೀಶ್ವರರು ಆಳುವ ರಾಜ್ಯಕ್ಕೆ ಸೇರಬೇಕು ಎನ್ನುವ ಹೋರಾಟ ನಡೆಸಿದರು. ಹೋರಾಟ ನಡೆಸಿದಾಗ ನಮ್ಮ ದೇಶದ ಸಾಮ್ರಾಜ್ಯವಾದಿಗಳು ಅದನ್ನು ಹತ್ತಿಕ್ಕಿದರು ಆದರೂ ಅದನ್ನುಕ್ಕಿಸದೆ ಕನ್ನಡ ಮಾತನಾಡುವ ಜನ ಹರಿದು ಹಂಚಿ ಹೋಗಿ ನಾನಾ ಕಡೆಗಳಲ್ಲಿ ಸೇರಿದ್ದಾರೆ, ಅವರ ಅಭಿವೃದ್ಧಿ ಸಾಧಿಸಬೇಕಾದರೆ, ಅವರನ್ನು ಒಂದುಗೂಡಿಸಬೇಕು ಎನ್ನುವ ಆಕಾಂಕ್ಷೆಯಿಂದ ಕರ್ನಾಟಕ ಏಕೀಕರಣಕ್ಕೆ ಹೋರಾಟ ನಡೆಸಿದೆವು. ನಮ್ಮ ರಾಜ್ಯದಲ್ಲಿ ಎರಡು ಕರ್ನಾಟಕ ಆಗಬೇಕು ಎನ್ನುವ ವಿಚಾರವನ್ನು ವಿರೋಧ ಮಾಡುತ್ತಾ ಬಂದಿದ್ದಾರೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ನಿರ್ಣಯ ಮಂಡಿಸಿದಾಗ ಹೇಳಿದರು. ಬೇರೆ ರಾಜ್ಯಗಳಲ್ಲಿದ್ದಂಥ ಜನ, ಹಳೆಯ ಮೈಸೂರಿನ ಜನತೆಯ ಜೊತೆಯಲ್ಲಿ ಸೇರಿ ಅಖಂಡ ಕರ್ನಾಟಕ ನಿರ್ಮಾಣ ಆಗುವುದಕ್ಕಿಂತಲೂ ಮೈಸೂರನ್ನೇ ಮುಂದುವರಿಸಿಕೊಂಡು ಹೋಗಬೇಕು, ಒಂದು ವೇಳೆ ಏನಾದರೂ ಅಧಿಕಾರಕ್ಕೆ ಬಂದರೆ, ಅಧಿಕಾರ ಸೂತ್ರವನ್ನು ಚಲಾಯಿಸಿಕೊಂಡು ಹೋಗಬೇಕು ಎಂದು ಇದ್ದರು. ಅಧಿಕಾರ ಕೈತಪ್ಪಿ ಹೋಗುತ್ತದೆ ಎನ್ನುವ ಭಯದಿಂದ ಆ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕೆ ವಿರೋಧಿಸಿದ ಜನ ಕರ್ನಾಟಕ ಎನ್ನುವ ಹೆಸರನ್ನು ಇಟ್ಟಿದ್ದರೂ ಕೂಡ ಇದಕ್ಕೆ ವಿರೋಧವಾಗಿದ್ದರು ಎಂದು ಈ ಸಂದರ್ಭದಲ್ಲಿ ಸಮರ್ಥಿಸದೆ ಇರುವುದಕ್ಕೆ ಸಾಧ್ಯವಿಲ್ಲ. ಕರ್ನಾಟಕ ಏಕೀಕರಣವಾಗಿ ಇಷ್ಟು ವರ್ಷಗಳಾದರೂ ಕೂಡ, ಈ ರಾಜ್ಯಕ್ಕೆ ಹೊರಪ್ರಾಂತ್ಯಗಳಿಂದ ಬಂದು ಸೇರಿದಂಥ ಇತರ ಪ್ರದೇಶಗಳಕಡೆ ಸರ್ಕಾರ ತನ್ನ ಗಮನ ಕೊಡುತ್ತಾ ಇರುವುದು ಸಾಕಾಗುತ್ತಿಲ್ಲ. ಹಿಂದೆ ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳು, ಮುಂಬೈ ರಾಜ್ಯದ ಆಡಳಿತಕ್ಕೆ ಒಳಗಾಗಿದ್ದಾಗ ಬಹಳ ಕಡೆಗಾಣಿಸಲ್ಪಟ್ಟ ಪ್ರದೇಶಗಳಾಗಿದ್ದುವು. ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳು ನಿಜಾಮರ ರಾಜ್ಯದಲ್ಲಿ ಬಹಳ ಹಿಂದುಳಿದಂಥ ಪ್ರದೇಶಗಳಾಗಿದ್ದುವು. ಮದ್ರಾಸಿಗೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆ ಕೊಳ್ಳೆಗಾಲ ಈ ಜಿಲ್ಲೆಗಳಲ್ಲಿ ವಿದ್ಯಾಭ್ಯಾಸ ಸೌಕರ್ಯವಾಗಲೀ, ಆರೋಗ್ಯ ರಕ್ಷಣೆಯಾಗಲಿ ದೊರೆಯದೆ ಕಡೆಗಾಣಿಸಲ್ಪಟ್ಟ ಪ್ರದೇಶಗಳಾಗಿದ್ದುವು. ಆ ಹಿಂದುಳಿದ ಪ್ರದೇಶಗಳನ್ನು ಮುಂದುವರೆದ ಪ್ರದೇಶಗಳಲ್ಲಿ

ಸೇರಿಸಿಕೊಂಡು ಕರ್ನಾಟಕ ಪ್ರಾಂತವಾಗಿರುವಾಗ ರಾಜ್ಯದ ಎಲ್ಲಾ ಪ್ರದೇಶಗಳು ಒಂದೇ ರೀತಿಯಲ್ಲಿ
ಬೆಳೆವಣಿಗೆ ಆಗುವ ಒಂದು ಧೋರಣೆಯನ್ನು ನಡೆಸಿಕೊಂಡು ಬರುವುದರಲ್ಲಿ ನಮ್ಮ ರಾಜ್ಯ ಗಮನಕೊಡ
ಬೇಕಾಗಿದೆ. ಹಿಂದಿನ ಸಂದರ್ಭದಲ್ಲಿ ಚರ್ಚೆ ನಡೆದಾಗ, ಕರ್ನಾಟಕ ಎನ್ನುವ ಹೆಸರನ್ನು ಇಟ್ಟರೆ ಮೈಸೂರಿನ
ಗತ ವೈಭವಕ್ಕೆ ಅಥವಾ ಅದರ ವೈಶಿಷ್ಟ್ಯತೆಗೆ ಚ್ಯುತಿ ಬರುತ್ತದೆ ಎನ್ನುವ. ಭಾವನೆ ಇತ್ತು. ಅದನ್ನು
ಕೂಡ ನಮ್ಮ ಸರ್ಕಾರ ಪೂರ್ತಿಯಾಗಿ ಕೈಬಿಟ್ಟಿದೆ ಎನ್ನುವದು ಕೂಡ ಖಚಿತವಾಗಿಲ್ಲ. ಈವೊತ್ತಿನದಿವಸ
ಕರ್ನಾಟಕ ಎನ್ನುವ ಹೆಸರನ್ನು ಇಟ್ಟಿದ್ದಕ್ಕೆ ತಮ್ಮನ್ನು ಅಭಿನಂದಿಸುವುದರ ಜೊತೆಯಲ್ಲಿ ಅದಕ್ಕಿಂತ
ಹೆಚ್ಚಾಗಿ ನಮ್ಮನ್ನು ಆರಿಸಿದವರನ್ನು ಅಭಿನಂದಿಸುತ್ತೇನೆ. ಏಕೆಂದರೆ ಎಲ್ಲಾ ರಾಜ್ಯದಲ್ಲಿ ಕೂಡ ಜನತೆಯ
ಒತ್ತಾಯದಿಂದ ತಂದಂಥ ಬದಲಾವಣೆಯನ್ನು ಕಡೆಗಾಣಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಒಂದು
ಒತ್ತಾಯದ ಈ ರಾಜ್ಯದ ಹೆಸರನ್ನು ಬದಲಾವಣೆ ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ
ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ಮುಂದಕ್ಕೆ ಕನ್ನಡವನ್ನು ಆಡಳಿತ ಭಾಷೆ
ಮಾಡುವುದರ ಬಗ್ಗೆ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದರ ಬಗ್ಗೆ ಮತ್ತು ಕರ್ನಾಟಕ
ಜನತೆಯು ಐಕ್ಯತೆ ಆಗುವ ರೀತಿಯ ಒಂದು ಧೋರಣೆಯನ್ನು ರೂಪಿಸಿಕೊಳ್ಳಬೇಕು ಎಂದು ತಮ್ಮಲ್ಲಿ
ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು, ಇವತ್ತು
ಅವರ ಭಾಷಣದ ಕೊನೆಯಲ್ಲಿ, ಎಲ್ಲೆ ಇರು, ಎಂತೆ ಇರು, ಎಂದೆಂದಿಗೂ ನೀ ಕನ್ನಡವಾಗಿರು, ಎನ್ನುವ
ಅಭಿಪ್ರಾಯ ಕೊಟ್ಟರು. ಇದರ ವಿಚಾರದಲ್ಲಿ ಒಂದು ಮಾತು ಹೇಳಬೇಕೆಂದಿದ್ದೇನೆ. ಒಂದು ರಾಜ್ಯದಲ್ಲಿ
ಕನ್ನಡ ಮಾತನಾಡುವ ಜನ ಇದ್ದಾರೆ, ಆದ್ದರಿಂದ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರಿಟ್ಟಿದ್ದಾರೆ, ಎನ್ನುವ
ಅಭಿಪ್ರಾಯ ಬರಬಾರದು. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ, ಭಾರತ ಮಾತೆಗೆ ಕರ್ನಾಟಕ
ಮಾತೆಯಿಂದ ಯಾವ ರೀತಿಯಲ್ಲಿ ಚ್ಯುತಿ ಬರಬಾರದು ಅಂತಹ ವರ್ತನೆ, ಮನೋಭಾವ ನಮ್ಮ ಕರ್ನಾಟಕ
ದಲ್ಲಿ ಬಾರದೆ ಇರಲಿ ಎಂದು ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಕೊನೆಯದಾಗಿ, ಮಹಾಜನ್ ಕಮಿಷನ್ ವರದಿಯನ್ನು ಕೇಂದ್ರ ಸರ್ಕಾರದವರು ಚಾಚೂತಪ್ಪದೆ
ಅಂಗೀಕಾರ ಮಾಡಿ ಅದನ್ನು ಜಾರಿಗೆ ತರದಿದ್ದರೆ, ಸ್ವತಂತ್ರ ಕರ್ನಾಟಕ ರಾಜ್ಯದ ಘೋಷಣೆ ಮಾಡುವ
ಸಂದರ್ಭದಲ್ಲಿ ಪ್ರಚಂಡ ಚಳುವಳಿ ಎಬ್ಬಿಸುತ್ತೇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರೊಬ್ಬರು ಹೇಳಿದ್ದು
ಪತ್ರಿಕೆಯಲ್ಲಿ ಪ್ರಕಟವಾಯಿತು. ಅದನ್ನು ಓದಿ ನನಗೆ ಬಹಳ ವ್ಯಸನವಾಯಿತು. ಮಹಾಜನ್ ವರದಿ
ಇರಲಿ, ಇನ್ನು ಬೇರೆ ಯಾವುದೇ ಇರಲಿ. ಕರ್ನಾಟಕಕ್ಕೆ ಬರತಕ್ಕಂಥ ಪ್ರದೇಶಗಳು ಏನು ಉಳಿದಿವೆ,
ಅವುಗಳನ್ನು ಮತ್ತು ಕಾಸರ ಗೋಡನ್ನು ಕರ್ನಾಟಕ ಪ್ರದೇಶಕ್ಕೆ ಸೇರಿಸಬೇಕಾಗಿದೆ. ಮೊನ್ನೆ ಮೊನ್ನೆ
ಕಾಸರಗೋಡಿನಲ್ಲಿ ಸೇರಿದ ಕರ್ನಾಟಕ ಸಾಹಿತ್ಯ ಸಮ್ಮೇಳದಲ್ಲಿ, ಆ ಪ್ರದೇಶವನ್ನು ಕರ್ನಾಟಕಕ್ಕೆ ಸೇರಿಸಬೇಕ
ಎಂದು ನಿರ್ಣಯ ಮಾಡಿದೆ. ಅಲ್ಲಿನ ಮಂಜೇಶ್ವರ ಗೋವಿಂದ ಪೈ, ಕಿಣ್ಣರಯ್ಯ ಮತ್ತು ಇತರೆ ಯಕ್ಷಗಾನ
ಕಲೆಗಳಿಂದ ಕೂಡಿದ ಕಾಸರಗೂಡು ಕರ್ನಾಟಕಕ್ಕೆ ಸೇರಬೇಕು ಎಂದು ಇದ್ದ ಮಹಾಜನ್ ವರದಿಯನ್ನು
ಕೇಂದ್ರಸರ್ಕಾರ ಒಪ್ಪಿಕೊಂಡಿದ್ದು ಆಗಿದೆ. ಆ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕು ಎನ್ನುವುದರಲ್ಲಿ
ಯಾವ ಸಂಶಯವೂ ನನಗಿಲ್ಲ. ಈ ವಿಷಯದಲ್ಲಿ ಸಂಪೂರ್ಣವಾಗಿ ನಾನು ಮಾನ್ಯ ಸದಸ್ಯರಾದ ಶ್ರೀ
ಲಿಂಗಪ್ಪನವರ ಜೊತೆಯಲ್ಲಿದ್ದೇನೆ.

ಇನ್ನು ಕಾವೇರಿಯಿಂದ ಗೋದಾವರಿ ವರೆಗೆ ಇದ್ದಂಥ ನಾಡುನಾಡು ನಮ್ಮ ಕನ್ನಡ ಎಂದು ನಾನು ಹೇಳು
ತ್ತೇನೆ. ನನ್ನ ಒಂದೇ ಒಂದು ಪ್ರಾರ್ಥನೆ ಇಷ್ಟೇ. ಇವೊತ್ತು ಕಾವೇರಿ ನದಿ ಕೊಡಗಿನಲ್ಲಿ ಹುಟ್ಟಿ ತಮಿಳು
ನಾಡಿನಲ್ಲಿ ಮಹಾಸಾಗರವನ್ನು ಸೇರುತ್ತದೆ. ಕೃಷ್ಣ ನದಿ ನಮ್ಮ ನಾಡಿನ ಕರ್ನಾಟಕದಲ್ಲಿ ಹರಿದು ಆಂಧ್ರ
ಪ್ರದೇಶವನ್ನು ಸೇರುತ್ತದೆ ಗಂಗಾ ಗೋದಾವರಿ ನದಿಗಳು ಒಂದುಗೂಡುವ ದಿವಸ ಬಹಳ ದೂರ
ಇಲ್ಲ. ಇಂಥಾ ಕರ್ನಾಟಕದ ಭೂಮಿಯಲ್ಲಿ ಹರಿಯುವ ನದಿ, ಕರ್ನಾಟಕದ ಸಂಸ್ಕೃತಿ ಇಡೀ ಭಾರತ
ದೇಶದಲ್ಲಿ ಹರಡಿ ಭಾರತ ಸಂಸ್ಕೃತಿಯನ್ನು ಇನ್ನಷ್ಟು ಪ್ರಭಾವಿತಗೊಳಿಸಲು ಮತ್ತು ಉನ್ನತಿಗೊಳಿಸಲು
ಸಹಕಾರಿಯಾಗಲಿ ಎಂದು ನಾನು ಕಳಕಳಿಯಿಂದ ಹೇಳುತ್ತೇನೆ. ಇಂದು ಈ ನಿರ್ಣಯವನ್ನು ತಂದಿದ್ದಾರೆ.
ಈ ನಿರ್ಣಯ ತರುವುದಕ್ಕೆ ಹಿನ್ನೆಲೆ ಬಹಳ ಇದೆ. ಈ ರಾಜ್ಯದಲ್ಲಿ ಇದಕ್ಕಾಗಿ ನಡೆದಂಥ ಹೋರಾಟದಲ್ಲಿ,
ಇದಕ್ಕಾಗಿ ನಡೆದಂಥ ಪ್ರಯತ್ನದಲ್ಲಿ ನನ್ನ ಪಕ್ಷ, ಸ್ವಲ್ಪ ಮಟ್ಟಿಗೆ ವೈಯಕ್ತಿಕವಾಗಿ ನಾನೂ ಕೂಡ ಆರಂಭ
ದಿಂದ ಶ್ರೀ ಗೋಪಾಲಗೌಡರ ಜೊತೆಯಲ್ಲಿ ಮತ್ತು ಕಾರಂತರ ಜೊತೆಯಲ್ಲಿ ಹಾಗೂ ಇತರ ಮಾನ್ಯ
ಸದಸ್ಯರ ಜೊತೆಯಲ್ಲಿ ಅಲ್ಪ ಸೇವೆ ಸಲ್ಲಿಸಿದ್ದೇನೆ. ಇವೊತ್ತಿನ ದಿವಸ ತಡವಾಗಿ ಆದರೂ ಈ ನಿರ್ಣಯ
ತಂದಿದ್ದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿ ನನ್ನ ಎರಡು ಮಾತುಗಳನ್ನು
ಮುಗಿಸುತ್ತೇನೆ.

† ಶ್ರೀ ಕೆ.ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ ಈ ದಿವಸ ನನಗೆ ಬಹಳವಾಗಿ ಸಂತೋಷವನ್ನು ಉಂಟು ಮಾಡತಕ್ಕ ದಿವಸ ಎಂದು ಹೇಳಿದರೆ ತಪ್ಪಾಗಲಾರದು. ಕಾರಣ ಇಷ್ಟೇ ಈ ಕರ್ನಾಟಕ ಏಕೀಕರಣಕ್ಕೆ ನಾನು ಸಹ ನನ್ನ ಅಲ್ಪ ಕಾಣಿಕೆಯನ್ನು ಕೊಟ್ಟಿದ್ದೇನೆ. ೧೯೪೯ನೇ ಇಸವಿಯಲ್ಲಿ ದಾವಣಗೆರೆಯಲ್ಲಿ ಕರ್ಣಾಟಕ ಯುವಕ ಪರಿಷತ್ತು ನಡೆದಾಗ ದಿವಂಗತ ಶರಶ್ಚಂದ್ರ ಬೋಸರು ಉದ್ಘಾಟನೆ ಮಾಡಿದರು. ಸಭೆ ಅಧ್ಯಕ್ಷತೆಯನ್ನು ವಹಿಸತಕ್ಕ ಒಂದು ಸುಯೋಗ ನನಗೆ ಲಭಿಸಿತು. ಅಂದಿನಿಂದ ೧೦ ವರ್ಷಗಳ ಕಾಲ ಅವಿಶ್ರಾಂತವಾಗಿ ಕೆಲಸ ಮಾಡುವುದಕ್ಕೆ ಕೇಂದ್ರದಲ್ಲೂ ಸಹ ಅನೇಕ ವಿಶಿಷ್ಟ ಮಂಡಲಿಗಳು ತೆಗೆದುಕೊಂಡು ಹೋಗಿ ರಾಷ್ಟ್ರ ನಾಯಕರಿಗೆ ಈ ಬಗ್ಗೆ ಮನವರಿಕೆ ಮಾಡಿಕೊಳ್ಳುವ ಸುಯೋಗ ನನಗೆ ಲಭಿಸಿತು. ಕರ್ಣಾಟಕ ಏಕೀಕರಣ ೧೭ ವರ್ಷಗಳು ಆದಮೇಲೆ ಹೆಸರಿನ ಬದಲಾವಣೆ ಬಂತು. ಈ ಶುಭ ಮುಹೂರ್ತದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ದೇವರಾಜ್ ಅರಸ್ ರವರಿಂದ ಮಂಡಿಸಲ್ಪಟ್ಟ ನಿರ್ಣಯದಿಂದ ನನ್ನ ಹೃದಯ ತುಂಬಿದೆ. ಈ ದಿವಸ ಅನೇಕ ಮಾನ್ಯ ಸ್ನೇಹಿತರು ಸೊಗಸಾಗಿ ಭಾಷಣ ಮಾಡಿದ್ದಾರೆ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ದೊಡ್ಡ ಸಾಹಿತಿಗಳು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅಂಥ ಸಾಹಿತಿ ನಾನಲ್ಲ, ಆದರೂ ಸಾಮಾನ್ಯ ಜನತೆ ಪ್ರತಿನಿಧಿಯಾಗಿ ನಾನು ಒಂದೆರಡು ಮಾತನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಕರ್ಣಾಟಕ ಎಂಬ ಹೆಸರಿನಲ್ಲಿ ಬಹಳವಾಗಿ ಮಹತ್ಪೂರಿತವಾದ ಅರ್ಥ ಇದೆ. ಇದು ವ್ಯಾಪಕವಾದ ಹೆಸರು. ಕನ್ನಡ ಜನತೆಗೆ ಸ್ಫೂರ್ತಿಯನ್ನು ಕೊಡುವ ಹೆಸರು, ಮೈಸೂರು, ಕರ್ಣಾಟಕದ ಅಂಗ ಆದರೆ ಕೆಲವು ಕಾರಣಗಳಿಂದ ರಾಜಕೀಯ ಜಂಜಾಟದಲ್ಲಿ ಕರ್ಣಾಟಕ ಎಂದು ಹೆಸರು ಇಡುವುದಕ್ಕೆ ಮೀನಮೇಷ ನೋಡುತ್ತಿದ್ದರು. ಕರ್ಣಾಟಕ ಏಕೀಕರಣದಲ್ಲಿ ಶಿಲ್ಪಿ ಎಂದು ಹೇಳಿಸಿಕೊಂಡ ಶ್ರೀಮಾನ್ ನಿಜಲಿಂಗಪ್ಪನವರು, ಹೆಸರು ಇಡತಕ್ಕ ಧೈರ್ಯ ಅವರಿಗೆ ಬರಲಿಲ್ಲ. ಅದೇ ರೀತಿ ಅವರ ಅನುಯಾಯಿಗಳಾದ ಜತ್ತಿಯವರಿಗೆ, ಶ್ರೀಮಾನ್ ಕಂಠಿಯವರಿಗೆ ವೀರೇಂದ್ರಪಾಟೀಲರಿಗೆ ಆಗಲಿ ಧೈರ್ಯ ಬರಲಿಲ್ಲ. ಈ ದಿವಸ ಕಾಂಗ್ರೆಸ್ ಪಕ್ಷದಲ್ಲಿ ನವಚೈತನ್ಯ ತುಂಬಿ ಕಾಂಗ್ರೆಸ್ ಹೊಸ ಹುರುಪು ಹೊಂದಿರುವ ಈ ಸನ್ನಿವೇಶದಲ್ಲಿ ನಮ್ಮ ಮುಖಂಡರಾದ ದೇವರಾಜ್ ಅರಸ್ ಅವರು ತಮ್ಮ ವೈಯಕ್ತಿಕವಾದ ಅಭಿಪ್ರಾಯ ಏನೇ ಇದ್ದರೂ ಸಹ ಜನತೆಯ ಆಶೋತ್ತರವನ್ನು ಮನಗಂಡು ಈ ನಿರ್ಣಯವನ್ನು ಇಟ್ಟಿದ್ದಕ್ಕೆ ಕನ್ನಡ ಜನತೆ, ಸದನದ ಸದಸ್ಯರೆಲ್ಲರೂ ಅವರನ್ನು ಹೃತ್ಪೂರ್ವಕವಾಗಿ ಅಭಿನಂದನೆ ಮಾಡಬೇಕಾಗಿದೆ. ನಾವು ಕರ್ಣಾಟಕ ಮಾತೆ ಎಂದು ಹೇಳುವಾಗ ಕರ್ಣಾಟಕ ಮಾತೆ ಭುವನೇಶ್ವರಿ ಎಂದು ಹೇಳುತ್ತೇವೆ. ಅದೇ ರೀತಿ ಕರ್ಣಾಟಕದ ಮತ್ತು ಈ ಸದನದ ಅಧ್ಯಕ್ಷಣಿಯವರಾಗಿ ಮಹಿಳೆ ಹಿಂದೆಂದೂ ಅಧ್ಯಕ್ಷಣಿಯಾಗಿರಲಿಲ್ಲ ವಿಧಾನಸಭೆ ಅಧ್ಯಕ್ಷಣಿಯರಾದ ಶ್ರೀಮತಿ ನಾಗರತ್ನಮ್ಮನವರಿಂದ ಶೋಭಾಯಮಾನವಾಗಿ ಕರ್ಣಾಟಕ ಭುವನೇಶ್ವರಿ ಯೋಪಾದಿಯಲ್ಲಿರುವಂತಹ ಕಾಲದಲ್ಲಿ ಈ ಹೆಸರು ಬರುವ ಕೀರ್ತಿ ಬಂದಿದೆ ಎಂದು ನಮಗೆ ಹೆಮ್ಮೆ ಉಂಟು ಮಾಡಿದೆ. ಆದುದರಿಂದ ಇದು ಎಲ್ಲಾ ಕನ್ನಡಿಗರಿಗೆ ಹೆಮ್ಮೆಯನ್ನು ಸಮಾಧಾನವನ್ನು ತರತಕ್ಕ ಸಂಗತಿಯಾಗಿದೆ ಈ ಮಾತನ್ನು ಹೇಳುವಾಗ ಕನ್ನಡಿಗರಿಗೆ ಅಷ್ಟೇ ಸೀಮಿತವಾಗಬಾರದು. ನಮ್ಮ ರಾಜ್ಯದಲ್ಲಿ ಇರತಕ್ಕ ತಮಿಳರು ತೆಲುಗರು, ಮತ್ತು ಮರಾಠಿ ಮಾತನಾಡತಕ್ಕ ಜನರು ಇದ್ದಾರೆ, ಅವರ ಬಗ್ಗೆ ಸಹಾನುಭೂತಿ ಇರಬೇಕು, ಅವರ ವಿಚಾರದಲ್ಲಿ ವಿಶಾಲ ಹೃದಯದಿಂದ ಅವರ ಬೇಡಿಕೆ ಏನು ಇವೆ ಅವರ ಆಶೆಗಳು ಏನು ಇವೆ ಅವನ್ನು ಪೂರೈಸುವುದಕ್ಕೆ ಪ್ರಯತ್ನ ಪಟ್ಟರೆ ಕರ್ಣಾಟಕ ಎಂದು ಹೆಸರನ್ನು ಇಟ್ಟಿದ್ದಕ್ಕೆ ಸಾರ್ಥಕವಾಗುತ್ತದೆ ಎಂದು ಭಾವಿಸಿದ್ದೇನೆ. ಫಜಲಾಲಿ ಕಮಿಷನ್‌ನವರು (ಸ್ಟೇಟ್ ರೀ ಆರ್ಗನೈಸೇಷನ್ ಕಮಿಟಿಯವರು ಕೂಡ) ಕರ್ನಾಟಕ ಎಂದು ಹೆಸರು ಇಡಬೇಕೆಂದು ಹೇಳಿದ್ದರೂ ಕಾರಣಾಂತರದಿಂದ ಆ ಕಾಲದಲ್ಲಿ ಹಳೇ ಮೈಸೂರಿನಲ್ಲಿ ಇದಕ್ಕೆ ಹೆಚ್ಚು ಜನ ಬೆಂಬಲ ಕೊಡದೆ ಇದ್ದುದರಿಂದ ಅವರ ಮನಸ್ಸನ್ನು ನೋಯಿಸಬಾರದು ಎಂದು ಮೈಸೂರು ಎಂಬ ಹೆಸರನ್ನೇ ಇಟ್ಟುಕೊಂಡು ಕಾಲಾವಕಾಶ ದೊರೆತಾಗ ಕರ್ಣಾಟಕ ಎಂದು ಬದಲಾವಣೆ ಮಾಡಬೇಕು ಎಂದು ಆಗ ಸದ್ಯಕ್ಕೆ ಮೈಸೂರು ಎಂದು ಮುಂದುವರಿಸಿಕೊಂಡು ಬಂದರು. ಈಗ ಒಳ್ಳೆಯ ಸನ್ನಿವೇಶ ಬಂದಿದೆ. ಈಗ ನಾವು ಒಂದು ಸಾಂಸ್ಕೃತಿಕವಾಗಿ ಒಳ್ಳೆಯ ಭಾವೈಕ್ಯತೆಯನ್ನು ಮುಂದುವರಿಸಿಕೊಂಡು ಬರುವುದಕ್ಕೆ ಈ ಹೆಸರು ಹೆಚ್ಚು ಸ್ಫೂರ್ತಿಯನ್ನು ನಮಗೆ ಕೊಡುತ್ತದೆ ಎಂದು ನಾನು ಭಾವನೆ ಮಾಡಿದ್ದೇನೆ. ಮಾನ್ಯ ಸ್ನೇಹಿತರುಗಳು ಮಾತನಾಡಿ ಹಿಂದೆ ಅನೇಕ ಕವಿಗಳು ಅಲ್ಲದೆ ಸುಮಾರು ೬ನೇ ಶತಮಾನದಿಂದ ಈ ಹೆಸರು ರೂಢಿಯಲ್ಲಿ ಇರತಕ್ಕದ್ದು ಕಂಡುಬಂದಿದೆ ಎಂದು ತಿಳಿಸಿದರು. ಅದೇ ರೀತಿಯಲ್ಲಿ ಮೈಸೂರಿನ ಅರಸರು ೧೩೯೯ ಇಸವಿಯಿಂದ ರಾಜ್ಯವನ್ನು ಆಳುತ್ತಾ ಬಂದಿದ್ದಾರೆ. ಅವರು ರತ್ನ ಸಿಂಹಾಸನಾಧೀಶರು ಎಂದು ಕರೆಸಿಕೊಂಡಿದ್ದಾರೆ ಅವರ ರಾಜತ್ವ ಹೋದರೂ ಸಹ ಅವರು ನಮ್ಮ ನಾಡಿಗೆ ಮಾಡಿರುವ ಸೇವೆಯನ್ನು ನಾವು ಮರೆಯುವುದಕ್ಕೆ ಆಗುವುದಿಲ್ಲ. ಇದೇ ರೀತಿ ವಿದ್ಯಾರಣ್ಯರಿಗೆ ವಿಜಯನಗರದ ಸಂಸ್ಥಾಪನಾಚಾರ್ಯ ಕರ್ಣಾಟಕ ಸಂಸ್ಥಾಪನಾಚಾರ್ಯ ಎಂದು ಸಂಬೋಧನೆ ಮಾಡುತ್ತಾರೆ. ಅನೇಕ ಕವಿಗಳು ಅಂದರೆ ಶ್ರೀ ಬಿ.ಎಂ. ಶ್ರೀಕಂಠಯ್ಯನವರು, ದರಾ ಬೇಂದ್ರೆಯವರು, ಆಲೂರ್ ವೆಂಕಟ್‌ರಾಯರು, ರಾಷ್ಟ್ರಕವಿ ಕೆ.ವಿ. ಪುಟ್ಟಪ್ಪನವರು ಮಾಸ್ತಿಯವರು ಕರ್ನಾಟಕವನ್ನು ಹಾಡಿ ಹೊಗಳಿದ್ದಾರೆ. ಕರ್ಣಾಟಕ ಆಗಬೇಕೆಂದು ಅವರ ಆಶೀರ್ವಾದ ಬಲದಿಂದ ಈ ದಿನ ಕರ್ನಾಟಕ ಆಗಬೇಕೆಂದು ಈ ಸಭೆಯ ಮುಂದೆ ನಿಯಮ ಬಂದಿದೆ.

5-00 P. M.

ಎಲ್ಲರ ಹೃದಯದಲ್ಲೂ ಕರ್ನಾಟಕವಾಗಬೇಕೆಂದು ಇದೆ, ಕರ್ನಾಟಕವಾಗಬೇಕೆಂದು ಹೇಳಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಭಾಷಾವಾರು ಪ್ರಾಂತಗಳಾಗಬೇಕೆಂದು ೧೯೨೧ನೇ ಇಸವಿಯಲ್ಲಿ ನಾಗಪುರದಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನದಲ್ಲಿ ಎಲ್ಲರೂ ಒಪ್ಪಿದ್ದರು ಮತ್ತು ಮಹಾತ್ಮಾ ಗಾಂಧಿಯವರೂ ಕೂಡ ಕರ್ನಾಟಕವು ಪ್ರತ್ಯೇಕ ಪ್ರಾಂತವಾಗಬೇಕೆಂದು ಆಶಿಸಿದ್ದರು. ಹಾಗೆ ಭಾಷಾವಾರು ಪ್ರಾಂತಗಳಾದ ಮೇಲೆ ಆಯಾ ಭಾಷಾವಾರು ರಾಜ್ಯಗಳವರು ಆಯಾ ಭಾಷಾ ಪ್ರಾಂತಗಳ ಹೆಸರನ್ನು ಇಟ್ಟುಕೊಂಡರು. ಇದರಂತೆ ಮರಾಠಿ ಆಡುವ ಜನರು ಮಹಾರಾಷ್ಟ್ರ ಎಂದು ಮಾಡಿಕೊಂಡರು; ತೆಲುಗು ಮಾತನಾಡುವ ಜನರು ಆಂಧ್ರ ಪ್ರದೇಶ ಎಂದು ಕರೆದರು, ತಮಿಳು ಮಾತಾಡುವ ಜನ ತಮಿಳುನಾಡು ಎಂದು ಕರೆದರು. ಅದೇ ರೀತಿ ನಮ್ಮ ರಾಜ್ಯಕ್ಕೆ ಆಗ ಮೈಸೂರು ಎಂದು ಆಯಿತು. ಆದರೆ ಹಿಂದೆ ಒಂದು ಕಾಲದಲ್ಲಿ ಮೈಸೂರು ಎಂದು ಹೆಸರಿಟ್ಟಿದ್ದರೂ ಇಂದು ಅದರ ಚಾರಿತ್ರಿಕ ಹಿನ್ನೆಲೆಗಳಿಗೆ ಅನುಸಾರವಾಗಿ ಇಂದು ಕರ್ನಾಟಕ ಎಂದು ಹೆಸರು ಇಡಬೇಕೆಂದು ಒಮ್ಮತದಿಂದ ತಂದಿರುವುದು ಒಂದು ಶುಭ ಸೂಚಕ ಚಿಹ್ನೆ. ಇಂದು ನಮ್ಮ ಕನ್ನಡಿಗರೆಲ್ಲಾ ಒಗ್ಗಟ್ಟಾಗಿ ಶ್ರಮ ವಹಿಸಿ ಇಂತಹ ಒಂದು ನಿರ್ಣಯ ತರಲು ಅವಕಾಶ ಮಾಡಿದ್ದಾರೆ. ಇದು ನಮಗೆ ಸ್ಫೂರ್ತಿದಾಯಕವಾಗಿದೆ. ಇಂದು ನಮ್ಮ ಕನ್ನಡಿಗರು ಎಲ್ಲ ಕಡೆಗಳಲ್ಲೂ ಪ್ರಾಮುಖ್ಯ ಸ್ಥಾನದಲ್ಲಿ ಇರುವಂತೆ ಮಾಡಬೇಕು, ಪ್ಲಾನಿಂಗು ಕಮಿಷನ್ನಿನಲ್ಲಿ ನಮ್ಮ ಕನ್ನಡಿಗರು ಇರಬೇಕು. ರಾಜ್ಯದ ಪ್ರತಿನಿಧಿಯಾಗಿ ಕೇಂದ್ರದ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಈಗ ಕನ್ನಡಿಗರು ಯಾರು ಇಲ್ಲ. ಮುಂದೆಯಾದರೂ ಅಲ್ಲಿ ಕನ್ನಡಿಗರು ಇರಲು ಸಹಾಯ ಮಾಡಬೇಕು. ಒಮ್ಮತದಿಂದ ಇಂದು ಇಲ್ಲಿ ತಂದಿರುವ ಕರ್ನಾಟಕ ಎನ್ನುವ ನಿರ್ಣಯವನ್ನು ತರಲು ನಮ್ಮೆಲ್ಲರ ಬೆಂಬಲವೂ ಇದೆ, ಮತ್ತು ಇದಕ್ಕಾಗಿ ನಾವು ಸ್ವಾಗತ ಮಾಡುತ್ತೇವೆ. ಇದರಿಂದ ರಾಜ್ಯದ ಸರ್ವತೋಮುಖವಾದ ಅಭಿವೃದ್ಧಿಯಾಗಲೂ, ಮತ್ತು ನಮ್ಮ ರಾಜ್ಯ ಇನ್ನೂ ಹೆಚ್ಚು ದಷ್ಟಪುಷ್ಟವಾಗಿ ಬೆಳೆಯಲು ನಮಗೆ ಇನ್ನೂ ಹೆಚ್ಚು ಶಕ್ತಿ ಕೊಡಲಿ ಎಂದು ಹಾರೈಸುತ್ತೇನೆ. ಇಂತಹ ಒಂದು ಹೆಸರನ್ನಿಡಲು ನಮ್ಮ ರಾಜ್ಯದ ಸಾಹಿತಿಗಳು ಹಾಗೂ ಕನ್ನಡಿಗ ರೆಲ್ಲರೂ ಬಹುವಾಗಿ ಶ್ರಮಪಡುತ್ತಿದ್ದರು ಮತ್ತು ಇಂತಹ ಒಂದು ನಿರ್ಣಯ ಬರಲು ನಮ್ಮ ಪತ್ರಿಕರ್ತರು ಬಹುವಾಗಿ ಸಹಾಯ ಮಾಡಿದ್ದಾರೆ. ಸುಮಾರು ಎರಡು ಮೂರು ತಿಂಗಳಿನಿಂದಲೂ ಪತ್ರಿಕಾ ಕರ್ತರು ಈ ಹೆಸರಿನ ಬಗ್ಗೆ ಪ್ರಕಟಣೆಗಳನ್ನು ಕೊಟ್ಟು ಹೆಚ್ಚಿನ ಹೊಣೆ ಹೊತ್ತು ಸಹಾಯಮಾಡಿದುದಕ್ಕಾಗಿ ಅವರೆಲ್ಲರೂ ಅಭಿನಂದನಾರ್ಹರಾಗಿದ್ದಾರೆ. ಅದೇ ರೀತಿ ನಮ್ಮ ಈ ಸದನದ ಎಲ್ಲ ಸದಸ್ಯರೂ ಒಮ್ಮತದಿಂದ ಇಂತಹ ಹೆಸರು ತರಬೇಕೆಂದು ಆಶಿಸಿದ್ದಂತೆ ನಮ್ಮ ಮುಖ್ಯ ಮಂತ್ರಿಗಳು ಇಂತಹ ಒಂದು ನಿರ್ಣಯವನ್ನು ತಂದುದಕ್ಕಾಗಿ ನಾವೆಲ್ಲರೂ ಅವರನ್ನು ಅಭಿನಂದಿಸುತ್ತೇವೆ. ಮಾನ್ಯ ಅಧ್ಯಕ್ಷಿಣಿಯರು ಇಷ್ಟು ಮಾತನ್ನು ಹೇಳಲು ಅವಕಾಶ ಮಾಡಿಕೊಟ್ಟುದಕ್ಕಾಗಿ ಅವರನ್ನೂ ಅಭಿನಂದಿಸಿ ನನ್ನ ನಾಲ್ಕು ಮಾತುಗಳನ್ನು ಪೂರೈಸುತ್ತೇನೆ.

‡ ಶ್ರೀ ಡಿ ಪೂಸಲಿಂಗಂ (ಭಾರತೀನಗರ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ದಿನ ಸುವರ್ಣ ದಿನ. ನಾನು ಡಿ.ಎಂ.ಕೆ. ಪಕ್ಷಕ್ಕೆ ಸೇರಿದವನಾಗಿದ್ದರೂ ನನ್ನ ಮಾತೃ ಭಾಷೆ ತಮಿಳು. ನನಗೆ ಕನ್ನಡದಲ್ಲಿ ಸ್ಪಷ್ಟವಾಗಿ ಮಾತನಾಡಲು ಬರುವುದಿಲ್ಲ. ಆದರೂ ಇಂತಹ ಒಂದು ಶುಭ ದಿನ ಒಂದೆರಡು ಮಾತುಗಳನ್ನು ಕನ್ನಡದಲ್ಲೇ ಹೇಳಬಯಸುತ್ತೇನೆ. ೧೯೫೮ನೇ ಇಸವಿಯಲ್ಲಿ ಸುಭಾಷ ನಗರದ ಮೈದಾನದಲ್ಲಿ ಶ್ರೀ ಅಣ್ಣಾದೊರೈ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದ ದ್ರಾವಿಡ ಮುನ್ನೇತ್ರಕಳಗಂ ಸಮ್ಮೇಳನ ನಡೆದಾಗ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರು ಇಡಬೇಕೆಂದು ಒಂದು ತೀರ್ಮಾನ ಮಾಡಿದ್ದೆವು ಅಂತಹ ಒಂದು ತೀರ್ಮಾನ ಇಂದು ಕಾರ್ಯರೂಪಕ್ಕೆ ಬಂದಿರುವುದಕ್ಕಾಗಿ ನಾವು ಬಹಳ ಸಂತೋಷ ಪಡುತ್ತೇವೆ, ಈ ಸಮಯದಲ್ಲಿ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ಇಂತಹ ಒಂದು ಹೆಸರನ್ನಿಡುವುದಕ್ಕೆ ನಮ್ಮ ಅನೇಕ ಸಾಹಿತಿಗಳು ಎಂದರೆ ಶ್ರೀ ಅ. ನ. ಕೃ., ಶ್ರೀ ಟಿ. ಪಿ. ಕೈಲಾಸಂ, ಶ್ರೀ ರಾಮಮೂರ್ತಿ, ಶ್ರೀ ಗೋವಿಂದರಾಜು ಇವರು ಕಾರಣರು, ಇವರಲ್ಲದೆ ಅನೇಕ ಕವಿಗಳು ಎಂದರೆ ಕುವೆಂಪು ತ. ರಾ. ಸು., ಡಿ. ವಿ ಗುಂಡಪ್ಪ ಇವರೆಲ್ಲರೂ ಕರ್ನಾಟಕ ಎಂಬ ಹೆಸರು ಇರಬೇಕೆಂದು ಒತ್ತಿ ಹೇಳುತ್ತ ಬರುತ್ತಿದ್ದರು ಇಂದು ಕರ್ನಾಟಕ ರಾಜ್ಯವಾಗಿರುವ ಸಮಯದಲ್ಲಿ ನಮ್ಮ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಡುವಂತಹ ಒಂದು ನಿರ್ಣಯ ತಂದುದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ನನ್ನ ಅಭಿನಂದನೆಗಳು ಮತ್ತು ಮಾನ್ಯ ಅಧ್ಯಕ್ಷರಿಗೂ ನನ್ನ ಗೌರವವನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

‡ ಶ್ರೀ ಸಂಭಾಷ್ ಅಸ್ಕೂರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ನನಗೂ ಕೂಡ ಕನ್ನಡದಲ್ಲಿ ಅಷ್ಟೇನೂ ಸರಿಯಾಗಿ ಮಾತನಾಡಲು ಬಾರದಿದ್ದರೂ ಇಂತಹ ಒಂದು ಶುಭ ದಿನದಲ್ಲಿ ಇಲ್ಲಿ ನಾನು ಕನ್ನಡದಲ್ಲೇ ಮಾತನಾಡಬೇಕೆಂದು ಇಚ್ಛಿಸುತ್ತೇನೆ. ನಿಜವಾಗಿಯೂ ಈ ದಿನ ನಮ್ಮ ಮೈಸೂರು ಸ್ಟೇಟಿನ ಒಂದು ಇತಿಹಾಸದಲ್ಲಿ ಒಂದು ಒಳ್ಳೆಯ ಸುವರ್ಣ ದಿನ ಎಂದು ಕರೆದರೆ ಬಹುಶಃ ಅದು ತಪ್ಪಾಗುವುದಿಲ್ಲ ದಿವಂಗತ ಶ್ರೀಮಾನ್ ದೊಡ್ಡಮೇಟಿಯವರು ಹಾಗೂ ದಿವಂಗತ ಶ್ರೀ ಗೋಪಾಲಗೌಡರು ಇನ್ನೂ ಅನೇಕ ಹಿರಿಯರು ಇಂತಹ ಒಂದು ಹೆಸರನ್ನು ತರಬೇಕೆಂದು ಪ್ರಯತ್ನ ಮಾಡುತ್ತಿದ್ದರು, ಇವರನ್ನೆಲ್ಲಾ ನಾವು ಸ್ಮರಿಸುವುದು ನ್ಯಾಯವಾಗಿದೆ. ಇದೊಂದು ಮಹತ್ವವಾದ ಪ್ರಶ್ನೆ ಎಂದು ನಾನು ಭಾವಿಸುತ್ತೇನೆ. ಇದೂ ಅಲ್ಲದೆ ಇವೊತ್ತಿನ ನಮ್ಮ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಮಾಡಿದಂತಹ ನಮ್ಮ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸಿ ನನ್ನ ಹಾರ್ದಿಕವಾದ ಅಭಿನಂದನೆಗಳನ್ನು ಅವರಿಗೆ ಸಲ್ಲಿಸುತ್ತೇನೆ. ಯಾವುದೇ ದೇಶದ ಹೆಸರು ಯಾವುದೇ ಇದ್ದರೂ ಕೂಡ ಅಷ್ಟೇನೂ ವ್ಯತ್ಯಾಸ ಬರುವುದಿಲ್ಲ ಎನ್ನುವುದನ್ನು ನಾನು ಒಪ್ಪಿದರೂ ಕೂಡ ಈಗ ಇಂತಹ ಒಂದು ಹೆಸರನ್ನು ತರುವುದರಿಂದ ಹಾನಿಯೇನೂ ಆಗುವುದಿಲ್ಲ. ಒಂದು ಹೆಸರು ಕಾಂಪ್ರೆಹೆನ್ಸಿವ್ ಆಗಿ ಅನಲೆಟಿಕ್ ಆಗಿರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಈ ಮೈಸೂರು ದೇಶ ೧೯೫೬ರ ಅನಂತರ ಹರಿದು ಹಂಚಿ ಹೋಗಿದ್ದ ಕನ್ನಡ ಪ್ರಾಂತಗಳನ್ನೆಲ್ಲಾ ಕೂಡಿಸಿ ವಿಶಾಲ ಮೈಸೂರು ರಾಜ್ಯ ಎಂದು ಸ್ಥಾಪನೆಯಾದ ನಂತರ ಈ ನಮ್ಮ ಸ್ಟೇಟ್‌ಗೆ ಮೈಸೂರು ಎನ್ನತಕ್ಕ ಹೆಸರೇ ಇದ್ದರೂ ಇಂದು ಎಮೋಷನಲ್ ಇಂಟೆಗ್ರೇಷನ್ ಆಗಬೇಕು ಎಂದು ಹೇಳಿ ಇಂತಹ ಕರ್ನಾಟಕ ಎನ್ನುವ ಒಂದು ಹೆಸರನ್ನು ತರಬೇಕೆಂದು ನಮ್ಮ ಸದಸ್ಯರೆಲ್ಲರೂ ಒಪ್ಪಿ ಇಲ್ಲಿ ತಂದಿದ್ದಾರೆ. ಇದಕ್ಕಾಗಿ ನಮ್ಮ ಮುಖ್ಯ ಮಂತ್ರಿಗಳು ಅಭಿನಂದನಾರ್ಹರು. ಹಿಂದೆ ಇದ್ದ ಮುಖ್ಯ ಮಂತ್ರಿಗಳ ಕಾಲದಲ್ಲಿ ಆಗದೇ ಇದ್ದ ಹೆಸರಿನ ಬದಲಾವಣೆ ಇಂದು ನಮ್ಮ ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಬದಲಾವಣೆ ಮಾಡುವಂತಹ ನಿರ್ಣಯ ತರಲು ಪ್ರಯತ್ನ ಮಾಡಿದ್ದಾರೆ. ಇಂತಹ ಒಂದು ಕರ್ನಾಟಕ ಎನ್ನುವ ಹೆಸರನ್ನು ತಂದುದಕ್ಕಾಗಿ ನಮ್ಮ ರಾಜ್ಯಕ್ಕೂ ಒಂದು ಗೌರವ ಬಂದಿದೆ. ಇಷ್ಟು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಒಂದು ಕಾಲದಲ್ಲಿ ಹೆಸರಿನ ಬದಲಾವಣೆ ಬಗ್ಗೆ ವಿರೋಧ ಮಾಡಿದವರಲ್ಲಿ ನಾನೂ ಒಬ್ಬ ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಕಾಲಚಕ್ರ ಬದಲಾವಣೆಯಾಗಿದೆ ಎಂದು ಹೇಳಿದ ಹಾಗೆ ನಾನು ಕೂಡ ಬದಲಾವಣೆಯಾಗಬೇಕಾದ ಸನ್ನಿವೇಶ ಒದಗಿದೆ ಎಂದು ಹೇಳುತ್ತೇನೆ. ಕಾರಣ ಇಷ್ಟೇ, ಈ ರಾಜ್ಯದ ಹೆಸರಿನ ಬದಲಾವಣೆಗಿಂತ ಆಡಳಿತದ ಕೆಲಸಗಾರರ ಮನಸ್ಸು ಬದಲಾವಣೆಯಾಗದೆ ಇಂತಹ ಒಂದು ಹೆಸರನ್ನು ಕರ್ನಾಟಕ ಎಂದು ಬದಲಾವಣೆ ಮಾಡಬೇಕಾದ ಅಗತ್ಯವೇನಿತ್ತು ಎಂದು ಕೇಳಬೇಕಾಗಿದೆ. ನಮ್ಮ ರಾಜ್ಯಕ್ಕೆ ಈಗ ಅನೇಕ ಭಾಗಗಳಿಂದ ಎಂದರೆ ಬೊಂಬಾಯಿ ಭಾಗದಿಂದ, ಮದ್ರಾಸು ಭಾಗದಿಂದ ಹಾಗೂ ಬೇರೆ ಕಡೆಗಳಿಂದ ಕೆಲವು ಭಾಗಗಳು ಬಂದು ಸೇರಿದಾಗ ಆಗಿನ ವಾತಾವರಣ ಹಿತಕರವಾಗಿರಲಿಲ್ಲ. ಮೊದಲು ಇದಕ್ಕೆ ಬಲಿಯಾದವರು ಶ್ರೀಮಾನ್ ಹನುಮಂತಯ್ಯನವರು, ಇದಾದ ಮೇಲೆ ಅನೇಕ ಹಳೆಯ ಮೈಸೂರಿನ ಸರಕಾರಿ ನೌಕರರು ಬಹಳ ನೊಂದು ಹೋದರು ಮತ್ತು ಇಂದೂ ಕೂಡ ಅವರು ಸಂಕಟಪಡುತ್ತಿದ್ದಾರೆ, ಇಂತಹ ವಿಶಾಲ ಕರ್ನಾಟಕ ಏಕೆ ಆಯಿತು ಎಂದು ಇದುವರೆಗೆ ನೊಂದ ಅಧಿಕಾರಿಗಳು ಹೈ ಕೋರ್ಟಿಗೆ ಹೋಗಿ ರಿಟ್‌ಗಳನ್ನು ಹಾಕಿದ್ದಾರೆ. ಇದರಿಂದ ಹಳೇ ಮೈಸೂರು ರಾಜ್ಯದ ನೌಕರರಿಗೆ ಧಕ್ಕೆಯಾಗುವಂತೆ ಮಾಡಿರುವುದು ತುಂಬಾ ವಿಷಾದದ ಸಂಗತಿ. ಅದರ ಜೊತೆಗೆ ಈ ಆಡಳಿತವನ್ನು ಕೆಲವರು ಸ್ವಂತದ ಆಸ್ತಿ (ಮಾಡಿಕೊಂಡು) ತಮ್ಮದೇ ಆದ ರೀತಿಯಲ್ಲಿ ಆಡಳಿತವನ್ನು ನಡೆಸುತ್ತಿದ್ದಾಗಿಂದ, ಈ ಆಡಳಿತವನ್ನು ತೊಲಗಿಸಬೇಕೆಂಬ ದೃಷ್ಟಿಯಿಂದ, ತಮ್ಮ ಮನಸ್ಸಿನಲ್ಲಿ ಇದ್ದಿದ್ದನ್ನು ಹೊರಗೆ ವ್ಯಕ್ತಪಡಿಸಿ, ಹೆಸರಿನ ಬದಲಾವಣೆಗೆ ಅಡಚಣೆ ಮಾಡುತ್ತಿದ್ದರು. ಈಗ ವಾತಾವರಣ ಬದಲಾವಣೆಯಾಗಿದೆ. ಇಡೀ ಕರ್ನಾಟಕ ದೇಶ ಒಂದೇ ಎಂಬ ಮನೋಭಾವ ಕಂಡುಬರುತ್ತಿದೆ ಹಿಂದೆ ಆಂಧ್ರ ರಾಜ್ಯದಲ್ಲಿ ತೆಲಂಗಾಣದವರು ತಮಗೆ ಪ್ರತ್ಯೇಕ ರಾಜ್ಯ ಬೇಕೆಂದು ಹೋರಾಟ ಮಾಡುತ್ತಿದ್ದಾಗ, ಮೈಸೂರು ರಾಜ್ಯದಲ್ಲಿಯೂ ಸಹ ಅದೇ ರೀತಿ ಹೋರಾಟ ಮಾಡಬೇಕೆಂಬ ಕೂಗು ಇತ್ತು, ಆದರೆ ಅಂದಿನ ಕಹಿ ವಾತಾವರಣ ಇಂದು ಇಲ್ಲವಾಗಿದೆ. ಆದ್ದರಿಂದ ನಾವುಗಳು ಇಂದು ನಾವು ಬೇರೆ, ನೀವು ಬೇರೆ, ಬೇರೆ ಹೆಸರು ಬೇಡ ಎಂದು ವಾದ ಮಾಡುವುದು ಇಂದಿನ ಪರಿಸ್ಥಿತಿಗೆ ಸರಿಯಾದುದು ಅಲ್ಲ, ನ್ಯಾಯವಾದುದು ಅಲ್ಲ, ನಾನೂ ಕೂಡ ನನ್ನ ಮನಸ್ಸನ್ನು ಇಂದಿನ ಪರಿಸ್ಥಿತಿಗೆ ಬದಲಾವಣೆ ಮಾಡಿಕೊಂಡು ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಡುವುದಕ್ಕೆ ಬೆಂಬಲ ಕೊಡುತ್ತಿದ್ದೇನೆ. ಇನ್ನು ಮುಂದೆಯಾದರೂ ಸಹ ನಾನಾ ಭಾಗಗಳಲ್ಲಿರುವ ವ್ಯತ್ಯಾಸಗಳು, ತಾರತಮ್ಯಗಳು ಹೋಗಬೇಕು. ನಾವೆಲ್ಲರೂ ಕನ್ನಡಿಗರಾದ್ದರಿಂದ, ಎಲ್ಲರಿಗೂ ಸರಿಸಮವಾದ ಹಕ್ಕುಗಳು ಇದೆ ಎಂಬುದನ್ನು ತೋರಿಸಿಕೊಡಬೇಕು. ಆ ರೀತಿ ಏನಾದರು ತಾರತಮ್ಯವನ್ನು ಮತ್ತೆ ತೋರಿಸಿದ್ದೇ ಆದರೆ ಕಹಿ ವಾತಾವರಣ ಬರುತ್ತದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದೆ ಎಲ್ಲರೂ ಸುಖವಾಗಿರುವ ರೀತಿಯಲ್ಲಿ, ಎಲ್ಲರೂ ಕನ್ನಡಿಗರಾಗಿ ಹೆಮ್ಮೆ ಪಡುವ ರೀತಿಯಲ್ಲಿ ಸರ್ವ

ರೀತಿಯ ಸೌಲಭ್ಯಗಳನ್ನು ಒದಗಿಸಲಿ ಎಂದು ಹೇಳಿ. ಹೊಸ ಹೆಸರನ್ನು ರಾಜ್ಯಕ್ಕೆ ಇಟ್ಟಿರುವುದರಿಂದ
ಭಗವಂತನು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಪ್ರಾರ್ಥಿಸಿ, ನನಗೆ ಮಾತನಾಡಲು ಅವಕಾಶ
ಕೊಟ್ಟಂತಹ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷಣಿಯವರೇ, ಇವೊತ್ತಿನ ದಿವಸ
ಕರ್ನಾಟಕ ಇತಿಹಾಸದಲ್ಲಿ ಒಂದು ಮಂಗಳ ದಿವಸ ಇಂದು ಮಂಗಳವಾರ ದಿನ ಆಗಿರುವುದು ಸಹ ಒಂದು
ಶುಭದಿನ. ತಂದೆತಾಯಿಗಳಿಗೆ ಮೊದಲ ಪುತ್ರ ಹುಟ್ಟಿದಾಗ, ಆ ಮಗುವಿಗೆ ನಾಮಕರಣ ಮಾಡಲು ತಂದೆ
ಒಂದು ಹೆಸರು ಇಟ್ಟರೆ ತಾಯಿ ಒಂದು ಹೆಸರು ಅಜ್ಜಿ ಒಂದು ಹೆಸರು, ಸೋದರತ್ತೆ ಒಂದು ಹೆಸರು,
ಸೋದರಮಾವ ಒಂದು ಹೆಸರು, ಹೀಗೆ ಒಬ್ಬೊಬ್ಬರು ಒಂದೊಂದು ಹೆಸರನ್ನು ಇಡುತ್ತಾರೆ. ಯಾವ ಹೆಸ
ರಿಟ್ಟರೆ ಒಳ್ಳೆಯದು ಎಂಬ ಬಗ್ಗೆ ವಾದವಿವಾದ ನಡೆದುಸರ್ವರಿಗೂಸರ್ವಸಮ್ಮತವಾದಂಥ ಹೆಸರನ್ನು ಯಾವ
ರೀತಿ ಇಡುತ್ತಾರೋ ಆ ರೀತಿ ಇವೊತ್ತಿನ ದಿವಸ ನಮ್ಮ ರಾಜ್ಯಕ್ಕೆ ಹೆಸರಿಡುವ ಬಗ್ಗೆ ಮೈಸೂರಿನವರು
ಮೈಸೂರು ಇರಲಿ ಎಂದು ಹೇಳಿದರು, ಮತ್ತೊಬ್ಬರು ಕನ್ನಡನಾಡು ಇರಲಿ ಎಂದರು, ಇನ್ನೊಬ್ಬರು
ಮೈಸೂರು ಕರ್ನಾಟಕ ಇರಲಿ ಎಂದು ಹೇಳಿದರು, ಕೊನೆಗೆ ಎಲ್ಲರೂ ಸೇರಿ ಕರ್ನಾಟಕ ಎಂಬ ಹೆಸರು ಇಟ್ಟರೆ
ಒಳ್ಳೆಯದು ಎಂದು ನಿರ್ದಿಷ್ಟವಾದಂಥ ತೀರ್ಮಾನಕ್ಕೆ ಬಂದು ನಮ್ಮ ರಾಜ್ಯದ ಮುಖ್ಯಮಂತ್ರಿಯಾದ
ಶ್ರೀಮಾನ್ ದೇವರಾಜ ಅರಸ್ ಅವರು 'ಕರ್ನಾಟಕ' ಎಂಬ ಹೆಸರಿನ ನಿರ್ಣಯವನ್ನು ನಮ್ಮ ಮುಂದೆ
ಮಂಡಿಸಿದ್ದಾರೆ. ಅಂತಹ ಒಂದು ತೀರ್ಮಾನಕ್ಕೆ ಇವೊತ್ತಿನ ದಿವಸ ಶ್ರೀ ಮಾನ್ ದೇವರಾಜ ಅರಸ್ ಅವರು
ಅಷ್ಟೇ ಅಲ್ಲ, ಈ ಸದನದ ಪ್ರತಿಯೊಬ್ಬ ಸದಸ್ಯರೂ ಅದಕ್ಕೆ ಬೆಂಬಲಿಗರಾಗಿ ನಿಂತಿದ್ದಾರೆ. ಇದು ಬಹಳ
ಒಳ್ಳೆಯದು. ಈ ಮೊದಲೇ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಆಗಬೇಕಾಗಿದ್ದು ಕೆಲವೊಂದು
ಕಾರಣಗಳಿಂದ ಆಗಲಿಲ್ಲ. ಇದುವರೆಗೆ ಆಗದಿದ್ದಕ್ಕೆ ನಿಜವಾಗಿಯೂ ಒಂದು ವಿಧಿಯ ಸಂಕಲ್ಪ ಇತ್ತೋ,
ಏನೋ, ಅಂದರೆ ಮೈಸೂರು ಜಿಲ್ಲೆಯವರೇ ಅಧ್ಯಕ್ಷರಾಗಿದ್ದಾಗ, ಮೈಸೂರು ಜಿಲ್ಲೆಯವರೇ ಮುಖ್ಯಮಂತ್ರಿ
ಗಳಾಗಿರುವಾಗ ಅವರ ಬಾಯಿಂದಲೇ ಈ ನಿರ್ಣಯ ಬರಬೇಕು, ಅವರ ಕೈಯಿಂದಲೇ ಆಗಬೇಕು ಎಂದು
ವಿಧಿಯ ಸಂಕಲ್ಪ ಇತ್ತೊ ಏನೋ, ಅದರಂತೆ ಮೈಸೂರು ಅರಸು ಮನೆತಕ್ಕೆ ಸೇರಿದ, ಯದುಕುಲವಂಶಕ್ಕೆ
ಸೇರಿದ ಮುಖ್ಯಮಂತ್ರಿಗಳಾದ ಶ್ರೀ ಮಾನ್ ಡಿ. ದೇವರಾಜ ಅರಸ್ ಅವರ ಮುಖಾಂತರವೇ ಈ ನಿರ್ಣಯ
ಸಭೆಯ ಮುಂದೆ ಬಂದಿರುವುದರಿಂದ, ಅದಕ್ಕೆ ಬಹಳ ಮಹತ್ವ ಇದೆ. ಇಂಥಾದಕ್ಕೆ ಸಂಪೂರ್ಣವಾದ ಬೆಂಬಲ
ಕೊಡುವುದು ನಮ್ಮ ಕರ್ತವ್ಯ. ನಿಜವಾಗಿಯೂ ಇವೊತ್ತಿನ ದಿವಸವನ್ನು ಇತಿಹಾಸದಲ್ಲಿ ಬರೆದಿಡುವಂತಹ
ದಿವಸವಾಗಿದೆ. ಈ ಕರ್ನಾಟಕ ರಾಜ್ಯಕ್ಕೆ ಅನೇಕ ತರಹದ ಹಿನ್ನೆಲೆ ಇದೆ. ಯಾವುದೋ ಒಂದು ಕಾಲದಲ್ಲಿ
ಕರ್ನಾಟಕ ಸಿಂಹಾಸನದ ಒಂದೇ ಆಗಿತ್ತು. ಆದರೆ ಹೊರಗಿನ ಯಾರೋ ಕೆಲವು ರಾಜರು ಬಂದು ಈ ರಾಜ್ಯ
ವನ್ನು ಒಡೆದಿದ್ದರಿಂದ, ಕರ್ನಾಟಕ ರಾಜ್ಯ ೫ ಭಾಗಗಳಾಗಿ ಒಡೆದು ಅನೇಕ ರಾಜರುಗಳ ಕೈಯಲ್ಲಿ ನಮ್ಮ
ಕನ್ನಡಿಗರು ಸಿಕ್ಕಿಕೊಂಡರು. ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಮದ್ರಾಸ್ ಕರ್ನಾಟಕ,
ಕೂರ್ಗ್ ಕರ್ನಾಟಕ, ಈ ರೀತಿ ಹರಿದು ಹಂಚಿ ಹೋಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಈ ಎಲ್ಲ ಕನ್ನಡ ಭಾಗ
ಗಳು ಒಂದಾಗಬೇಕು ಎಂದು ಚಳುವಳಿ ಸಹ ನಡೆಯಿತು. ಆ ರೀತಿ ಚಳುವಳಿ ಮಾಡುವ ಕಾಲಕ್ಕೆ ಭಾಷಾ
ವಾರು ಪ್ರಾಂತ್ಯ ರಚನೆಯಾಗಬೇಕೆಂದು ಆಗಿನ ಕಾನ್‌ಸ್ಟಿಟ್ಯೂಟ್ ಅಸೆಂಬ್ಲಿಯಲ್ಲಿಯೂ ಸಹ ಪ್ರಸ್ತಾಪವಾಗಿ
ಅದಕ್ಕೆ ಬೆಂಬಲ ಸಿಕ್ಕಿತು, ಪಂಡಿತ ನೆಹರೂ ಅವರು ಸಹ ಅದಕ್ಕೆ ಬೆಂಬಲ ಕೊಟ್ಟರು, ಅದರಂತೆ ೧೯೫೬ನೇ
ಇಸವಿಯಲ್ಲಿ ಗುಜರಾತ್, ಆಂಧ್ರ, ಮದ್ರಾಸ್, ಮತ್ತು ವಿಶಾಲ ಮೈಸೂರು ರಾಜ್ಯಗಳು ಸ್ಥಾಪನೆಯಾದವು,
ಆದರೆ ನಮ್ಮ ರಾಜ್ಯಕ್ಕೆ ನಾಮಕರಣ ಮಾಡುವ ಕಾಲ ಇಲ್ಲಿಯವರೆಗೆ ಬರಲಿಲ್ಲ. ಹೊಸದಾಗಿ ಒಂದು ಮಗು
ಹುಟ್ಟಿದರೆ ಅದಕ್ಕೆ ೯ನೇ ದಿನದಲ್ಲಿ, ೧೫ನೇ ದಿನದಲ್ಲಿ, ಒಂದು ತಿಂಗಳೊಳಗೆ ಹೆಸರು ಇಡುತ್ತಾರೆ. ಆದರೆ
ನಮ್ಮ ರಾಜ್ಯಕ್ಕೆ ೧೬ನೇ ವರ್ಷದಲ್ಲಿ ನಾಮಕರಣ ಮಾಡುತ್ತಿದ್ದೇವೆ. ನಿಜವಾಗಿಯೂ ಇದು ಬಹಳ ಒಳ್ಳೆಯ ಕೆಲಸ
ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದರೂ ಸಹ ನಮ್ಮ ರಾಜ್ಯದಲ್ಲಿ ತಮಿಳರು,
ತೆಲುಗರು, ಗುಜರಾತಿಗಳು, ಈ ರೀತಿ ನಾನಾ ಭಾಷೆಯನ್ನು ಮಾತನಾಡತಕ್ಕಂಥ ಜನರು ಇದ್ದಾರೆ ಅವರಿಗೆ
ನಾವು ಯಾವುದೇ ತರಹದ ಪಕ್ಷಪಾತವನ್ನು ತೋರಿಸದಂತೆ, ಅವರನ್ನೂ ನಮ್ಮವರಂತೆ ನೋಡಿಕೊಳ್ಳಬೇಕು
ಅದೇ ರೀತಿಯಲ್ಲಿ ಬೇರೆ ರಾಜ್ಯಗಳಲ್ಲಿರುವ ಕನ್ನಡಿಗರನ್ನು ಅಲ್ಲಿಯ ಜನರು ತಮ್ಮವರಂತೆ ನೋಡಿಕೊಳ್ಳ
ಬೇಕು, ಅವರ ಹಿತ ಕಾಪಾಡಬೇಕು, ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಟ್ಟ ನಂತರವೂ ಸಹ,
ಕನ್ನಡ ಭಾಷೆಯನ್ನು ಮಾತನಾಡತಕ್ಕಂಥ ಕೆಲವು ಪ್ರದೇಶಗಳು ಬೇರೆ ಬೇರೆ ರಾಜ್ಯಗಳಲ್ಲಿ ಸೇರಿ ಹೋಗಿವೆ,
ಅವುಗಳನ್ನು ಮತ್ತೆ ಮರಳಿ ಪಡೆಯಬೇಕಾಗಿದೆ, ಇವೊತ್ತಿನ ದಿವಸ ಮಹಾಜನ್ ವರದಿಯನ್ನು ನಾವು
ಕಾರ್ಯಗತ ಮಾಡಿದರೂ ಸಹ ನಮಗೆ ಎಲ್ಲ ಕನ್ನಡ ಭಾಗಗಳು ಬರುವುದಿಲ್ಲ, ಆದ್ದರಿಂದ ಆ ವರದಿಯನ್ನು
ಇಂಪ್ಲಿಮೆಂಟ್ ಮಾಡುವಾಗ ಬಹಳ ಜಾಗರುಕತೆಯಿಂದ ನೋಡಬೇಕಾಗಿದೆ, ಆ ವರದಿಯ ಪ್ರಕಾರ ನಮಗೆ
ಕಾಸರಗೋಡು ಬಂದರೂ ಸಹ ಕೋಟ್ಯಾಂತರ ರೂಪಾಯಿಗಳಷ್ಟು ನಮ್ಮ ರಾಜ್ಯಕ್ಕೆ ವರಮಾನ ಇರುವ
ಕನ್ನಡ ಪ್ರದೇಶಗಳು ಕೈಬಿಟ್ಟು ಹೋಗುತ್ತವೆಂಬುದನ್ನು ನಾವು ಮರೆಯಬಾರದು, ಮಹಾಜನ್ ವರದಿಯ

(ಶ್ರೀ ಬಿ.ಜಿ. ಬಣಕಾರ್)

ತಾರಕವೋ ಮಾರಕವೋ ಎಂಬುದನ್ನು ಈನೇ ಶಾಸನ ಸಭೆಯ ಸದಸ್ಯರು ವಿಚಾರ ಮಾಡಬೇಕಾಗಿದೆ. ಈ ದಿಶೆಯಲ್ಲಿ ಈ ಕನ್ನಡ ರಾಜ್ಯಕ್ಕೆ ಮತ್ತು ಕನ್ನಡ ರಾಜ್ಯದ ೩ ಕೋಟಿ ಜನತೆಗೆ ಅನ್ಯಾಯವಾಗದಂತೆ ನೋಡಿ ಕೊಳ್ಳಬೇಕಾಗಿದೆ. ಹೆಸರಿಗೆ ಹಾಲಪ್ಪ ಊಟಕ್ಕೆ ಮಾತ್ರ ಮಜ್ಜಿಗೆ ಇಲ್ಲ ಎಂಬಂತೆ ಆಗಬಾರದು. ಯಾವುದೇ ರೀತಿಯಿಂದ ಅವರು ವ್ಯವಸಾಯಗಾರರೇ ಆಗಿರಲಿ ವರ್ತಕರೇ ಆಗಿರಲಿ, ಮತ್ತೆ ಯಾವವರ್ಗದ ಜನರೇ ಆಗಿರಲಿ, ಯಾರಿಗೂ ಅನ್ಯಾಯ ವಾಗದಂತೆ, ಈ ಕನ್ನಡ ರಾಜ್ಯದ ಮೂರು ಕೋಟಿ ಜನತೆ ಶ್ರಮಿಸಬೇಕಾ ಗಿದೆ. ಇತ್ತೀಚಿನ ದಿವಸ ನಾವು ಈ ರಾಜ್ಯಕ್ಕೆ ಏನು ಒಂದು ಹೊಸ ಹೆಸರನ್ನು ಇಟ್ಟು ನಾಮಕರಣ ಮಾಡಿ ದ್ದೇವೋ, ಆ ಒಂದು ಹೆಸರಿಗೆ ತಕ್ಕಂತೆ ಇನ್ನು ಮುಂದೆ ಸತ್ಕಾರ್ಯಗಳಾಗಲಿ ಅದಕ್ಕೆ ಎಲ್ಲ ಜನತೆಯೂ ಶ್ರಮಿಸಲು ಎಂದು ಹೇಳಿ, ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಿಗೆ ವಂದಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರುಯವರಿಗೆ ಸಹ ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ ನಾನು ಮೊಟ್ಟಮೊದಲನೆಯದಾಗಿ ಈ ನಿರ್ಣಯವನ್ನು ಮಂಡಿಸಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳನ್ನು ಅರ್ಥಾತ್ ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ನಿರ್ಣಯವನ್ನು ಈ ಒಂದು ಸಂದರ್ಭದಲ್ಲಿ ಈ ಸದನದ ಮುಂದೆ ತಂದಿರತಕ್ಕ ಸಂದರ್ಭದಲ್ಲಿ ಎಲ್ಲರೂ ಈ ನಿರ್ಣಯಕ್ಕೆ ಒಕ್ಕೊರಲಿನಿಂದ ತಮ್ಮ ಒಂದು ಬೆಂಬಲವನ್ನು ಸೂಚಿಸಿದ್ದಾರೆ. ಈಗಾಗಲೇ ಈ ನಿರ್ಣಯದ ಬಗ್ಗೆ ಮಾನ್ಯ ಸದಸ್ಯರುಗಳು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಆದ್ದರಿಂದ ಒಂದೇ ಒಂದು ಮಾತನ್ನು ಹೇಳಿ ನಮ್ಮ ಭಾಷಣವನ್ನು ಮುಗಿಸುವುದಕ್ಕೆ ಸಾಧ್ಯವಿದೆ. ನಾನು ಈ ನಿರ್ಣಯ ವನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ, ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡುವುದು ಅವಶ್ಯಕ ಎನ್ನುವ ಮಾತನ್ನು ಹೇಳುವುದಕ್ಕೆ ಸಾಧ್ಯವಿದೆ. ಆದರೂ ಕೂಡ ಈ ಹೆಸರಿನ ಔಚಿತ್ಯ ಅದರ ಪ್ರಾಮುಖ್ಯತೆ, ಸಾರ್ವಜನಿಕ ಹಿತದೃಷ್ಟಿಯಿಂದ ಮೈಸೂರು ರಾಜ್ಯದ ಹಿತದೃಷ್ಟಿಯಿಂದ ಮೈಸೂರು ಎನ್ನುವ ಹೆಸರನ್ನು ಬಿಟ್ಟು ಕರ್ನಾಟಕ ಎನ್ನುವ ಹೆಸರನ್ನು ಏತಕ್ಕೆ ಇಡಬೇಕು ಎನ್ನುವ ಬಗ್ಗೆ ಮಾನ್ಯ ಸದಸ್ಯರು ಕೆಲವು ವಿಷಯ ಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೊಣಂದೂರು ಲಿಂಗಪ್ಪನವರು ಕರ್ನಾಟಕ ಸಾಹಿತ್ಯ ಕ್ಷೇತ್ರದಲ್ಲಿರತಕ್ಕ ಇಡೀ ಕವಿಪುಂಗವರ ಸರಮಾಲಿಕೆಯನ್ನೇ ಈ ಸದನದ ಮುಂದೆ ಇಟ್ಟರು. ಭಾಷೆ ಕಲೆ, ಸಾಹಿತ್ಯ ಮತ್ತು ಸಂಗೀತ ಇತ್ಯಾದಿ ಹಲವಾರು ವಿಷಯಗಳನ್ನು ಒಳಗೊಂಡಿರತಕ್ಕ ವಿಷಯಗಳನ್ನು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಮಗೆ ಒಂದು ಹೆಮ್ಮೆ ಇದೆ. ಮೈಸೂರು ರಾಜ್ಯಕ್ಕೆ ಒಂದು ಹೆಮ್ಮೆ ಇದೆ. ಇದರ ಅರ್ಥ ಬೇರೆ ರಾಜ್ಯಕ್ಕೆ ಇಲ್ಲ ಎಂದು ಅರ್ಥವಲ್ಲ. ಈಗ ತಮಿಳು ನಾಡು ತೆಗೆದುಕೊಂಡರೆ ತಮಿಳುನಾಡಿಗೆ ಒಂದು ವಿಶಿಷ್ಟವಾದ ಅರ್ಥವಿದೆ. ಮತ್ತು ಅದಕ್ಕೆ ಕೆಲವೊಂದು ವೈಶಿಷ್ಟ್ಯ ಕೂಡ ಇದೆ. ಹಾಗೇನೆ ಮಹಾರಾಷ್ಟ್ರ ಮತ್ತು ಆಂಧ್ರ ರಾಜ್ಯಗಳಿಗೂ ಕೂಡ ಒಂದು ವಿಶಿಷ್ಟವಾದ ಅರ್ಥ ಮತ್ತು ವೈಶಿಷ್ಟ್ಯ ಇದೆ. ನಮ್ಮ ರಾಜ್ಯದಲ್ಲಿ ವಿಜಯನಗರ ಸಾಮ್ರಾಜ್ಯದ ಅರಸರು, ಗೋಮಟೇಶ್ವರ, ಕಿತ್ತೂರು ರಾಣಿಚೆನ್ನಮ್ಮ ಮುಂತಾದ ಧೀರೋದಾತ್ತ ಸಾಹಸಿಗಳು ರಾಜಕೀಯ ಕ್ಷೇತ್ರ ಗಳಲ್ಲಿ ಕರ್ನಾಟಕದ ಉದ್ಧಾರಕ್ಕಾಗಿ ಹೋರಾಟ ಮಾಡಿದ್ದಾರೆ. ಮತ್ತು ತಮ್ಮ ಭವ್ಯ ಪರಂಪರೆಯನ್ನು ಈ ರಾಜ್ಯಕ್ಕೆ ಕೊಟ್ಟು ಹೋಗಿದ್ದಾರೆ. ಬೇಲೂರು ಹಳೇಬೀಡು ಇವುಗಳೆಲ್ಲವೂ ಕರ್ನಾಟಕ ಸಂಸ್ಕೃತಿಯ ಸೂಚಕಗಳಾಗಿವೆ. ಎಲ್ಲಾ ರಾಜಕೀಯ ಪಕ್ಷದ ರಾಜಕಾರಣಿಗಳೂ ಕರ್ನಾಟಕಕ್ಕಾಗಿ ಸತತವಾದ ಪ್ರಯತ್ನ ಗಳನ್ನು ಮಾಡಿವೆ. ಹಿಂದಿನಿಂದ ಅನೇಕ ಕವಿಶ್ರೇಷ್ಠರೂ ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರು ಸರಿಯಾಗಿದೆ ಎಂದು ಹೇಳಿದ್ದಾರೆ. ಇದನ್ನು ಹೆಚ್ಚು ಆಳವಾಗಿ ವಿಶ್ಲೇಷಣೆ ಮಾಡುವುದು ಅನಾವಶ್ಯಕ ಎಂದು ಕಾಣುತ್ತದೆ. ೧೯೫೬ನೇ ಇಸವಿಯಲ್ಲಿ ಪ್ರಾಂತ್ಯ ಪುನರ್ ವಿಂಗಡಣೆಯಾದಮೇಲೆ ಹಲವಾರು ಕನ್ನಡ ಭಾಗಗಳನ್ನೊಳಗೊಂಡ ಹೊಸವಿಶಾಲ ಮೈಸೂರು ರಾಜ್ಯ ಉದಯವಾಯಿತು. ಇನ್ನೂ ಕರ್ನಾಟಕಕ್ಕೆ ಸೇರ ಬೇಕಾದ ಮಡಕಶಿರ, ಕಾಸರಗೋಡು, ಅಕ್ಕಲಕೋಟೆ ತಾಳವಾಡಿ, ಫಿರ್ಕಾ, ಮುಂತಾದ ಕನ್ನಡಪ್ರದೇಶ ಗಳನ್ನು ಸೇರಿಸಿ ಕರ್ನಾಟಕ ಆಗಬೇಕೆಂಬ ಕೂಗು ಇತ್ತು. ಅದಕ್ಕಾಗಿ ಅನೇಕರು ಹಲವಾರು ಕಡೆಗಳಲ್ಲಿ ಹೋರಾಟವನ್ನು ಮಾಡಿದರು. ಕಾಸರಗೋಡನ್ನು ಮೈಸೂರಿಗೆ ಸೇರಿಸುವ ಬಗ್ಗೆ ಪ್ರಯತ್ನ ಮಾಡುತ್ತೇವೆ ಎಂದು ಕೆಲವರು ಚುನಾವಣೆಯ ಕಾಲದಲ್ಲಿ ಜನತೆಗೆ ಆಶ್ವಾಸನೆಕೊಟ್ಟು ಬಂದಿದ್ದಾರೆ. ಅವರು ಅದನ್ನು ಮರೆತರೆ ತಪ್ಪು ಮಾಡಿದಹಾಗಾಗುತ್ತದೆ. ಕಾಸರಗೋಡಿನ ವಿಚಾರವನ್ನು ಏಕೀಕರಣ ಸಮಿತಿಯವರು ಮಹಾಜನ್ ಕಮಿಷನ್‌ಮುಂದೆ ಇಟ್ಟಿದ್ದರು. ಕಾಸರಗೋಡು ಮತ್ತು ತಾಳವಾಡಿ ಫಿರ್ಕಾದವರು ಅಚ್ಚ ಕನ್ನಡಿಗರು, ಅವರು ಕರ್ನಾಟಕಕ್ಕೆ ಸೇರಲೇಬೇಕು ಈ ಬಗ್ಗೆ ರಾಜ್ಯ ಸರ್ಕಾರದವರು ಸಾಕಷ್ಟು ಗಮನವನ್ನು ಕೊಟ್ಟಿಲ್ಲ. ಆದ್ದರಿಂದ ಈ ಬಗ್ಗೆ ರಾಜ್ಯ ಸರ್ಕಾರದವರು ಸಂಬಂಧಪಟ್ಟವರೊಡನೆ ಮಾತುಕತೆ ನಡೆಸಿ ಆ ಪ್ರದೇಶವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು, ಮಹಾಜನ್ ಕಮಿಷನ್ನಿನ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ಕೊಡತಕ್ಕ ನಿಲುವನ್ನು ರಾಜ್ಯ ಸರ್ಕಾರದವರು ಹೊಂದಿದ್ದಾರೆ. ಅದರಂತೆ ಈ

ಸದನದವರು ಸರ್ವಾನುಮತದಿಂದ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದನ್ನು ಜಾರಿಗೆ ತರಬೇಕು. ಕರ್ನಾಟಕ ಎಂಬ ಹೆಸರನ್ನು ಇಟ್ಟುಕೊಳ್ಳತಕ್ಕಂಥಾ ಭರದಲ್ಲಿ ಅಥವಾ ಅತಿ ಸಂತೋಷದಲ್ಲಿ ನಾವು ನಮ್ಮ ಕರ್ತವ್ಯವನ್ನು ಮರೆಯಬಾರದು. ಸಮೃದ್ಧ ಕರ್ನಾಟಕ ಆಗಬೇಕು. ಪ್ರತಿಯೊಂದು ವಿಷಯದಲ್ಲಿಯೂ ಕೂಡ ಕರ್ನಾಟಕ ಸಮೃದ್ಧ ಬೆಳವಣಿಗೆಯನ್ನು ಪಡೆಯಬೇಕು. ಆ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಕರ್ನಾಟಕದ ಜನತೆಯ ಹಿತರಕ್ಷಣೆಗೋಸ್ಕರ ಸಮೃದ್ಧ ಕರ್ನಾಟಕ ಮಾಡುವುದಕ್ಕೆ ಕೈಹಾಕಬೇಕಾಗುತ್ತದೆ. ಅದಕ್ಕಾಗಿ ರಾಜ್ಯ ಸರ್ಕಾರದವರು ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ನಿರ್ಣಯ ಈ ಸಭೆಯಲ್ಲಿ ಪಾಸಾದಮೇಲೆ ಕಾನೂನು ಪ್ರಕಾರ ಅದು ದೆಹಲಿಗೆ ಹೋಗಿ ಅಲ್ಲಿ ಇದಕ್ಕೆ ಪಾರ್ಲಿಮೆಂಟಿನ ಅಂಗೀಕಾರ ಪಡೆದಮೇಲೆ ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಬರುತ್ತದೆ ಇದರ ಜೊತೆಗೆ ಕರ್ನಾಟಕ ಬೆಳವಣಿಗೆ ಯಾವರೀತಿ ನಡೆಯಬೇಕಾಗಿತ್ತು ಮತ್ತು ಜನತೆಗೆ ಯಾವ ಸೌಲಭ್ಯ ಸಿಕ್ಕಬೇಕಾಗಿತ್ತು ಅದು ಸಿಕ್ಕಿದೆಯೋ ಎಂಬುದನ್ನು ಕೂಡ ಯೋಚನೆ ಮಾಡಬೇಕಾಗಿದೆ ನಾವು ನೌಕರಿ ಪಡೆಯತಕ್ಕ ವಿಷಯದಲ್ಲಿ ಕೂಡ ಸಾಕಷ್ಟು ಪ್ರಯತ್ನ ಮಾಡಬೇಕಾಗಿದೆ. ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕುತ್ತಾ ಇಲ್ಲ ಕರ್ನಾಟಕ ಎನ್ನುವ ಹೆಸರು ಇಟ್ಟರೆ ಸಾಲದು. ಕೈಗಾರಿಕೆಗಳಲ್ಲಿ ಹಾಗೂ ಇನ್ನಿತರ ಎಲ್ಲಾ ಕ್ಷೇತ್ರಗಳಲ್ಲೂ ಕನ್ನಡಿಗರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕುವಂತೆ ಮಾಡಬೇಕು ಕರ್ನಾಟಕದ ಬೆಳವಣಿಗೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಸರ್ಕಾರಿ ಕ್ಷೇತ್ರದ ಕೈಗಾರಿಕೆಯಲ್ಲಾಗಲೀ ಅಥವಾ ಖಾಸಗೀ ಕ್ಷೇತ್ರದ ಕೈಗಾರಿಕೆಯಲ್ಲಾಗಲೀ ಅದರಲ್ಲಿ ೧೦೦ ಕ್ಕೆ ೯೦ ರಷ್ಟು ಕೆಲಸಗಳನ್ನು ಕನ್ನಡಿಗರಿಗೆ ಮೀಸಲಾಗಿಡಬೇಕು ಎಂದು ನಾನು ಹೇಳುತ್ತೇನೆ. ಇದರಲ್ಲಿ ಕನ್ನಡಿಗರಿಗೆ ಬೆಂಬಲಕೊಡದಿದ್ದರೆ ಕನ್ನಡಿಗರ ಬೆಳವಣಿಗೆ ಆಗುವುದಿಲ್ಲ. ಕನ್ನಡಿಗರು ಮುಂದೆ ಬರುವುದಿಲ್ಲ. ಕರ್ನಾಟಕ ಎನ್ನುವ ಹೆಸರು ಮಾತ್ರ ಆಗುತ್ತದೆ. ಆದರೆ ಉಳಿದ ವಿಷಯಗಳಲ್ಲಿ ಕನ್ನಡಿಗರು ಮುಂದೆ ಬರುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದಲ್ಲಿ ಯಾವುದಾದರೂ ಒಂದು ಭಾಗಕ್ಕೆ ಹೋದರೆ ತಮಗೆ ಗೊತ್ತಾಗುತ್ತದೆ. ಅಲ್ಲಿ ರಸ್ತೆಗಳು ಮತ್ತು ಊರುಗಳ ಹೆಸರುಗಳನ್ನು ಇಂಗ್ಲೀಷಿನಲ್ಲಿ ಹಾಕಿರತಕ್ಕದ್ದು ಒಂದೂ ಕಾಣುವುದಿಲ್ಲ. ಹಿಂದಿಯಲ್ಲಿ ಹಾಕಿರತಕ್ಕದ್ದು ಕಾಣುವುದಿಲ್ಲ. ಅಲ್ಲಿ ಎಲ್ಲಾ ರಸ್ತೆಗಳ ಮತ್ತು ಊರುಗಳ ಹೆಸರುಗಳನ್ನು ಮರಾಠಿ ಭಾಷೆಯಲ್ಲಿ ಹಾಕಿರುವುದು ಗೊತ್ತಾಗುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ಪ್ರತಿಯೊಂದು ಊರು ಮತ್ತು ರಸ್ತೆಗಳ ಹೆಸರುಗಳನ್ನು ಇಂಗ್ಲೀಷಿನಲ್ಲಿ ಹಾಕಿರುತ್ತಾರೆ. ಇದು ನಾಚಿಕೆಗೇಡು ದಯವಿಟ್ಟು ಇದನ್ನು ಕೈಬಿಡಬೇಕು. ನಮಗೆ ಸ್ವಾತಂತ್ರ್ಯ ಬಂದು ೨೫ ವರ್ಷಗಳಾದರೂ ನಮ್ಮವರಿಗೆ ಇನ್ನೂ ಇಂಗ್ಲೀಷಿನ ವ್ಯಾಮೋಹ ಹೋಗಿಲ್ಲ. ಅದಕ್ಕೋಸ್ಕರವಾಗಿ ನಾನಾದರು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಲೋಕೋಪಯೋಗಿ ಇಲಾಖೆಯವರು ಪ್ರತಿಯೊಂದು ಊರು ಮತ್ತು ರಸ್ತೆಗಳ ಬದಿಯಲ್ಲಿರತಕ್ಕ ನಾಮಫಲಕಗಳನ್ನು ಕನ್ನಡದಲ್ಲಿ ಹಾಕುವಂತೆ ವ್ಯವಸ್ಥೆ ಮಾಡಬೇಕು. ಸರ್ಕಾರಿ ಆಫೀಸುಗಳ ಹೆಸರುಗಳನ್ನೂ ಕನ್ನಡದಲ್ಲಿ ಬರೆಯಬೇಕು. ಎಲ್ಲಾ ವ್ಯವಹಾರಗಳನ್ನೂ ಕನ್ನಡದಲ್ಲಿ ಮಾಡಬೇಕು. ಎಲ್ಲಾ ಶಾಲಾ ಕಾಲೇಜುಗಳಲ್ಲಿಯೂ ಕನ್ನಡ ಮಾಧ್ಯಮವಾಗಬೇಕು ವಿಧಾನ ಸೌಧದಿಂದ ಹಿಡಿದು ಎಲ್ಲಾ ಆಫೀಸುಗಳಲ್ಲಿ ಕನ್ನಡದಲ್ಲಿ ವ್ಯವಹಾರ ನಡೆಯಬೇಕು. ಮಂತ್ರಿಗಳಿಗೆ ನಾವು ಕನ್ನಡದಲ್ಲಿ ಪತ್ರ ಬರೆದರೆ ಅವರು ನಮಗೆ ಇಂಗ್ಲೀಷಿನಲ್ಲಿ ಉತ್ತರ ಬರೆಯುತ್ತಾರೆ. ಅದು ಸರಿಯಲ್ಲ. ಅವರು ನಮಗೆ ಯಾವುದೇ ಪತ್ರವನ್ನು ಬರೆದರೂ ಕನ್ನಡದಲ್ಲಿಯೇ ಪತ್ರ ಬರೆಯಬೇಕು. ಮಂತ್ರಿಗಳೇ ನಾದರೂ ನಮಗೆ ಇಂಗ್ಲೀಷಿನಲ್ಲಿ ಪತ್ರ ಬರೆದರೆ ನಾವು ಅದನ್ನು ತೆಗೆದುಕೊಳ್ಳುವುದಿಲ್ಲ. ಆ ರೀತಿ ಮಾಡಿದರೆ ಇದು ಸರಿಹೋಗಬಹುದು ಎಂದು ನನಗೆ ಕಾಣುತ್ತದೆ ಇದೇ ಸಂದರ್ಭದಲ್ಲಿ ಕರ್ನಾಟಕ ಬೆಳವಣಿಗೆಯಾಗಬೇಕಾದರೆ ಬರೇ ಹೆಸರನ್ನು ಇಟ್ಟುಕೊಂಡರೆ ಸಾಲದು. ಕರ್ನಾಟಕದ ಪ್ರಗತಿಗೆ ಏನು ಬೇಕೋ ಅದನ್ನು ಮಾಡಬೇಕಾಗುತ್ತದೆ. ಸಂದರ್ಭ ಬಂದರೆ ರಾಜ್ಯಾಂಗಕ್ಕೆ ತಿದ್ದುಪಡಿ ಮಾಡಿಯಾದರೂ ಈ ಅಟಾನಮಿ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

೫-೩೦ ಪಿ.ಎಂ.

ಇವೊತ್ತಿನ ಸಂದರ್ಭದಲ್ಲಿ ಮಾನ್ಯ ದಿವಂಗತ ದೊಡ್ಡಮೇಟಿಯವರು ಇದ್ದಿದ್ದರೆ ಬಹಳ ಸಂತೋಷ ಪಡುತ್ತಿದ್ದರು. ಅವರು ಇಲ್ಲಿ ನನ್ನ ಪಕ್ಕದಲ್ಲಿಯೇ ಕೂತುಕೊಳ್ಳುತ್ತಿದ್ದರು. ಕನ್ನಡಕ್ಕೋಸ್ಕರ, ಕನ್ನಡದ ಏಕೀಕರಣಕ್ಕೋಸ್ಕರ ತಮ್ಮ ಜೀವಮಾನವನ್ನೇ ಮುಡಿಪಾಗಿಟ್ಟುಕೊಂಡು ದುಡಿದಂತಹ ವ್ಯಕ್ತಿ. ಅವರು ಇಂದು ಇಲ್ಲ. ಅವರು ಇರುತ್ತಿದ್ದರೆ ಅವರಿಗೆ ಇದು ಆಗುವಂತಹ ಸಂತೋಷ ಬೇರೆ ಯಾರಿಗೂ ಆಗುತ್ತಿರಲಿಲ್ಲ. ಅದೇ ರೀತಿ ಮಾನ್ಯ ದಿವಂಗತ ಗೋಪಾಲ ಗೌಡರು. ಅವರು ಕೂಡ ಹಿಗ್ಗಿನಿಂದ ಸಂತೋಷಪಡುತ್ತಿದ್ದರು. ಗೋಪಾಲಗೌಡರು ಸಹ ಕರ್ನಾಟಕವಾಗಬೇಕೆಂದು ತಮ್ಮ ಜೀವಮಾನದಲ್ಲಿ ಬಹಳವಾಗಿ ದುಡಿದಿದ್ದರು ಅವರು ಇಂದು ಇಲ್ಲದಿದ್ದರೂ ಅವರು ಬಿಟ್ಟು ಹೋದಂತಹ ಮಾರ್ಗದರ್ಶನ ನಮ್ಮ ಮುಂದೆ ಇದೆ. ಅದ

(ಶ್ರೀ ಎಸ್. ಬಂಗಾರಪ್ಪ)

ಕ್ಕೋಸ್ಕರ ನಾವೆಲ್ಲರೂ ಕಂಕಣಬದ್ಧರಾಗಿ ಕೆಲಸ ಮಾಡಬೇಕಾಗುತ್ತದೆ. ಇಷ್ಟು ಹೇಳಿ ಈ ನಿರ್ಣಯವನ್ನು ಸಂಪೂರ್ಣವಾಗಿ ಮನಪೂರ್ವಕವಾಗಿ ಅನುಮೋದಿಸುತ್ತಾ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಕರ್ನಾಟಕವೆಂಬ ನಾಮಕರಣವನ್ನು ನಮ್ಮ ರಾಜ್ಯಕ್ಕೆ ಇಡುವ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಯವರು ಒಂದು ನಿರ್ಣಯವನ್ನು ಇಟ್ಟಿದ್ದಾರೆ. ಅದಕ್ಕಾಗಿ ಮೊದಲನೆಯದಾಗಿ ಮಾನ್ಯ ಅರಸರವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ ನಿಜವಾಗಿಯೂ ಬುದ್ಧಿಶಾಲಿ ರಾಜಕಾರಣಿಗಳು ಅಂದರೆ ಮಾನ್ಯ ಅರಸರೆಂದು ಹೇಳಿದರೆ ತಪ್ಪಾಗಲಾರದು. ಇವರ ಹೆಸರು ಕರ್ನಾಟಕ ರಾಜ್ಯದ ಹೆಸರು ಎಲ್ಲಿಯ ವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಅಜರಾಮರವಾಗಿ ಮಾನ್ಯ ಅರಸರ ಹೆಸರು ಕೂಡ ಸೇರಿಕೊಂಡು ಇರುತ್ತದೆ. ಇವತ್ತು ನನ್ನಷ್ಟು, ಮಾನ್ಯ ವಾಟಾಳ್ ನಾಗರಾಜರಷ್ಟು ಮತ್ತು ಕೋಣಂದೂರು ಲಿಂಗಪ್ಪನವರಷ್ಟು ಸಂತೋಷ ಪಡುವವರು ಬೇರೆ ಯಾರೂ ಇಲ್ಲವೆಂದು ಹೇಳಬಹುದು. ನಾವೆಲ್ಲರೂ ಕನ್ನಡ ಯುವಜನ ಪಕ್ಷದಲ್ಲಿ ನಮ್ಮ ರಾಜ್ಯದ ಹೆಸರು ಕರ್ನಾಟಕವಾಗಬೇಕೆಂದು ಹೇಳತಕ್ಕಂತಹ ಹೋರಾಟದಲ್ಲಿ ಸೇರಿಕೊಂಡವರು. ಅಲ್ಲದೆ ಶಿವಮೊಗ್ಗ ಜಿಲ್ಲೆಯ ಕನ್ನಡ ಪಕ್ಷದ ಅಧ್ಯಕ್ಷನಾಗಿಯೂ ನಾನು ಕೆಲಸ ಮಾಡಿದ್ದೇನೆ. ಇಂತಹ ಒಂದು ಸಂದರ್ಭ ನನಗೆ ನೋಡುವುದಕ್ಕೆ ಸಿಕ್ಕಿದ್ದು ಬಹಳ ಸಂತೋಷದಾಯಕವಾಗಿದೆ. ಆದರೆ ಮಾನ್ಯ ಲಿಂಗಪ್ಪನವರು ಹೇಳಿದಂತಹ ಕೆಲವು ಮಾತುಗಳನ್ನು ನಾನು ಇಲ್ಲಿ ವಿರೋಧ ಮಾಡಬೇಕಾಗುತ್ತದೆ. ಮಾನ್ಯ ಲಿಂಗಪ್ಪನವರು ಕರ್ನಾಟಕದ ಅಟಾನಮಿಯನ್ನು ಕಾಪಾಡಿಕೊಳ್ಳಬೇಕು ಮತ್ತು ವಿಕೇಂದ್ರೀಕರಣಕ್ಕೆ ಹೋರಾಡಬೇಕೆಂದು ಉದ್ಧರಿಸಿದ್ದಾರೆ. ನಾನು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಕರ್ನಾಟಕ ಎಂದು ಇದ್ದರೂ ಕೂಡ ಅದು ಭಾರತ ಮಾತೆಯ ಭೂಪಟದಲ್ಲಿರತಕ್ಕಂತಹ ಒಂದು ಚಿಹ್ನೆಯಾಗಿದ್ದುಕೊಂಡು ಭಾರತದ ಜೊತೆಗೆ ಬೆಳೆದುಕೊಂಡು ಹೋಗಬೇಕಾಗುತ್ತದೆ. ಅದು ಬಿಟ್ಟು ಕರ್ನಾಟಕದ ವಿಕೇಂದ್ರೀಕರಣವಾಗಬೇಕೆಂದು ಹೇಳತಕ್ಕದ್ದು ಸರಿಯಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ವಿಕೇಂದ್ರೀಕರಣಕ್ಕೆ ಅಟಾನಮಿ ಅಥವಾ ಸ್ವತಂತ್ರ ರಾಷ್ಟ್ರವಾಗಬೇಕೆಂದು ಹೇಳತಕ್ಕವನು ನಾನಲ್ಲ.

†ಶ್ರೀ ಎಸ್.ಎಂ ಶೀರನಾಳಿ ಚಂದ್ರಶೇಖರ್ —ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಅದು ರಿಕಾರ್ಡ್ ಆಗಿದೆ. ಇವೊತ್ತಿನ ದಿವಸ ಕರ್ನಾಟಕವೆಂಬ ಹೆಸರು ಏತಕ್ಕೆ ಇಟ್ಟುಕೊಳ್ಳುವುದು ಅಂದರೆ, ನಮ್ಮ ಭಾಷೆ, ಅದು ರಾಜ್ಯಭಾಷೆಯಾದರೆ ಅದರಿಂದ ಬಹಳ ಅನುಕೂಲವಿದೆ. ನಾವು ಮಾತೃ ಭಾಷೆಯಲ್ಲಿ ಮಾತನಾಡತಕ್ಕದ್ದು ಬಹಳ ಹೃದಯ ಸ್ಪರ್ಶಿಯಾಗಿರುತ್ತದೆ. ನಮ್ಮ ಜನರೊಡನೆ ಒಡನಾಡಿ ಕಲೆತು ಬೆರೆಯುವುದಕ್ಕೆ ಬಹಳ ಸುಲಭವಾಗಿರುತ್ತದೆ. ಹೀಗೆ ಒಂದು ಭಾಷಾ ಪ್ರೇಮದಲ್ಲಿ ಈ ಹೆಸರನ್ನು ಅಪೇಕ್ಷೆ ಪಡುತ್ತಾರೆಯೇ ಹೊರತು ಬೇರೆ ದೃಷ್ಟಿಯಿಂದ ಅಲ್ಲ ಇವತ್ತು ಕರ್ನಾಟಕವಾಗಬಾರದು ಎನ್ನತಕ್ಕಂತಹ ವಾದ ಸಹ ಇದೆ. ೧೯೫೬ರಲ್ಲಿ ನಾನು ಮಾನ್ಯ ಸೂರ್ಯನಾರಾಯಣ ಗೌಡರು ಮೈಸೂರು ಕಾಲೇಜಿನಲ್ಲಿ ಓದುತ್ತಿರುವಾಗ ಇದೇ ವಿಚಾರದಲ್ಲಿ ಚರ್ಚೆ ಮಾಡುತ್ತಿದ್ದೆವು. ನಾನು ಆಗಲೂ ಕರ್ನಾಟಕವಾಗಬೇಕೆಂದು ಹೇಳುತ್ತಿದ್ದೆ. ಇವತ್ತು ಹೆಸರಿನಲ್ಲಿ ಏಕೆ ಒಂದು ಮೋಹ ಇಡುವುದು ಎಂದು ಕೆಲವರು ಹೇಳಬಹುದು. ಹೆಸರಿನಲ್ಲಿ ಏನಿದೆ ಎಂದು ಪುರಂದರದಾಸರು ಕೂಡ ಹೇಳಿದ್ದಾರೆ. ಆದರೆ ನಾನಾದರೂ ಹೇಳುತ್ತೇನೆ ನಾಮದಲ್ಲಿಯೂ ಪ್ರಾಮುಖ್ಯತೆ ಇದೆ. ಇವೊತ್ತು ಮೈಸೂರು ಎನ್ನತಕ್ಕ ಕನ್ಯೆ ೧೮ ವಯಸ್ಸಿನವಳಾಗಿದ್ದಾಳೆ. ಯಾವುದೇ ಕನ್ಯೆಗೆ ಜನ್ಮ ಕೊಟ್ಟಂತಹ ಮನೆಯಲ್ಲಿ ಒಂದು ಹೆಸರನ್ನು ಇಟ್ಟರೆ, ಮದುವೆಯಾಗಿ ಗಂಡನ ಮನೆಗೆ ಹೋದಾಗ ಅಲ್ಲಿ ಅವಳ ಹೆಸರನ್ನು ಬದಲಾವಣೆ ಮಾಡುವ ಸಂಪ್ರದಾಯ ಈಗಲೂ ಕೆಲವರಲ್ಲಿ ಇದೆ. ಮೈಸೂರಿನ ಬಗ್ಗೆಯೂ ನಮಗೆ ಅವಹೇಳನವಿಲ್ಲ. ನಮಗಂತೂ ಇಲ್ಲವೇ ಇಲ್ಲ. ಏಕೆಂದರೆ ನಾವು ನಮ್ಮ ಮೈಸೂರಿನಲ್ಲಿ ಬೆಳೆದವರು ನಮ್ಮ ಮೈಸೂರು ಗಂಧವಿದೆ, ನಮ್ಮ ಮೈಸೂರು ಅರಮನೆ ಇದೆ, ಮತ್ತು, ನಮ್ಮ ಮೈಸೂರು ಜನ ಇದ್ದೇವೆ ಎಂದು ಹೇಳತಕ್ಕವರು. ಆದ್ದರಿಂದ ನಮ್ಮ ಮೈಸೂರಿನ ಬಗ್ಗೆ ನಮಗೆ ಯಾವ ಒಂದು ಸಣ್ಣ ಅಭಿಪ್ರಾಯವೂ ಇಲ್ಲ. ಆದರೆ ಕರ್ನಾಟಕ ಎನ್ನುವ ಪದದಲ್ಲಿ ಸಹ ಯಾವ ಸ್ವಾರ್ಥವೂ ಇಲ್ಲ. ಆದರೆ ಕರ್ನಾಟಕ ಎನ್ನುವ ಪದದಲ್ಲಿ ಸ್ವಾರ್ಥವಿಲ್ಲ. ಕರ್ನಾಟಕ ಎಂಬುದು ಒಂದು ಹಳೆಯ ಸಂಸ್ಕೃತಿಯ ಪ್ರತೀಕವಾಗಿದೆ. ಮಹಾಭಾರತದಲ್ಲಿ ಕೂಡ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ಮ್ಯೂಸಿಕ್, ಕರ್ನಾಟಕ ಶಿಲ್ಪಕಲೆ, ಇತ್ಯಾದಿ ಹೇಳುವ ವಾಡಿಕೆ ಇದೆ. ಇದು ದ್ರಾವಿಡ ಸಂಸ್ಕೃತಿಯಲ್ಲಿ ಅಳವಡಿಸಿಕೊಂಡು ಬೆಳೆದುಕೊಂಡು ಬಂದಿದೆ. ಕರ್ನಾಟಕ ಸಂಸ್ಕೃತಿ ಅಂದರೆ ಅದು ಒಂದು ಮೂಲ ಸಂಸ್ಕೃತಿಯಾಗಿದೆ. ಇದರಲ್ಲಿ ತಮಿಳರು ಇರಬಹುದು ತೆಲುಗಿನವರು ಇರಬಹುದು, ಮಲೆಯಾಳಿಯವರು ಇರಬಹುದು. ಆದರೆ ಪ್ರತಿಯೊಂದು ಜನಾಂಗದವರು,

ಸಹ ಈ ಸಂಸ್ಕೃತಿಯಲ್ಲಿ ಬೆಳೆದು ಬಂದಂತಹ ಜನರು. ಆದ್ದರಿಂದ ಕರ್ನಾಟಕ ಎನ್ನತಕ್ಕಂತಹ ಶಬ್ದ ಸಂಕು ಚಿತ ಭಾವನೆಯಿಂದ ಕೂಡಿದ ಶಬ್ದವಲ್ಲ. ಇವತ್ತು ಕರ್ನಾಟಕ ಎನ್ನುವ ಹೆಸರು ಬಂತು ಎಂದು ಹೇಳಿದರೆ ಸಂತೋಷ ಪಡುವರು. ನಮ್ಮಂತಹ ಬುದ್ಧಿ ಜೀವಿಗಳು ಅಥವಾ ತಿಳುವಳಿಕೆ ಇರತಕ್ಕಂತಹ ಜನರು ಕೇವಲ ಒಂದು ೧೦ ಪರಸೆಂಟು ಇರಬಹುದು. ಆದರೆ ಉಳಿದ ೯೦ ಪರಸೆಂಟ್ ಜನ ನಮ್ಮ ದೇಶದಲ್ಲಿ ಏನಿದ್ದಾರೆ ಅವರಿಗೆ ನಮ್ಮ ರಾಜ್ಯದ ಹೆಸರು ಕರ್ನಾಟಕವೆಂದು ಇಟ್ಟರೇನು ಅಥವಾ ಬೇರೇನಾದರೂ ಇಟ್ಟರೇನು? ಅವರಿಗೆ ಯಾವ ಹೆಸರು ಇಟ್ಟರೂ ಒಂದೆ. ಅಂಥ ಜನರು ಏನಿದ್ದಾರೆ ಅವರಿಗೆ ಸಹ ನಮ್ಮ ರಾಜ್ಯದ ಹೆಸರು ಕರ್ನಾಟಕವೆಂದು ಇಟ್ಟಾಗ ಸಂತೋಷವಾಗಬೇಕು. ಆಗ ಮಾತ್ರ ನಾವು ಕರ್ನಾಟಕವೆಂದು ಹೆಸರು ಇಟ್ಟಿದ್ದಕ್ಕೆ ಸಾರ್ಥಕವಾಗುತ್ತದೆಂದು ಹೇಳುತ್ತೇನೆ. ಬೆಳಗಿನಿಂದ ಸಾಯಂಕಾಲದ ತನಕ ದುಡಿಯುವಂತಹ ೯೦ ಪರಸೆಂಟ್ ಜನರೇನಿದ್ದಾರೆ, ಅವರಿಗೆ ಯಾವ ಹೆಸರು ಇಟ್ಟರೂ ಅದರ ಗೊಡವೆ ಇರುವುದಿಲ್ಲ. ಆದ್ದ ರಿಂದ ಯಾವಾಗ ಅವರಿಗೆ ಕನ್ನಡನಾಡು ಉದಯವಾಯಿತು ಮತ್ತು ಕರ್ನಾಟಕವಾಯಿತು ಎಂದು ಸಂತೋಷ ವಾಯಿತೋ ಆಗ ನಾವು ಹೆಸರು ಕರ್ನಾಟಕವೆಂದು ಇಟ್ಟದ್ದಕ್ಕೆ ನಿಜವಾಗಿಯೂ ಸಾರ್ಥವಾಗುತ್ತದೆಂದು ಹೇಳು ವುದರಲ್ಲಿ ನಾನೂ ಒಬ್ಬ. ನಾವು ಇದೇ ರೀತಿ ಪ್ರತಿಯೊಂದು ಮಟ್ಟದಲ್ಲಿಯೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದರೆ ಮಾತ್ರ ಕರ್ನಾಟಕ ಉದಯವಾಗುತ್ತದೆಯೇ ಹೊರತು ಬರೇ ಹೆಸರಿಟ್ಟ ಮಾತ್ರಕ್ಕೆ ಆಗುವುದಿಲ್ಲ.

ಹಿಂದೆ ಕ್ರುಶ್ಚೇವ್ ರವರು ನಮ್ಮ ದೇಶಕ್ಕೆ ಬಂದಾಗ ತಾಜಮಹಲನ್ನು ನೋಡಿ, ಎಂತಹ ಕ್ರಿಮಿನಲ್ ವೇಸ್ಟ್ ಆಫ್ ಮನಿ ಎಂದು ಹೇಳಿದರಂತೆ. ಅಂದರೆ ಅವರು ಒಂದು ಕಡೆ ಜನರು ಹೊಟ್ಟೆಗಿಲ್ಲದೆ ಸಾಯುತ್ತಿ ರುವಾಗ ಇನ್ನೊಂದು ಕಡೆಯಲ್ಲಿ ಜನರ ಶೋಷಣೆ ಮಾಡಿ ಇಂತಹ ಕಟ್ಟಡ ಕಟ್ಟುವುದಕ್ಕೆ ಹೊರಟಿದ್ದಾರಲ್ಲ ಎನ್ನುವ ಅರ್ಥದಲ್ಲಿ ಹೇಳಿದ್ದಾರೆ. ಅದು ಅವರ ಭಾವನೆ ಹಾಗಿದ್ದರಿಂದ ಆ ರೀತಿ ಹೇಳಿದ್ದಾರೆ. ಇವತ್ತು ಯಾವುದೇ ವಿಚಾರವನ್ನಾಗಲಿ ನಾವು ಯಾವ್ಯಾವ ರೀತಿಯಲ್ಲಿ ತಿಳಿದುಕೊಳ್ಳುತ್ತೇವೆಯೋ ಆ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಹಾಗೆ ನಾನು ಅರ್ಥ ಮಾಡಿಕೊಂಡ ರೀತಿಯಲ್ಲಿ ಇಂದು ಬಹಳ ಸಂತೋಷ ನನಗೆ ಆಗಿದೆ. ಅದೇ ರೀತಿಯಲ್ಲಿ ಮೂರು ಕೋಟಿ ಕನ್ನಡ ಜನರು ಸಹ ಇದರ ಬಗ್ಗೆ ಸಂತೋಷ ಪಡುವ ಕಾಲ ಬರಬೇಕಾಗಿದೆ. ಮೂರು ಕೋಟಿ ಕನ್ನಡ ಜನತೆ ಸಂತೋಷ, ಸಮಾಧಾನಗಳನ್ನು ಪಡೆಯಬೇಕು, ಆಗ ಮಾತ್ರ ನಾವು ಫುಲ್ ಪ್ಲೆಜಿಡ್ ಕರ್ನಾಟಕವಾಯಿತೆಂದು ಅರ್ಥ ಮಾಡಿಕೊಳ್ಳಬಹುದು. ಇಷ್ಟು ಹೇಳಿ ಇದನ್ನು ಮಾಡಿದಂತಹ ಶ್ರೀ ಮಾನ್ಯ ದೇವರಾಜ ಅರಸರವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಹೆಸರನ್ನು ಕರ್ನಾಟಕವೆಂದು ಬದಲಾಯಿಸತಕ್ಕಂಥ ನಿರ್ಣಯವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ಈಗ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ೧೫-೧೬ ವರ್ಷ ಗಳಿಂದಲೂ ಈ ರಾಜ್ಯದ ಹೆಸರನ್ನು ಬದಲಾಯಿಸುವ ಬಗ್ಗೆ ಬಹಳ ಜಿಜ್ಞಾಸೆಯಿಂದ ಚರ್ಚೆ ನಡೆದಿದೆ. ಕೊನೆಗೆ ಒಂದು ಅಂತಿಮ ಘಟ್ಟದಲ್ಲಿ ಒಂದು ಒಮ್ಮತದ ನಿರ್ಣಯ ರೂಪದಲ್ಲಿ ಈ ಸಭೆಯ ಮುಂದೆ ಬಂದಿದೆ. ಇದು ಇಡೀ ಕರ್ನಾಟಕ ಜನತೆಗೆ ಸಂತೋಷವನ್ನುಂಟುಮಾಡುವ ವಿಷಯ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಭಾಷಾವಾರು ಪ್ರಾಂತಗಳು ಈ ದೇಶ ದಲ್ಲಿ ಆದನಂತರ ಕನ್ನಡಿಗರು ಮದ್ರಾಸಿನಲ್ಲಿ ಪರಕೀಯರಾಗುವುದು, ತಮಿಳುನಾಡಿನವರು ಮೈಸೂರಿನಲ್ಲಿ ಪರಕೀಯರಾಗುವುದು ಇಂತಹ ಸನ್ನಿವೇಶ ಮುಂದೆ ಐತಿಹಾಸಿಕ ದೃಷ್ಟಿಯಲ್ಲಿ ಬರಬಾರದು. ನಾವು ಮೊದಲಿನಿಂದಲೂ ಭಾರತೀಯರು, ಭಾರತದ ಅಭಿವೃದ್ಧಿಯಲ್ಲಿ ನಾವು ಪಾಲ್ಗೊಳ್ಳಬೇಕು. ಮೊದಲು ನಾವು ಭಾರತೀಯರಾಗಿ ಅನಂತರ ಕನ್ನಡಿಗರಾದೆವು. ಅವರು ಮದ್ರಾಸಿನವರು, ತಮಿಳರು ಎಂಬುದಾಗಿ ಅವರ ನಡೆನುಡಿಗಳನ್ನು ಬೆಳೆಸಿಕೊಂಡು ಹೋಗುವುದಕ್ಕೆ ಪ್ರಾರಂಭವಾಡಲಾಯಿತು. ಇಂದಿನಿಂದ ಮೈಸೂರು ಎಂಬ ಹೆಸರು ತೆಗೆದು ಕರ್ನಾಟಕ ಎಂಬ ಹೆಸರನ್ನು ನಾವು ಇಟ್ಟುಕೊಳ್ಳುತ್ತಿದ್ದೇವೆ. ಈ ಮೈಸೂರು ಹೆಸರು ಬಹಳ ಜನ ಇಷ್ಟಪಡತಕ್ಕ ಹೆಸರು. ಮೈಸೂರಿನ ರಾಜರು ಮೈಸೂರಿನ ಒಂದು ಕಲೆಗೆ ಮೈಸೂರಿನ ಸಂಪದಭಿವೃದ್ಧಿಗೆ ಅನೇಕ ಒಳ್ಳೆಯ ಸುಧಾರಣೆಗಳನ್ನು ದೇಶದ ಜನತೆಗೆ ಮಾಡಿಕೊಟ್ಟು, ಆದರ್ಶಪ್ರಾಯವಾದ ಮಾರ್ಗದರ್ಶನವನ್ನು ತೋರಿಸಿಕೊಟ್ಟು ಕೀರ್ತಿಯನ್ನು ಗಳಿಸಿದ್ದಾರೆ. ಇಂದೂ ಕೂಡ ಹಳೆಯ ಮೈಸೂರಿನ ಪ್ರತಿಯೊಂದು ಹಳ್ಳಿಯಲ್ಲಿಯೂ ಮಹಾರಾಜರ ವಂಶಸ್ಥರ ಬಗ್ಗೆ ಒಳ್ಳೆಯ ಭಾವನೆ ಇದೆ. ಅವರು ಮಾಡಿರತಕ್ಕ ಉತ್ತಮ ಕೆಲಸಕಾರ್ಯಗಳನ್ನು ಎಲ್ಲರೂ ಸ್ಮರಿಸಿಕೊಳ್ಳಬೇಕಾಗಿದೆ. ಆದ್ದರಿಂದ ಇನ್ನು ಮುಂದೆ ಈ ಮೈಸೂರು ಹೆಸರು ಕರ್ನಾಟಕದಲ್ಲಿ ಐಕ್ಯವಾದರೂ ಸಹ ಮಹಾರಾಜರು ಮಾಡಿರತಕ್ಕ ಕೆಲಸಗಳನ್ನು ಮೆಚ್ಚಿ ಸ್ಮರಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ.

(ಶ್ರೀ ಕೆ. ಎಚ್. ಹನುಮೇಗೌಡ)

ಇನ್ನೊಂದು ವಿಚಾರ ನನ್ನ ಮನಸ್ಸಿಗೆ ನೋವಾದುದೇನೆಂದರೆ, ಕರ್ನಾಟಕ ರಾಜ್ಯಸ್ಥಾಪನೆ ಬಗ್ಗೆ ಹಿಂದಿನ ಮುಖ್ಯಮಂತ್ರಿಗಳಾಗಿರತಕ್ಕ ಶ್ರೀಮಾನ್ ಕೆ. ಹನುಮಂತಯ್ಯನವರು ಬಹಳವಾಗಿ ಶ್ರಮಿಸಿದರು. ಕರ್ನಾಟಕ ರಾಜ್ಯವಾಗುವುದಕ್ಕೆ ಎಷ್ಟೊಂದು ರೀತಿಯಲ್ಲಿ ಮೈಸೂರು ಮುಂದುವರಿಯುವುದಕ್ಕೆ ಅವರು ಬಹಳವಾಗಿ ಕಾರಣರು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದೆಂದು ನಾನು ಹೇಳುತ್ತೇನೆ ಪ್ರತ್ಯೇಕ ಪ್ರಾಂತಗಳಾಗಿ ಹರಿದು ಹಂಚಿಹೋಗಿದ್ದ ಪ್ರದೇಶಗಳು ಒಂದುಗೂಡಿ ಕರ್ನಾಟಕ ಪ್ರಾಂತವಾಗಿ ನಮ್ಮದೇ ಆದಂಥ ಜನಗಳ ಸುಧಾರಣೆಗೆ ಅವಕಾಶ ವನ್ನು ಕಲ್ಪಿಸಿಕೊಡಬೇಕೆಂದು ಒಂದು ಒಳ್ಳೆಯ ಧ್ಯೇಯದಿಂದ ಪ್ರಯತ್ನಮಾಡಿದರು. ಅವರ ಆ ಒಂದು ಪ್ರಯತ್ನದ ಸಂಕೇತವಾಗಿ ಈಗ ಅವರು ಅಧಿಕಾರವನ್ನು ಕಳೆದುಕೊಂಡರು. ಇದು ಬಹಳ ದುರ್ದೈವ ವಾದ ಸಂಗತಿ. ಸ್ವಾತಂತ್ರ್ಯ ಬಂದು ೨೫ ವರ್ಷಗಳು ಆದುವು. ಈಗ ಸ್ವಾತಂತ್ರ್ಯದ ರಜತಮಹೋತ್ಸವ ವನ್ನು ನಾವು ಆಚರಿಸುತ್ತಿದ್ದೇವೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಮಾನ್ಯ ಶ್ರೀ ಹನುಮಂತಯ್ಯನವರು ಬಹಳವಾಗಿ ಶ್ರಮಿಸಿದ್ದಾರೆ. ಅವರು ಈ ದೇಶದ ಸ್ವಾತಂತ್ರ್ಯಕ್ಕೋಸ್ಕರವಾಗಿ ಎಷ್ಟರಮಟ್ಟಿಗೆ ಹೋರಾಡಿ ದ್ದಾರೆಂಬುದನ್ನು ನಾನು ಬಹಳ ಹೆಮ್ಮೆಯಿಂದ ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ಕೇಳಿ ತಿಳಿದುಕೊಳ್ಳು ತ್ತಿದ್ದೆ. ಅಂತಹ ಒಬ್ಬ ಮಹಾವ್ಯಕ್ತಿ ಹಳ್ಳಿಯ ರೈತನ ಮನೆಯಲ್ಲಿ ಹುಟ್ಟಿದಂಥ ಮನುಷ್ಯ ಈ ರಾಜ್ಯದಲ್ಲಿ ಬಹಳ ಉನ್ನತಮಟ್ಟಕ್ಕೆ ಬಂದರು. ಈಗ ೨೫ ವರ್ಷಗಳ ಸ್ವಾತಂತ್ರ್ಯ ಮಹೋತ್ಸವವನ್ನು ಈ ದೇಶದಲ್ಲಿ ಆಚರಿಸುವ ಸಂದರ್ಭದಲ್ಲಿ, ಅದರಲ್ಲಿಯೂ ಕರ್ನಾಟಕವೆಂದು ಈ ರಾಜ್ಯದ ಹೆಸರನ್ನು ಬದಲಾಯಿಸಿ ನಕ್ಕು ನಲಿದಾಡುವ ಸಂದರ್ಭದಲ್ಲಿ, ಈ ಹೆಸರು ಬಹಳ ವರ್ಷ ಚಿರಾಯುವಾಗಿ ಉಳಿಯಲಿ ಎಂದು ಹೇಳುವಾಗ ಬಹಳ ನೊಂದ ಮನಸ್ಸಿನಿಂದ ಅವರು ಮನೆ ಸೇರುವ ಘಟನೆ ಬಂದಿತಲ್ಲಾ ಎಂದು ನಾನು ಬಹಳ ದುಃಖ ದಿಂದ ಹೇಳುತ್ತೇನೆ. ನಾನು ಬೇರೆ ಪಾರ್ಟಿಯಲ್ಲಿದ್ದು ನನ್ನ ಕ್ಷೇತ್ರದಲ್ಲಿ ಅವರ ಪಾರ್ಟಿಯ ಪರವಾಗಿ ಚುನಾವಣೆಯ ಪ್ರಚಾರ ಮಾಡಿದ್ದರೂ ಅದು ರಾಜಕೀಯ ಪ್ರಶ್ನೆಯಾಯಿತು. ಎಲ್ಲಕ್ಕಿಂತಲೂ ಹೆಚ್ಚಾಗಿ ಮಾನ್ಯ ಶ್ರೀ ಹನುಮಂತಯ್ಯನವರ ಸೇವೆಯ ಬಗ್ಗೆ ಒಳ್ಳೆಯ ಪಾರ್ಟಿಯ ಲೆವೆಲ್ ಬಿಟ್ಟು ಇನ್ನೂ ಮೇಲಕ್ಕೆ ಹೋದಾಗ ಅವರ ಸೇವೆಯನ್ನು ಸಮರ್ಥನೆ ಮಾಡುವುದು ಬಹಳ ಒಳ್ಳೆಯದು. ಈ ವಿಧಾನಸೌಧ ದಂಥ ಭವ್ಯ ಕಟ್ಟಡದ ನಿರ್ಮಾಣ ಮಾನ್ಯ ಶ್ರೀ ಹನುಮಂತಯ್ಯನವರ ದೂರದರ್ಶಿತ್ವದಿಂದಲೇ ಎಂದು ಹೇಳಬಹುದು. ಅವರ ಒಂದು ಶ್ರಮದಿಂದ ಇದು ಆದುದು. ಅವರು ಆರ್ಟ್ಸ್‌ನಲ್ಲಿ ತುಂಬಾ ಕೀರ್ತಿ ಗಳಿಸಿದಂಥ ವಿದ್ಯಾರ್ಥಿಯಾಗಿದ್ದರು. ಇಂತಹ ಮಹಾವ್ಯಕ್ತಿ ಇಡೀ ಮೂರು ಕೋಟಿ ಜನಗಳ ಮುಂದೆ ನೊಂದ ಮನಸ್ಸಿನಿಂದ ಮನೆ ಸೇರಬೇಕಾದ ಪ್ರಸಂಗ ಬಂತು ಎಂಬುದಾಗಿ ನಾನು ಹೇಳುತ್ತಿದ್ದೇನೆ. ಹಳ್ಳಿ ಯವರೂ ಸಹ ಈ ಪ್ರಸಂಗವನ್ನು ಕೇಳಿದ್ದಾರೆ. ಮಾನ್ಯ ಶ್ರೀ ಹನುಮಂತಯ್ಯನವರು ತುಂಬಾ ದಕ್ಷ ಆಡಳಿತಗಾರರು. ಈ ದೇಶದಲ್ಲಿ ಅವರ ಹೆಸರು ಕೇಳದವರೇ ಇಲ್ಲ. ಈಗ ತಕ್ಷಣ ಅವರು ವಿನಾಕಾರಣ ಮನೆ ಏಕೆ ಸೇರಿದರು, ಅವರನ್ನು ಕೆಲಸದಿಂದ ಏಕೆ ತೆಗೆದುಹಾಕಿದರೆಂದು ಅನೇಕರು ಪ್ರಶ್ನೆ ಹಾಕಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೆ ಅರ್ಜಿ ಕೊಡಬೇಕೆಂದು ಹೇಳಿ.

ಶ್ರೀ ಕೆ. ಎಚ್. ಹನುಮೇಗೌಡ : ಅವರಿಂದ ನಮ್ಮ ದೇಶಕ್ಕೆ ಬಹು ದೊಡ್ಡ ಕೆಲಸವಾಗಿದೆ. ಈ ನಮ್ಮ ಸಭೆ ನಡೆಯುತ್ತಿರುವ ಈ ಭವ್ಯವಾದಂಥ ಭವನ ವಿಧಾನಸೌಧ ಕಟ್ಟಡವನ್ನು ಕಟ್ಟಿಸಲು ಅವರ ಬಹಳ ವಾಗಿ ಶ್ರಮಪಟ್ಟಿರುವುದರಿಂದ, ಅವರನ್ನು ಸದಾ ಕಾಲವೂ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯ. ಈ ಮಾತನ್ನು ನಾನು ಯಾವ ವೈಯಕ್ತಿಕವಾದ ಕಾರಣದಿಂದ ಹೇಳುತ್ತಾ ಇಲ್ಲ ಈ ಸಂದರ್ಭದಲ್ಲಿ ಅವರೂ ಸಹ ಒಂದು ಅಧಿಕಾರ ಸ್ಥಾನದಲ್ಲಿದ್ದಿದ್ದರೆ ನನಗೆ ಬಹಳವಾಗಿ ಸಂತೋಷವಾಗುತ್ತಾ ಇತ್ತು. ಇನ್ನೊಂದು ವಿಷಯ, ಅಂತಹ ಒಬ್ಬ ಮಹಾನಾಯಕ ಇಂತಹ ಆಗುಹೋಗುಗಳಲ್ಲಿ ಭಾಗಿಯಾಗಿ ವಿನಾಕಾರಣ ಮನೆಗೆ ಬಂದಾಗ ಆಡಳಿತ ಕಾಂಗ್ರೆಸ್ಸಿನವರು ಕೇಂದ್ರ ಸರ್ಕಾರದಲ್ಲಿ ಅದರಲ್ಲಿಯೂ ರಾಜ್ಯ ಸರ್ಕಾರದ ಪರವಾಗಿ ಅಲ್ಲಿರುವವರು ಅವರ ಬಗ್ಗೆ ಒಂದು ಮಾತನ್ನೂ ಆಡದೆ ಅವರನ್ನು ತೆಗೆದರೆ, ಅವರನ್ನು ನಿಸ್ಸ ಹಾಯಕರಾಗಿ ತೆಗೆದಿದ್ದಾರೆಂದು ತೋರುತ್ತದೆ. ಅಲ್ಲಿ ಏನು ಪರಿಸ್ಥಿತಿಯಾಗಿದೆಯೋ ಅದೀಗ ನಮ್ಮ ಒಂದು ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ! ಇದು ಪ್ರಜಾಪ್ರಭುತ್ವ. ಪ್ರತಿಯೊಬ್ಬನಿಗೂ ಇದೀಗ ಅದು ಕಾಣಿಸುತ್ತಿದೆ. ಅದನ್ನು ಈಗ ಹೇಳುವ ಅವಕಾಶ ಆಗುವುದಿಲ್ಲ ಪ್ರಜಾಪ್ರಭುತ್ವ ಇರುವ ದೇಶ ದಲ್ಲಿ ಕಮ್ಯೂನಿಸ್ಟ್ ದೇಶದಲ್ಲಿ ಮಾಡುವ ಹಾಗೆ ಅಧಿಕಾರಿಗಳನ್ನು ಅವರ ಇಷ್ಟಪ್ರಕಾರ ತರುವುದು, ತೆಗೆಯುವುದು—ಈ ರೀತಿ ಮಾಡುತ್ತಾ ಇದ್ದರೆ, ಈ ದೇಶದಲ್ಲಿ ಮುಂದೆ ಡೆಮೊಕ್ರಸಿ ಏನು ಆಗುತ್ತದೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ .—ಮಾನ್ಯ ಸದಸ್ಯರಿಗೇನಾದರೂ ಜಮೀನು, ಸ್ವತ್ತು ಇದೆಯೇ ? ಏನೋ ಇರಬೇಕು,

ಶ್ರೀ ಕೆ. ಎಚ್. ಹನುಮೇಗೌಡ .—ನನಗೆ ಗೊತ್ತಿರುವ ವಿಷಯವನ್ನು ನಾನು ಇಲ್ಲಿ ಹೇಳುತ್ತೇನೆ. ಒಳ್ಳೆಯ ವಿಷಯವಿದ್ದರೆ ನಾನು ಸ್ವಾಗತಿಸುತ್ತೇನೆ. ಒಬ್ಬ ಮುಖ್ಯಮಂತ್ರಿಯಾಗಿದ್ದವ ಮನೆಗೆ ಬರುವುದು, ಹೋಗುವುದು ಅಂದರೆ ಏನು ? ಇಂತಹ ಕಣ್ಣುಮುಚ್ಚಾಲೆ ಮಾಡಬಾರದು. ಮಾನ್ಯ ಶ್ರೀ ಹನುಮಂತಯ್ಯನವರು ಕಮ್ಯೂನಿಸ್ಟ್ ದೇಶಗಳ ಬಗ್ಗೆ ದುರಭಿಪ್ರಾಯ ಹೊಂದಿದ್ದಾರೆಂದು ನಾನು ಹೇಳುತ್ತಾ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್ .—ಕಮ್ಯೂನಿಸ್ಟ್ ರಾಷ್ಟ್ರದಲ್ಲಿ ಏನಿದೆಯೆಂಬುದನ್ನು ಅವರು ಬೇಕಾದರೆ ನೋಡಿಕೊಂಡು ಬರಲಿ.

ಶ್ರೀ ಕೆ. ಎಚ್. ಹನುಮೇಗೌಡ .—ಒಳ್ಳೆಯ ವಿಷಯಗಳನ್ನು ಮೆಚ್ಚುವುದರಲ್ಲಿ ನಾನೂ ಒಬ್ಬ. ಈ ದೇಶದಲ್ಲಿ ಬಡವರಿಗೆ, ರೈತರಿಗೆ, ಕೂಲಿಗಾರರಿಗೆ ಅನುಕೂಲಮಾಡಿಕೊಡುವ ಹಾಗೆ ಪ್ರಯತ್ನಮಾಡುವವರಲ್ಲಿ ನಾನೂ ಒಬ್ಬ. ಇದರಲ್ಲಿ ನಿರ್ವಿವಾದ ಏನೂ ಇಲ್ಲ. ನಮ್ಮಲ್ಲಿರತಕ್ಕ ಆಸ್ತಿಪಾಸ್ತಿ ಏನಿದೆಯೋ ಅದನ್ನು ನಾನು ವಿವರವಾಗಿ ಕೊಡುವುದಕ್ಕೆ ತಯಾರಾಗಿದ್ದೇನೆ. ನಾನು ಈ ವಿಷಯವನ್ನು ಸೋಷಿಯಲಿಸ್ಟ್ ಪಾರ್ಟಿ ಅಥವಾ ಕಮ್ಯೂನಿಸ್ಟ್ ಪಾರ್ಟಿಗೆ ವಿರೋಧವಾಗಿ ಹೇಳುತ್ತಾ ಇಲ್ಲ. ಅವರು ಮಾಡಿರುವ ಒಳ್ಳೆಯ ಕೆಲಸಗಳ ಬಗ್ಗೆ ಈಗಲೂ ನನ್ನ ಸ್ವಾಗತವಿದೆ. ಅಲ್ಲಿ ಏನು ನಡೆಯುತ್ತಿದೆಯೋ ಅದೇ ರೀತಿಯಲ್ಲಿ ಈಗ ಈ ದೇಶದಲ್ಲಿಯೂ ನಡೆಯುತ್ತಿದೆ. ಇದು ಆಗಬಾರದು. ಈಗಲೂ ಕಾಲ ಮಿಂಚಿಲ್ಲ ಅಂತಹ ಒಬ್ಬ ನಾಯಕನನ್ನು ವಿನಾ ಕಾರಣ ಮನೆಗೆ ಕಳುಹಿಸಿರುವ ಕಾರಣವಾದರೂ ಏನೂ ? ಜನಗಳಿಗೆ ಇದರಿಂದ ಅವರಲ್ಲಿದ್ದ ನಂಬಿಕೆಯೇ ಹೊರಟುಹೋಗುತ್ತದೆ. ಆದ್ದರಿಂದ ಸಕಾಲದಲ್ಲಿ ಈ ವಿಚಾರ ಮಾಡದೇ ಇರುವುದರಿಂದ ಈ ರೀತಿ ಆಗಿದೆ ಎನ್ನುವ ಸಂಗತಿಯನ್ನು ಕೇಂದ್ರ ಸರ್ಕಾರಕ್ಕೆ ಸರ್ಕಾರದವರು ತಿಳಿಸಬೇಕೆಂದು ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ನಾನು ಇನ್ನೊಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. : ಈಗ ಕರ್ಣಾಟಕ ರಾಜ್ಯ ಸ್ಥಾಪನೆಯಾಗುತ್ತಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ, ಇದು ಬಹಳ ಸಂತೋಷದ ಸುದ್ದಿ. ಆದರೆ ಹೀಗೇ ದೇಶದಲ್ಲಿರತಕ್ಕ ಮೂರೂವರೆ ಕೋಟಿ ಜನರಿಗೆ ಅನುಕೂಲವಾಗತಕ್ಕಂಥ ಹಾಗೂ ಅವರೇನು ಸಹಾಯ ಸಹಕಾರಗಳನ್ನು ಸರ್ಕಾರದವರಿಂದ ನಿರೀಕ್ಷಿಸುತ್ತಿದ್ದಾರೆ. ಆ ಸಹಾಯವನ್ನು ಅಂದರೆ ಒಂದು ಶುದ್ಧವಾದ ಆಡಳಿತವನ್ನು ದೇಶಕ್ಕೆ ಒದಗಿಸಿ, ಅದು ಇಲ್ಲಿಯವರೆಗೂ ಇನ್ನೂ ಆಗಿಲ್ಲ. ಶ್ರೀಮಾನ್ ದೇವರಾಜ ಅರಸಿನವರು ರಾಜ ಮನೆತನಕ್ಕೆ ಸೇರಿದವರು. ರಾಜಮನೆತನದವರಾದರೋ ದೇಶದಲ್ಲಿ ಅನೇಕ ಉತ್ತಮವಾದ ಕೆಲಸ ಕಾರ್ಯಗಳನ್ನು ಮಾಡಿಸಿ ಅವರು ಈ ದಿವಸ ದೇಶದ ಜನಮನದಲ್ಲಿ ಸ್ಥಿರವಾಗಿ ನೆಲೆಸಿದ್ದಾರೆ. ತಾವೂ ಕೂಡ ಹಾಗೇ ಸ್ಥಿರವಾಗಿ ನೆಲೆಸುವುದಕ್ಕೆ ಒಳ್ಳೆಯ ಕೆಲಸಗಳನ್ನು ಮಾಡಿ, ರಾಜ್ಯದಲ್ಲಿ ರಾಜಧಾನಿಯಿಂದ ಹಿಡಿದು ಗ್ರಾಮಪಂಚಾಯಿತಿಗಳ ವರೆಗೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ನಿವೇದನೆ ಮಾಡಿಕೊಂಡು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಬಾಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಣಿಯರೇ, ಈ ದಿವಸ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಗೊತ್ತುವಳಿಯನ್ನು ಸಭೆಯ ಮುಂದೆ ಮಂಡಿಸಿದುದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನರ್ಪಿಸುತ್ತೇನೆ ; ಹಾಗು ನಾನು ಇದನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಈ ಗೊತ್ತುವಳಿಯಿಂದ ಇಡೀ ದಕ್ಷಿಣಾತ್ಯ ಸಂಸ್ಥಾನಗಳಲ್ಲಿರತಕ್ಕ ಜನರಿಗೆಲ್ಲಾ ಬಹಳ ಆನಂದವಾಗಿದೆ. ಈ ಹಿಂದೆ ದಕ್ಷಿಣ ಭಾರತದ ಸಣ್ಣ ಸಣ್ಣ ಸಂಸ್ಥಾನಗಳ ಆಡಳಿತಕ್ಕೊಳಪಟ್ಟಿದ್ದ ಜನರೇನಿದ್ದರು ಅವರು ಒಂದು ಕಡೆ ಮರಾಠಿಯವರು ಮತ್ತು ಮರಾಠಿ ಭಾಷೆಯಿಂದಲೂ ಇನ್ನೊಂದು ಕಡೆಯಿಂದ ಇಂಗ್ರೇಜಿ ಭಾಷೆಯವರಿಂದಲೂ ಹೀಗೆ ಇವರಿಬ್ಬರ ತುಳಿತದಲ್ಲಿ ಕನ್ನಡ ಭಾಷೆ ಹಾಗೂ ಕನ್ನಡಿಗರ ಭವಿಷ್ಯ ನಶಿಸಿಹೋಗಿತ್ತು.

ದಿವಸ ಹಿಂದೆ ಒಂದಾನೊಂದು ಕಾಲದಲ್ಲಿ ಹರಿದು ಹಂಚಿ ಹೋಗಿದ್ದ ಕರ್ನಾಟಕ ಕನ್ನಡ ಭಾಗಗಳು ಏನಿದ್ದವು ಅವುಗಳನ್ನು ಒಂದು ಗೂಡಿಸಿ ಮತ್ತೆ ಅವುಗಳಿಗೆ ಒಂದು ಜೀವಕಳೆಯನ್ನು ಕೊಡಲು ಹೊರಟಿರತಕ್ಕ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯವನ್ನು ನಾವು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾಗಿದೆ. ಹಿಂದೆ ನಾವು ಒಂದಾನೊಂದು ಕಾಲಕ್ಕೆ ಜಮಖಂಡಿ ಸಂಸ್ಥಾನಕ್ಕೆ ಸೇರಿಕೊಂಡಿದ್ದಾಗ ನಾವು ಸ್ಲೇವರಿಯಲ್ಲಿ ತಲೆ ಎತ್ತುವುದಕ್ಕಾಗುತ್ತಿರಲಿಲ್ಲ. ಅಂಥ ಒಂದು ಕಷ್ಟಕಾಲದಲ್ಲಿ ನಮಗೆ ಆ ಸೆರೆಯನ್ನು ತಪ್ಪಿಸಲು ಮತ್ತು

(ಶ್ರೀ ಪಿ. ಎಂ. ಬಾಂಗಿ)

ನಮಗೆ ಈ ಸ್ವಾತಂತ್ರ್ಯ ಜಯಭೇರಿಯನ್ನು ಹೊಡೆಯಲು ಬಹಳವಾಗಿ ಶ್ರಮಿಸಿದಂಥ ಆಂದಾನಪ್ಪ ದೊಡ್ಡ ಮೇಟಿ ಅವರನ್ನು ನಾನು ಸ್ಮರಿಸಬೇಕಾಗಿದೆ. ಅಷ್ಟೇ ಅಲ್ಲದೆ ಅವರು ರಾಜ್ಯಕ್ಕೆ 'ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ಸತತವಾಗಿ ಶ್ರಮಿಸುತ್ತಿದ್ದರು. ಆದರೆ ಅವರ ಆ ಶ್ರಮದ ಜಯಭೇರಿ ಇಂದು ಸಭೆಯಲ್ಲಿ ಮೊಳಗುತ್ತಿದೆ. ಇಂಥ ಒಂದು ಶುಭ ವೇಳೆಯಲ್ಲಿ ನಾನು ಆ ವೀರ ದೊಡ್ಡ ಮೇಟಿಯನ್ನು ಸ್ಮರಿಸಲೇ ಬೇಕಾಗಿದೆ.

೧೯೫೬ರಲ್ಲಿ ಹಿಂದೆ ಹರಿದು ಹಂಚಿಹೋಗಿದ್ದ ಕರ್ನಾಟಕ ನವಂಬರ್ ೧೯೫೬ ೧ ರಂದು ಮತ್ತೆ ಒಂದು ಗೂಡಿತು. ಆದರೆ ಆ ದಿವಸ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಕರೆಯಲಿಲ್ಲ. ಅಂದು ಒಂದಕ್ಕೆ ಗೂಡಿದ ಜನರೆಲ್ಲರಲ್ಲಿ ಇನ್ನೂ ಭಾವೈಕ್ಯತೆ ಉಂಟಾಗಿದ್ದಿಲ್ಲ ಎಂದು ಅದನ್ನು ಹಿಂದೂಡಿದ್ದರು. ಆದ್ದರಿಂದ ಅದಕ್ಕೆ ಈ ದಿವಸ ಸಮಯ ಸನ್ನಿಹಿತವಾಗಿದೆ. ಇದನ್ನು ಅರಿತ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ತಮ್ಮ ಧಿಟ್ಟ ಹೆಜ್ಜೆಯನ್ನು ಮುಂದಿಟ್ಟಿದ್ದಾರೆ. ಇದರ ಶ್ರೇಯಸ್ಸು ಕೀರ್ತಿಗಳೆಲ್ಲ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲುತ್ತವೆ. ಶ್ರೀ ದೇವರಾಜರ ಹೆಸರು ಅಜರಾಮರವಾಗಿ ಉಳಿಯುವಂತೆ ಭಗವಂತನು ಅನುಗ್ರಹಿಸಲೆಂದು ಹಾರೈಸುತ್ತೇನೆ. ಹಿಂದೆ ಭಗವದ್ಗೀತೆಯಲ್ಲೂ ಕೂಡ ಶ್ರೀ ಕೃಷ್ಣ ಪರಮಾತ್ಮನು ಶಿಷ್ಯನಾದ ಅರ್ಜುನನಿಗೆ ಹೀಗೇ ಹೇಳಿದ್ದನು. 'ಎಲೈ ಅರ್ಜುನ ನೀನು ನಾಮ ಮಾತ್ರಕ್ಕೆ ಇರು ಸಮಯ ಸನ್ನಿಹಿತವಾತ ಕೂಡಲೆ ನಾನು ನಿನಗೆ ಆಜ್ಞೆಯನ್ನು ಕೊಡುತ್ತೇನೆ ಆಗ ನೀನು ಧೈರ್ಯದಿಂದ ಧಿಟ್ಟ ಹೆಜ್ಜೆಯನ್ನಿಡು ನಿನಗೆ ಜಯವಾಗುತ್ತದೆ" ಎಂದು ಈಗಿನ ಈ ಒಂದು ಸಂದರ್ಭದಲ್ಲೂ ಕೂಡ ಹಿಂದೆ ಹರಿದು ಹಂಚಿ ಹೋಗಿದ್ದ ಕರ್ನಾಟಕದ ಕನ್ನಡ ಭಾಗಗಳನ್ನು ಮತ್ತೆ ಒಂದು ಗೂಡಿಸಿ ಅದಕ್ಕೆ ಜೀವ ಕಳೆಯನ್ನು ತುಂಬುಲು ಹೊರಟಿರತಕ್ಕ ನಮ್ಮ ಮಾನ್ಯ ಮಂತ್ರಿಗಳಿಗೆ ನಾನೆಷ್ಟು ಧನ್ಯವಾದಗಳನ್ನರ್ಪಿಸ ಬೇಕೋ ತಿಳಿಯಂದಾಗಿದೆ.

ಇನ್ನು ಕೆಲವರು ಇದೇ ಸಂದರ್ಭದಲ್ಲಿ ಹೆಸರಿನಲ್ಲಿ ಏನಿದೆ ಎಂದು ಕೇಳುತ್ತಿದ್ದಾರೆ ? ಯಾವುದೊಂದಕ್ಕೇ ಆಗಲಿ 'ನಾಮ—ರೂಪ' ಈ ಎರಡಕ್ಕೂ ಬಹಳ ಪ್ರಾಮುಖ್ಯತೆ ಇದೆ. ಮತ್ತು ಹತ್ತಿರದ ಸಂಬಂಧವಿದೆ. ಹಿಂದೆ ೧೯೫೬ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಗ ಕಾಲಕ್ಕೆ ನಮ್ಮ ರಾಜ್ಯಕ್ಕೆ ಒಂದು ಹಿಂದಿನ ರೂಪು ಬಂದಿತ್ತು. ಆದರ ಅದಕ್ಕೆ ತಕ್ಕ ಹೆಸರು ಮಾತ್ರ ಬಂದಿರಲಿಲ್ಲ. ಆ ಹೆಸರು ಈಗ ಬರುತ್ತಿದೆ. ಅದರ ಗೊತ್ತುವಳಿಯನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳೇ ಮಂಡಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ತುಂಬಾ ಅಭಾರಿಯಾಗಿದ್ದೇನೆ.

ಇನ್ನು ಈ ದಿವಸ ಸಭಾಧ್ಯಕ್ಷತೆಯನ್ನು ವಹಿಸರತಕ್ಕ ಮಾನ್ಯ ಅಧ್ಯಕ್ಷಣಿಯರಾದ ರೋ ಸಾಕ್ಷಾತ್ 'ಅಕ್ಕಮಹಾದೇವಿಯಂತೆ' ಅಧ್ಯಕ್ಷ ಪೀಠದಲ್ಲಿ ವಿರಾಜಿಸುತ್ತಿದ್ದಾರೆ. ಅವರು ಈ ಸಂದರ್ಭದಲ್ಲಿ ನನಗೆ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

CALLING ATTENTION TO MATTERS OF URGENT PUBLIC : IMPORTANCE

(i) Re :— Criminal assault on a woman in Police Lock-up at Aurad Barahalli Police Station.

SRI V. N. PATIL (Humnabad) :— Sir, I beg to call the attention of the Chief Minister to the Criminal assault on a woman in the Police Lock-up at Aurad Barahalli Police Station

SRI D. DEVARAJA URS (Chief Minister) :— One Balamma wife of Bairam of Chickli village is accused in Kushnur police station crime No. 12/72 under sections 302 and 309 I.P.C. She is in judicial custody